BROWEN BOOK ONLY

THE BOOK WAS DRENCHED

TEXT FLY WITHIN THE BOOK ONLY

UNIVERSAL LIBRARY
OU_198171
UNIVERSAL LIBRARY

OSMANIA UNIVERSITY LIBRARY

Call No. K83.1 K92K Accession No. G1K.77

Author B.

Title 1922

This book should be returned on or before the date last marked below.

ಕರ್ಣಾಟಕಗ್ರಂಥಮಾಲೆ—೧೦೬

ಕನಕೋಪಾರ್ಜನ

(ಯವನಪುರಾಣ ಕಥಾವಳಿ-೧)

ಮೈಸೂರು :
ಜಿ. ಟಿ. ಎ. ಮುದ್ರಾಲಯ,
೧೯೨೨.

ಪೀಠಿಕೆ.

ಕರ್ಣಾಟಕಗ್ರಂಥಮಾಲೆಯಲ್ಲಿ ಪ್ರಕಟವಾಗುವ ಗ್ರಂಥಗಳಲ್ಲಿ ಪ್ರೌಢೋಪಯುಕ್ತವಾದ ಪುಸ್ತಕಗಳು ಮಾತ್ರವಲ್ಲದೆ ಅಕ್ಷರಜ್ಞರಾದ ಸ್ತ್ರೀಯರೂ ಬಾಲರೂ ಓದಬಹುದಾಗಿಯೂ, ತಕ್ಕಮಟ್ಟಿಗೆ ಸುಲಭವಾಗಿಯೂ, ವಿನೋದಕರವಾಗಿಯೂ ಇರುವ ಪುಸ್ತಕಗಳೂ ಸೇರುವುವೆಂಬುದಕ್ಕೆ ನಿದರ್ಶನರೂಪವಾಗಿ "ಕನಕೋಪಾರ್ಜನ" ವೆಂಬ ಈ ನವೀನ ಗ್ರಂಥವನ್ನು ಪ್ರಕಟಿಸಲಾಗಿದೆ. ಭಾರತೀಯರಲ್ಲಿ ರೂಢಿಯಾಗಿರುವ ಪುರಾಣಕಥೆಗಳಂತೆಯೇ ಗ್ರೀಕರಲ್ಲಿಯೂ ಅನೇಕ ಪೌರಾಣಿಕ ಕಥೆಗಳು ಪ್ರಚಾರದಲ್ಲಿದ್ದುವು. ಇವನ್ನು ಪಾಶ್ಚಾತ್ಯರು ತಮ್ಮತಮ್ಮ ಭಾಷೆಗಳಲ್ಲಿ ರಚಿಸಿಕೊಂಡಿರುವರು. ತಕ್ಕಮಟ್ಟಿಗೆ ವಿದ್ಯಾವಂತರಾಗಿರುವ ಪಾಶ್ಚಾತ್ಯರುಗಳಲ್ಲಿ ಇಂತಹ ಹಲವು ಕಥೆಗಳನ್ನು ತಿಳಿಯದಿರುವವರೇ ಅಪೂರ್ವ. ಕನ್ನಡ ಭಾಷೆಯಲ್ಲಿಯೂ ಇಂತಹ ನಾಲ್ಕೈದು ಕಥೆಗಳು ರಚಿತವಾಗಿದ್ದರೂ ಅವಕ್ಕೆ ಭಾರತೀಯ ವೇಷವನ್ನು ಹಾಕಿಬಿಟ್ಟಿರುವುದರಿಂದ ಪ್ರಾಯಶಃ ಅನೇಕರು ಅವನ್ನು ಗ್ರೀಕರ ಕಥೆಗಳೇ ಎಂದು ಗುರುತಿಸಲಾರರು. ಇಂಗ್ಲೀಷನ್ನು ಅರಿಯದಿರುವ ಕನ್ನಡಿಗರಿಗೂ ಗ್ರೀಕರ ಪೌರಾಣಿಕ ಕಥೆಗಳನ್ನು ಯಥಾವತ್ತಾಗಿ ಪರಿಚಯಮಾಡಿಸಿ ಕೊಡಬೇಕೆಂಬ ಉದ್ದೇಶದಿಂದ ಪುರಾತನ ಗ್ರೀಕರಿಗೆ ಸಹಜವಾದ ನಾಮಧೇಯಗಳನ್ನೇ ಇರಗೊಡಿಸಿ ಈ ಕಥೆಯನ್ನು ರಚಿಸಲಾಗಿದೆ.

ಮೈಸೂರು:
೧೫-೬-೧೯೨೩.

ಸಂಪಾದಕ.

ವಿಷಯಾನುಕ್ರಮಣಿಕೆ.

ಪ್ರಕರಣಸಂಖ್ಯೆ	ಪ್ಯಾರಾಸಂಖ್ಯೆ	ವಿಷಯ	ಪುಟಸಂಖ್ಯೆ
೧	೧- ೭	ಜೇಸನ್ನಿನ ಬಾಲ್ಯ	೧- ೪
೨	೮-೧೨	ರಾಜಧಾನಿಗೆ ಜೇಸನ್ನಿನ ಪ್ರಯಾಣ ...	೪- ೬
೩	೧೩-೧೯	ತಂದೆಮಕ್ಕಳ ಭೇಟಿ	೬-೧೧
೪	೨೦-೨೫	ಪ್ರಯಾಣಸನ್ನಾಹವೂ ಪ್ರಯಾಣವೂ ...	೧೧-೧೪
೫	೨೬-೩೧	ನಾವಿಕರ ಮೊದಲನೆಯ ಸಂಮೋಹನ ...	೧೫-೧೮
೬	೩೨-೪೦	ಕನಕರೋಮದ ಪೂರ್ವವೃತ್ತಾಂತ ...	೧೮-೨೨
೭	೪೧-೪೭	ಆರುಕ್ಕೈಗಳ ರಾಕ್ಷಸರ ವೃತ್ತಾಂತ ...	೨೩-೨೮
೮	೪೮-೫೨	ಒಂದು ಘೋರಕೃತ್ಯವೂ ಪ್ರಾಯಶ್ಚಿತ್ತವೂ	೨೮-೩೧
೯	೫೩-೫೯	ನಾವಿಕರಿಗೆ ಹೆರ್ಕ್ಯುಲೀಸನ ಸಹಾಯವು ತಪ್ಪಿದುದು	೩೧-೩೪
೧೦	೬೦-೬೪	ಜಂಬಗಾರನಾದ ದಾಂಡಿಗನು ...	೩೫-೩೮
೧೧	೬೫-೭೧	ಒಬ್ಬ ನಿರ್ಭಾಗ್ಯನಾದ ದೊರೆಯ ಕಷ್ಟ ನಿವಾರಣೆ	೩೮-೪೩
೧೨	---೭೮	ಮೃತ್ಯುವಿನ ಬಾಯಿ; ಕಂಚಿನಗರಿಯ ಪಕ್ಷಿಗಳು	೪೩-೪೮
೧೩	೭೯-೮೫	ಕನಕರೋಮದ ನಾಡೂ, ಎರಡನೆಯ ಸಂಮೋಹನವೂ	೪೮-೫೪
೧೪	೮೬-೯೦	ಅದ್ಭುತವಾದ ಆರಂಬ	೫೪-೫೯
೧೫	೯೧-೯೬	ಕನಕರೋಮಾರ್ಜನವೂ ಪಲಾಯನವೂ ...	೫೯-೬೩
೧೬	೯೭-೧೦೨	ಆರ್ಗೋನಾವಿಕರು ಗ್ರೀಸಿಗೆ ಹಿಂದಿರುಗಿದುದು	೬೪-೬೯

ಕನಕೋರ್ಣಾರ್ಜನ

ಮೊದಲನೆಯ ಪ್ರಕರಣ

ಜೇಸನ್ನಿನ ಬಾಲ್ಯವು

"ಕನಕೋರ್ಣಾರ್ಜನ" ವೆಂಬ ಹೆಸರನ್ನು ಕೇಳಿದ ಕೂಡಲೆ "ಅಬ್ಬಬ್ಬ! ಎಷ್ಟು ದೊಡ್ಡ ಹೆಸರು! ಇಂತಹ ಹೆಸರುಳ್ಳ ಗ್ರಂಥವು ನಮಗೆ ತಿಳಿಯುವುದೇ?" ಎಂದು ಹೆದರಬೇಕಾಗಿಲ್ಲ. 'ಕನಕ' ಎಂದರೆ ಚಿನ್ನ; 'ಊರ್ಣಾ' ಎಂದರೆ ಉಣ್ಣೆ; 'ಅರ್ಜನ' ಎಂದರೆ ಸಂಪಾದನೆ. ಆದುದರಿಂದ ಈ ಹೆಸರಿಗೆ "ಚಿನ್ನದ ಉಣ್ಣೆಯನ್ನು ಸಂಪಾದಿಸುವುದು" ಎಂದು ಅರ್ಥವು.

೧. ಈಗ್ಗೆ ಮೂರುಸಾವಿರ ವರ್ಷಗಳಿಗೆ ಹಿಂದೆ ಗ್ರೀಸ್ ದೇಶದಲ್ಲಿ ಅನೇಕ ಶೂರರುಗಳು ವಾಸವಾಗಿದ್ದರು. ಅವರಲ್ಲಿ ಪ್ರತಿಯೊಬ್ಬನೂ ಬಹಳ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿ ಪ್ರಖ್ಯಾತನಾಗಿದ್ದನು. ಆ ಶೂರರುಗಳಲ್ಲಿ ಒಬ್ಬನಾದ ಜೇಸನ್ ಎಂಬಾತನು ಚಿನ್ನದ ಉಣ್ಣೆಯನ್ನು ಸಂಪಾದಿಸಿಕೊಂಡು ಬಂದ ವೃತ್ತಾಂತವನ್ನು ಈ ಕಥೆಯಲ್ಲಿ ವಿವರಿಸಲಾಗುವುದು.

೨. ಗ್ರೀಸಿನ ಒಂದು ಪ್ರದೇಶವಾದ ಥೆಸೆಲಿ ಎಂಬ ಪ್ರಾಂತದಲ್ಲಿ ಐಯಾಲ್ಕಾಸ್ ಎಂಬ ಪಟ್ಟಣವಿದ್ದಿತು. ಇದರಲ್ಲಿ ಏಸನ್ ಎಂಬೊಬ್ಬ ರಾಜನು ಸುಖವಾಗಿ ಆಳಿಕೊಂಡಿದ್ದನು. ಆತನಿಗೆ ಪೀಲಿಯಾಸ್ ಎಂಬೊಬ್ಬ ಬಲತಮ್ಮನೂ, ಜೇಸನ್ ಎಂಬೊಬ್ಬ ಮಗನೂ ಇದ್ದರು. ಪೀಲಿಯಾಸನು ಬಹಳ ಆಶಾಪರನು, ಕುತಂತ್ರಿಯು. ಆದುದರಿಂದ ಅವನು ತನ್ನ ಅಣ್ಣನಿಗೆ

ದ್ರೋಹಮಾಡಿ ಅವನ ರಾಜ್ಯವನ್ನು ಅಪಹರಿಸಿದನು. ಆದರೆ ಏಸನ್ನನು ತನ್ನ ರಾಜ್ಯವನ್ನು ಬಿಟ್ಟುಹೋಗುವುದಕ್ಕೆ ಮುಂಚೆ, ತನ್ನ ಮಗನಿಗೆ ವಯಸ್ಸು ಬಂದಕೂಡಲೆ ರಾಜ್ಯವನ್ನು ಬಿಟ್ಟುಕೊಡಬೇಕೆಂದು ಪೀಲಿಯಾಸಿನೊಡನೆ ಒಪ್ಪಂದವನ್ನು ಮಾಡಿಕೊಂಡನು. ಪೀಲಿಯಾಸನು ಮನಸ್ಸಿಲ್ಲದಿದ್ದರೂ "ಮುಂದಿನ ಮಾತು ಮುಂದಕ್ಕೆ ನೋಡೋಣ" ವೆಂದು ಈ ಒಪ್ಪಂದಕ್ಕೆ ಸಮ್ಮತಿಸಿ ರಾಜ್ಯವನ್ನು ವಶಪಡಿಸಿಕೊಂಡನು.

೪. ಈ ಕಾಲದಲ್ಲಿ ಷೈರನ್ ಎಂಬೊಬ್ಬ ಗುರುವು ಇದ್ದನು. ಇವನು ಬಹಳ ವಿಲಕ್ಷಣಪುರುಷನು: ಇವನಿಗೆ ನಡುವಿನಿಂದ ಕೆಳಭಾಗವೆಲ್ಲಾ ಕುದುರೆಯ ಆಕಾರವಾಗಿಯೂ, ಉಳಿದ ಭಾಗವೆಲ್ಲಾ ಮನುಷ್ಯನ ಆಕೃತಿಯಾಗಿಯೂ ಇದ್ದವು. ರೂಪವು ಹೀಗೆ ವಿಲಕ್ಷಣವಾಗಿದ್ದರೂ ಈತನ ಜ್ಞಾನವು ಅಪಾರವಾಗಿದ್ದಿತು: ಇವನಿಗೆ ಮುಂದೆ ನಡೆಯುವ ಸಂಗತಿಗಳೂ ತಿಳಿದಿದ್ದವು. ಇದರ ಜೊತೆಗೆ ಈತನು ಮರಣ ಉಂಟಾಗಬಾರದೆಂಬ ಒಂದು ವರವನ್ನೂ ಪಡೆದುಕೊಂಡಿದ್ದುದರಿಂದ, ಷೈರನ್ನಿನ ವಯಸ್ಸು ಇಷ್ಟೇ ಎಂದು ಹೇಳಲಾಗುತ್ತಿರಲಿಲ್ಲ. ಆದಕಾರಣ ಇವನು ಎಷ್ಟೋಕಾಲದಿಂದ ಗ್ರೀಸಿನ ಅನೇಕರಿಗೆ ಗುರುವಾಗಿದ್ದನು. ದೇವರು, ಗುರುಹಿರಿಯರು—ಇವರ ವಿಷಯದಲ್ಲಿ ಭಕ್ತಿಯೂ, ದೀನರು, ಅನಾಥರು, ದುರ್ಬಲರು—ಇಂತಹವರ ವಿಷಯದಲ್ಲಿ ಕರುಣವೂ, ಸತ್ಯ, ಸಹನ, ಶೌರ್ಯ, ಪರಸ್ಪರಪ್ರೀತಿ—ಇತ್ಯಾದಿ ಸದ್ಗುಣಗಳೂ ತನ್ನ ಶಿಷ್ಯರಲ್ಲಿ ಉಂಟಾಗುವಂತೆ ಷೈರನ್ನನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದನು. ಇದಲ್ಲದೆ ಆತನು ಅವರಿಗೆ ಬಿಲ್ಲುಬಾಣಗಳ ಜೊತೆಗೆ ಕಾಳಗಮಾಡುವುದು, ಬೇಟೆಯಾಡುವುದು, ಈಜುವುದು—ಇವೇ ಮುಂತಾದ ಅಂಗಸಾಧನೆಗಳನ್ನೂ, ವೈದ್ಯ, ಸಂಗೀತ ಮೊದಲಾದುವುಗಳನ್ನೂ ಬಹಳ ಚೆನ್ನಾಗಿ ಬೋಧಿಸುತ್ತಿದ್ದನು.

೫. ಈತನ ಶಿಷ್ಯರಲ್ಲಿ ಎಸ್ಕ್ಯುಲೇಪಿಯಸ್ ಎಂಬವನು ನಮ್ಮ ಧನ್ವಂತರಿಯ ಹಾಗೆ ವೈದ್ಯಶಾಸ್ತ್ರದಲ್ಲಿ ಬಹಳ ನಿಪುಣನಾಗಿದ್ದನು. ಇವನಿಗೆ ಸಾಧ್ಯವಲ್ಲದ ರೋಗಗಳೇ ಇರಲಿಲ್ಲ. ಒಂದಾನೊಂದು ಕಾಲದಲ್ಲಿ ತಂದೆಯ ಶಾಪದಿಂದ ಸತ್ತುಹೋಗಿದ್ದ ಒಬ್ಬನನ್ನು ಈತನು ಬದುಕಿಸಿದನಂತೆ!

ಷೈರನ್ನಿನ ಶಿಷ್ಯರುಗಳಲ್ಲಿ ಮತ್ತೊಬ್ಬನಾದ ಆರ್ಫಿಯುಸ್ ಎಂಬಾತನು ನಮ್ಮ ತುಂಬುರನಾರದರಂತೆ ಸಂಗೀತವಿಷಯದಲ್ಲಿ ಬಹುಪ್ರಖ್ಯಾತನಾಗಿದ್ದನು. ಈತನು ವೀಣೆಯನ್ನು ನುಡಿಸುವುದಕ್ಕೆ ಮೊದಲುಮಾಡಿದರೆ ಪಶುಪಕ್ಷಿಗಳು ತಮ್ಮ ಮೇವುನಿದ್ದೆಗಳನ್ನೂ ಬಿಟ್ಟು, ಆಲಿಸುತ್ತ ತೆಪ್ಪನೆ ನಿಂತುಬಿಡುತ್ತಿದ್ದುವಂತೆ! ಹೊಳೆತೊರೆಗಳೂ ಸಹ ಹರಿವುದನ್ನು ನಿಲ್ಲಿಸಿಬಿಡುತ್ತಿದ್ದುವೆಂದು ಹೇಳುವರು! ಬಣಮರಗಳೂ ಪುನಃ ಚಿಗುರುತ್ತಿದ್ದುವಂತೆ! ಹೀಗೆಯೇ ಷೈರನ್ನಿನ ಇತರ ಶಿಷ್ಯರುಗಳಲ್ಲಿ ಅನೇಕರು ಕೆಲಕೆಲವು ವಿಷಯಗಳಲ್ಲಿ ಅತ್ಯಂತಕುಶಲರಾಗಿದ್ದರು.

೬. ಐಯೋಲ್ಕಸ್ ರಾಜ್ಯವು ಮತ್ತೊಬ್ಬನ ವಶವಾಗುತ್ತಲೂ, ಏಸನ್ನನು ಅದನ್ನು ಬಿಟ್ಟು, ಇನ್ನೂ ಸಣ್ಣ ಹುಡುಗನಾಗಿದ್ದ ಜೇಸನ್ನನ್ನು ವಿದ್ಯಾಭ್ಯಾಸಕ್ಕಾಗಿ ಷೈರನ್ನಿನ ಬಳಿಗೆ ತಂದೊಪ್ಪಿಸಿ ತಾನು ತಲೆಮರೆಸಿಕೊಂಡು ಬೇರೊಂದು ರಾಜ್ಯದಲ್ಲಿ ವಾಸಮಾಡುತ್ತಿದ್ದನು. ಜೇಸನ್ನನು ಗುರುವಿನ ಬಳಿಯಲ್ಲಿ ಬಹಳ ವಿಧೇಯತೆಯಿಂದಲೂ, ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ತನ್ನ ಪಾಠಗಳನ್ನು ಕಲಿತು, ಕೆಲವು ವರುಷಗಳಲ್ಲಿ ಬಹಳ ನಿಪುಣನಾದನು. ಇಷ್ಟುಹೊತ್ತಿಗೆ ಜೇಸನ್ನಿಗೆ ಬಾಲ್ಯಾವಸ್ಥೆಯು ಕಳೆದುಹೋಗಿ ಯೌವನಾವಸ್ಥೆಯು ಪ್ರಾರಂಭವಾಗಿದ್ದಿತು. ಸಕಾಲವು ಬದಗಿತೆಂದು ಷೈರನ್ನನು ತಿಳಿದು, ಜೇಸನ್ನಿನ ತಂದೆಯು ರಾಜನಾಗಿದ್ದ ವಿಷಯವನ್ನೂ, ಆತನು ತನ್ನ ಬಲತಮ್ಮನ ದ್ರೋಹಚಿಂತನೆಯಿಂದ ರಾಜ್ಯಭ್ರಷ್ಟನಾಗಿ ಪರದೇಶದಲ್ಲಿ ಇದ್ದುದನ್ನೂ, ಜೇಸನ್ನಿಗೆ ತಿಳಿಸಿದನು. ಕೂಡಲೇ ಜೇಸನ್ನನು ತನ್ನ ತಂದೆಯ ಕಷ್ಟವನ್ನು ಪರಿಹಾರಮಾಡುವುದು ತನ್ನ ಧರ್ಮವೆಂದು ಭಾವಿಸಿ, ತನ್ನ ಗುರುವಿನ ಅನುಮತಿಯನ್ನೂ, ಆಶೀರ್ವಾದವನ್ನೂ ಪಡೆದು, ತನ್ನ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಐಯೋಲ್ಕಸನ್ನು ಕುರಿತು ಹೊರಟನು.

೭. ಹೀಗೆ ಹೊರಟಾಗ ಜೇಸನ್ನನು ಕಾಲುಗಳಲ್ಲಿ ಪಾದುಕೆಗಳನ್ನೂ, ಎರಡು ಕೈಗಳಲ್ಲಿಯೂ ಈಟಿಗಳನ್ನೂ ಧರಿಸಿ, ಚಿರತೆಯ ಚರ್ಮವೊಂದನ್ನು ಹೊದೆದುಕೊಂಡಿದ್ದನು. ಪಾದುಕೆಗಳು ಕಾಲುಗಳಮೇಲೆ ನಿಲ್ಲುವುದಕ್ಕಾಗಿ ಅವುಗಳನ್ನು ಚಿನ್ನದದಾರಗಳಿಂದ ಕಟ್ಟಿಕೊಂಡಿದ್ದನು. ಈ ಅಸಾಧಾರಣ

ವಾದ ವೇಷವನ್ನು ಧರಿಸಿ ಹೋಗುತ್ತಿದ್ದ ಬಲಿಷ್ಠನಾದ ಜೇಸನ್ನನ್ನು ಹೊಲ ಗದ್ದೆಗಳಲ್ಲಿ ಕೆಲಸಮಾಡುತ್ತಿದ್ದ ರೈತರು ಕಂಡು ಅವನು ಯಾವುದೋ ಒಂದು ಸಾಹಸಕಾರ್ಯವನ್ನು ಮಾಡುವುದಕ್ಕಾಗಿ ಹೊರಟದ್ದನೆಂದು ತಮ ತಮಗೆ ಪಿಸುಗುಟ್ಟಿಕೊಂಡರು.

ಎರಡನೆಯ ಪ್ರಕರಣ.

ರಾಜಧಾನಿಗೆ ಜೇಸನ್ನಿನ ಪ್ರಯಾಣ.

ಹೀಗೆ ಪ್ರಯಾಣಮಾಡಿಕೊಂಡು ಹೋಗುತ್ತಿದ್ದಾಗ ದೂರದಲ್ಲಿ ಒಂದು ಮೊರೆತವು ಕೇಳಬಂದಿತು. ಇನ್ನೂ ಸ್ವಲ್ಪ ಮುಂದೆ ಹೋಗಲು ಆ ಮೊರೆತವು ಒಂದು ಹೊಳೆಯದೆಂದು ಗೊತ್ತಾಯಿತು. ಮತ್ತೂ ಸ್ವಲ್ಪಮುಂದೆ ಹೋದಾಗ ಆ ಹೊಳೆಯೇ ಸಿಕ್ಕಿತು. ಅದರ ಈಚೆಯ ದಡದಲ್ಲಿ ಒಬ್ಬ ಮುದುಕಿಯು ಕೋಗಿಲೆಯ ಆಕಾರದ ಹಿಡಿಯಿದ್ದ ಒಂದು ಊರು ಗೋಲನ್ನು ಊರಿಕೊಂಡು ಸುತ್ತಲೂ ತಿರುತಿರುಗಿ ನೋಡುತ್ತಾ ನಿಂತಿ ದ್ದಳು. ಅವಳ ಉಡುಪೆಲ್ಲಾ ಹರಿದು ಚಿಂದಿಚಿಂಟಿಯಾಗಿದ್ದಿತು; ಚರ್ಮವೆಲ್ಲಾ ಸುಕ್ಕುಸುಕ್ಕಾಗಿದ್ದಿತು; ಧ್ವನಿಯು ಬಡಕಲಾಗಿಯೂ, ಬೆನ್ನು ಗೂನಾ ಗಿಯೂ, ಕೈಕಾಲುಗಳು ಬಡಕಲಾಗಿಯೂ ಇದ್ದುವು. ಅವಳು ಆಗಾಗ ಕೆಮ್ಮುತ್ತಲೂ, ನರಳುತ್ತಲೂ, "ಉಸ್! ಅಮ್ಮಾ!" ಎಂದುಕೊಳ್ಳು ತ್ತಿದ್ದಳು.

೯. ಅವಳನ್ನು ನೋಡಿದಕೂಡಲೆ ಜೇಸನ್ನಿನ ಮನಸ್ಸು ಕರಗಿತು. ಆದುದರಿಂದ, ಅವನು ಅವಳಬಳಿಗೆ ಹೋಗಿ "ಅಜ್ಜಮ್ಮಾ! ಈ ಹೊಳೆಯ ದಡದಲ್ಲಿ ನರಳುತ್ತಾ ಇದೇಕೆ ಒಬ್ಬಳೇ ನಿಂತುಕೊಂಡಿರುವೆ? ನಿನಗೆ ನನ್ನಿಂದೇನಾದರೂ ಸಹಾಯವಾದೀತೆ?" ಎಂದು ಕೇಳಿದನು. ಮುದುಕಿಯು "ಮಗೂ! ನಾನು ಆಚೆಯ ದಡಕ್ಕೆ ಹೋಗಬೇಕಾಗಿದೆ. ನೀನು ಎಲ್ಲಿಗಪ್ಪಾ ಹೋಗುತ್ತಿದ್ದೀಯೆ?" ಎಂದು ಅವನನ್ನು ಕೇಳಿದಳು. ಜೇಸನ್ನನು ತನ್ನ

ಚಿಕ್ಕಪ್ಪನಿಂದ ಐಯಾಲ್ಕಾಸ್ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಹೊರಟಿರುವುದಾಗಿಯೂ, ತಾನೂ ಹೊಳೆಯನ್ನು ದಾಟಬೇಕಾಗಿರುವುದಾಗಿಯೂ, ಆಕೆಗೆ ತಿಳಿಸಿ, ಆಕೆಯನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡು ಹೊಳೆಯೊಳಕ್ಕೆ ಕಾಲಿಟ್ಟನು.

೧೦. ಜೇಸನ್ನನು ತನ್ನ ಕೈಗಳಲ್ಲಿ ಹಿಡಿದಿದ್ದ ಎರಡು ಈಟಿಗಳ ಸಹಾಯದಿಂದ ಹೊಳೆಯನ್ನು ಮೆತ್ತಮೆತ್ತಗೆ ಹಾಯಲಾರಂಭಿಸಿದನು. ಕೆಲವು ಹಜ್ಜೆಗಳನ್ನು ಇಡುವುದರೊಳಗಾಗಿ ಹೊಳೆಯ ರಭಸವು ಹೆಚ್ಚಿತು. ಮೇಲ್ಗಡೆಯಿಂದ ಸಣ್ಣಪುಟ್ಟ ಗಿಡಗಳು ಹೊಳೆಯಲ್ಲಿ ತೇಲಿಕೊಂಡು ಬರುತ್ತಿದ್ದುವು. ಇನ್ನೂ ಸ್ವಲ್ಪದೂರ ಹೋಗಲು ಹೊಳೆಯ ದಡದಲ್ಲಿದ್ದ ಒಂದು ದೊಡ್ಡಮರವು ಬುಡಸಹಿತವಾಗಿ ಉರುಳಿಕೊಂಡುಬಿದ್ದು, ಹೊಳೆಯಲ್ಲಿ ತೇಲಿಕೊಂಡು ಬರುತ್ತಿದ್ದಿತು. ಇದನ್ನು ಜೇಸನ್ನನು ಕಂಡರೂ, ತನ್ನ ಗುರುವಿನ ಬೋಧನೆಗೆ ಅನುಸಾರವಾಗಿ ಆ ವಿಪತ್ತಿನಲ್ಲಿಯೂ ಹೆದರಲಿಲ್ಲ; ಆದರೆ ಅವನ ಹೆಗಲಮೇಲೆ ಕುಳಿತಿದ್ದ ಮುದುಕಿಯು ಮಾತ್ರ "ಅಯ್ಯೋ! ಹೋದೆ! ಹೋದೆ!" ಎಂದು ಅರಚುತ್ತಾ ಜೇಸನ್ನಿನ ಕತ್ತನ್ನು ಮತ್ತೂ ಗಟ್ಟಿಯಾಗಿ ಹಿಡಿದುಕೊಂಡಳು. ಇದರಿಂದ ಜೇಸನ್ನಿಗೆ ಉಸಿರುಬಿಡುವುದೂ ಕಷ್ಟವಾಗುತ್ತಬಂದಿತು. ಆದರೂ ಅವನು "ಅಜ್ಜಮ್ಮಾ! ಹೆದರಬೇಡ! ಇಗೋ, ಆಚೆಯದಡವು ಹತ್ತಿರವಾಯಿತು" ಎಂದು ಧೈರ್ಯಹೇಳಿ ಅತ್ಯಂತ ಪ್ರಯಾಸದಿಂದ ಹೊಳೆಯನ್ನು ದಾಟಿಕೊಂಡುಬಂದನು.

೧೧. ದಡದಮೇಲೆ ಕಾಲಿಟ್ಟಕೂಡಲೆ ಮುದುಕಿಯು ತಟ್ಟನೆ ಕೆಳಕ್ಕೆ ಧುಮಿಕಿ ಜೇಸನ್ನಿನೊಡನೆ ಒಂದು ಮಾತನ್ನಾದರೂ ಆಡದೆ ಹೊರಟು ಹೋಗುತ್ತಿದ್ದಳು. ಇದರಿಂದ ಜೇಸನ್ನಿಗೆ ವ್ಯಸನವೇನೂ ಆಗಲಿಲ್ಲ; ಅವನು ತನ್ನಕರ್ತವ್ಯವನ್ನು ತಾನು ಮಾಡಿದುದಕ್ಕಾಗಿ ಮನಸ್ಸಿನಲ್ಲಿಯೇ ತೃಪ್ತಿಪಟ್ಟುಕೊಂಡನು. ತಮ್ಮ ಕರ್ತವ್ಯಸಾಧನೆಯಿಂದಲೇ ಸತ್ಪುರುಷರಿಗೆ ಪರಮತೃಪ್ತಿಯಾಗುವುದಷ್ಟೆ! ಇನ್ನು ಎರಡುಹಜ್ಜೆ ಹೋಗುವುದರೊಳಗಾಗಿ ಅವನು ಹಿತಕ್ಕೋ ಮುದುಕಿಯಕಡೆಗೆ ತಿರುಗಿನೋಡಿದನು. ಆದರೆ ಈಗ ಮುದುಕಿಯು ಅಲ್ಲಿರಲಿಲ್ಲ; ಅವಳಿಗೆ ಬದಲು ಒಬ್ಬ ಸುಂದರಸ್ತ್ರೀಯು ಕಂಡುಬಂದಳು. ಅವಳ ಬಳಿಯಲ್ಲಿ ಒಂದು ನವಿಲು ತನ್ನ ರೆಕ್ಕೆಗಳನ್ನು ಹರಡಿಕೊಂಡು ಕುಣಿ

ಯುತ್ತಿದ್ದಿತು; ಆಕೆಯ ಸುತ್ತಲೂ ಹೊಂಬಣ್ಣದ ಪ್ರಭೆಯು ಕಾಣುತ್ತಿದ್ದಿತು. ಇದನ್ನೆಲ್ಲಾ ನೋಡಿ—ಆಕೆಯು ದೇವಾದಿದೇವನಾದ ಜ್ಯೂಸನ ಪತ್ನಿಯಾದ ಹೀರಾದೇವಿಯೇ ಎಂದೂ, ಮುದುಕಿಯ ವೇಷವನ್ನು ಹಾಕಿಕೊಂಡು ಆಕೆಯು ತನ್ನನ್ನು ಪರೀಕ್ಷಿಸಿದ್ದಳೆಂದೂ ಜೇಸನ್ನಿಗೆ ಭಾವನೆಗಳು ತಲೆದೋರಿದುವು. ಆಗ ಆ ದೇವಿಯು "ಜೇಸನ್! ನಿನ್ನ ಊಹೆಯು ಸರಿ: ನಾನು ಹೀರಾದೇವಿಯೇ ಹೌದು. ನೀನು ನನಗೆ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ನಿನ್ನ ಕಷ್ಟಕಾಲದಲ್ಲಿ ನಿನಗೆ ಸಹಾಯಮಾಡುವೆನು" ಎಂದು ಹೇಳಿ ತಟ್ಟನೆ ಮಾಯವಾದಳು.

೧೨. ದೇವಿಯು ಈ ವರಕ್ಕಾಗಿ ಕೃತಜ್ಞತೆಯಿಂದ ಜೇಸನ್ನನು ಆಕೆಯನ್ನು ಮನಸ್ಸಿನಲ್ಲಿಯೇ ಸ್ತುತಿಸುತ್ತಾ ಮುಂದೆಮುಂದೆ ಹೊರಟನು. ಸ್ವಲ್ಪ ಹೊತ್ತಿನಲ್ಲೇ ಐಯಾಲ್ಕಸ್ ಪಟ್ಟಣದ ಗೋಪುರಗಳು ಕಾಣಲಾರಂಭಿಸಿದುವು. ಆಗ ಜೇಸನ್ನನು ತನ್ನ ಬಾಲ್ಯದ ಕೆಲವು ವಿಷಯಗಳನ್ನೂ, ಕೆಲಕೆಲವು ಸ್ಥಳಗಳನ್ನೂ ನೆನೆದುಕೊಂಡು ಹಿಗ್ಗುತ್ತಿದ್ದನು. ಇನ್ನು ಕೊಂಚ ಹೊತ್ತಿನೊಳಗಾಗಿ, ಆ ರಾಜಧಾನಿಯ ಪ್ರಜೆಗಳೆಲ್ಲರೂ ಹಬ್ಬದ ಉಡಿಗೆ ತೊಡಿಗೆಗಳನ್ನು ಧರಿಸಿ ಸಮುದ್ರತೀರದಲ್ಲಿದ್ದ ಬಂದಾನೊಂದು ಸ್ಥಳಕ್ಕೆ ಹೋಗುತ್ತಿದ್ದುದು ಕಂಡುಬಂದಿತು. ಜೇಸನ್ನನೂ ಉದ್ದೇಶವಿಲ್ಲದೆಯೇ ಅತ್ತಕಡೆ ಹೊರಟನು.

ಮೂರನೆಯ ಪ್ರಕರಣ.

ತಂದೆಮಕ್ಕಳ ಭೇಟಿ.

ಪ್ರಜೆಗಳು ಜೇಸನ್ನನ್ನು ಕಂಡಕೂಡಲೇ—"ಅಗೋ! ಅಗೋ! ಒಂಟಿಕೆರದವನು!" ಎಂದು ಹೇಳಿಕೊಳ್ಳುತ್ತಾ, ಒಂದುಸಲ ಜೇಸನ್ನನ ಪಾದವನ್ನೂ, ಮತ್ತೊಂದುಸಲ ತಮ್ಮ ಸಂಗಡಿಗರ ಮುಖಗಳನ್ನೂ ನೋಡುತ್ತಾ, ಮೆಲ್ಲಗೆ ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು.

ಅದೇಕೆ ಜನರು ತನ್ನನ್ನು ನೋಡಿ ಪಿಸುಗುಟ್ಟಿಕೊಳ್ಳುತ್ತಿದ್ದರೆಂಬುದು ಜೇಸನ್ನಿಗೆ ತಿಳಿಯದು. ಅವನು ಹೊಳೆಯನ್ನು ದಾಟುತ್ತಿದ್ದಾಗ ಪ್ರವಾಹದ ರಭಸದಿಂದ ಅವನ ಒಂದು ಪಾದುಕೆಯು ಕಳಚಿ ಬಿದ್ದುಹೋಗಿದ್ದಿತು. ಇನ್ನು ತನ್ನ ರಾಜ್ಯವು ತನ್ನ ವಶವಾಗುವುದಲ್ಲಾ ಎಂಬ ಸಂತೋಷದಲ್ಲಿ ಜೇಸನ್ನನು ಅದನ್ನು ಗಮನಿಸಿಯೇ ಇರಲಿಲ್ಲ. ಆದರೆ, ಭವಿಷ್ಯವನ್ನು ಹೇಳುತ್ತಿದ್ದ ವಿಲಕ್ಷಣವಾದ ಒಂದು ಮರವು ಪೀಲಿಯಾಸನ್ನು ಕುರಿತು "ನೀನು ಒಂಟಿಹಾವಿಗೆಯವನಿಂದ ರಾಜ್ಯಚ್ಯುತನಾಗುವೆ" ಎಂದು ಹೇಳಿದ್ದಿತು. ಒಂಟಿಕೆರವನ್ನು ಮೆಟ್ಟಿದ್ದ ಜೇಸನ್ನನ್ನು ಪ್ರಜೆಗಳು ಕಂಡು ಆಶ್ಚರ್ಯಪಡುತ್ತಿದ್ದುದು ಈ ಭವಿಷ್ಯತ್ಸೂಚನೆಯ ದೆಸೆಯಿಂದಲೇ.

೧೪. ಜೇಸನ್ನನು ಮತ್ತೆ ಸ್ವಲ್ಪದೂರ ಹೋಗುವುದರೊಳಗಾಗಿ ಜನಸಂದಣಿಯು ಹೆಚ್ಚಿ ಅವನು ತನ್ನ ಮನಸ್ಸಿಗೆ ಬಂದಕಡೆ ಹೋಗಲಾರದಂತಾಯಿತು ಆದದರಿಂದ ಜೇಸನ್ನನು ಕಷ್ಟಪಟ್ಟುಕೊಂಡು ತನಗೆ ದಾರಿ ಸಿಕ್ಕಿದಕಡೆ ಮುಂದೆಮುಂದೆ ಹೊರಟನು. ಮತ್ತೆ ಸ್ವಲ್ಪದೂರ ಹೋಗುವುದರೊಳಗಾಗಿ, ತನ್ನ ಮುಂದುಗಡೆ ಯಜ್ಞವೇದಿಕೆಯಿಂದ ಹೋಮಧೂಮವು ಆಕಾಶದಕಡೆಗೆ ಏಳುತ್ತಿದ್ದುದು ಕಂಡುಬಂದಿತು. ತನ್ನ ಪ್ರಯತ್ನವಿಲ್ಲದೆಯೇ, ಜೇಸನ್ನನು ಅತ್ತಕಡೆಗೆ ಪ್ರಯಾಣಮಾಡಿ ಕಡೆಗೆ ಯಜ್ಞವೇದಿಕೆಯ ಬಳಿಗೆ ಬಂದು, ಅಲ್ಲಿ ಒಂದು ಪಶುವನ್ನು ದೇವರಿಗೆ ಯಜ್ಞಮಾಡುತ್ತಿದ್ದ ಪೀಲಿಯಾಸಿನ ಇದಿರಿನಲ್ಲಿ ನಿಂತನು. ಹೀಗೆ ಅಕಸ್ಮಾತ್ತಾಗಿ ಕಾಣಿಸಿಕೊಂಡ ಆ ಒಂಟಿಕೆರದವನನ್ನು ಕಂಡಕೂಡಲೆ ಪೀಲಿಯಾಸಿಗೆ ಭಯವೂ, ಕೋಪವೂ ಏಕಕಾಲದಲ್ಲಿ ಉಂಟಾದುವು.

೧೫. ತನ್ನಬಳಿಗೆ ಒಂಟಿಕೆರದವರು ಯಾರೂ ಬರಲೇ ಕೂಡದೆಂದು ಪೀಲಿಯಾಸನು ಕಟ್ಟಪ್ಪಣೆಯನ್ನು ಮಾಡಿದ್ದನು. ಅದಕ್ಕಾಗಿ ಕೆರದ ಒಂದು ಇಲಾಖೆಯನ್ನೇ ಏರ್ಪಡಿಸಿ ತನ್ನ ಆಸ್ಥಾನಕ್ಕೆ ಬರುತ್ತಿದ್ದವರ ಪಾದಗಳಲ್ಲಿ ಕೆರಗಳು ಸರಿಯಾಗಿದ್ದವೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದ್ದನು. ಯಾವ ಆಸ್ಥಾನಿಕನ ಮೆಟ್ಟುಗಳಾದರೂ ಸ್ವಲ್ಪ ಸವೆದುಹೋದುವೆಂದರೆ ಅವನಿಗೆ ಈ ಅಧಿಕಾರಿಯು ಕೆರದ ಹೊಸದೊಂದು ಜೊತೆಯನ್ನು ಕೂಡಲೆ ಒದಗಿಸಿಕೊಡುತ್ತಿದ

ಯುತ್ತಿದ್ದಿತು; ಆಕೆಯ ಸುತ್ತಲೂ ಹೊಂಬಣ್ಣದ ಪ್ರಭೆಯು ಕಾಣುತ್ತಿದ್ದಿತು. ಇದನ್ನೆಲ್ಲಾ ನೋಡಿ—ಆಕೆಯು ದೇವಾದಿದೇವನಾದ ಜ್ಯೂಸಿವ ಪತ್ನಿಯಾದ ಹೀರಾದೇವಿಯೇ ಎಂದೂ, ಮುದುಕಿಯ ವೇಷವನ್ನು ಹಾಕಿಕೊಂಡು ಆಕೆಯು ತನ್ನನ್ನು ಪರೀಕ್ಷಿಸಿದ್ದಳೆಂದೂ ಜೇಸನ್ನಿಗೆ ಭಾವನೆಗಳು ತಲೆದೋರಿದುವು. ಆಗ ಆ ದೇವಿಯು "ಜೇಸನ್ ! ನಿನ್ನ ಊಹೆಯು ಸರಿ : ನಾನು ಹೀರಾದೇವಿಯೇ ಹೌದು. ನೀನು ನನಗೆ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ನಿನ್ನ ಕಷ್ಟಕಾಲದಲ್ಲಿ ನಿನಗೆ ಸಹಾಯಮಾಡುವೆನು" ಎಂದು ಹೇಳಿ ತಟ್ಟನೆ ಮಾಯವಾದಳು.

೧೦. ದೇವಿಯು ಈ ವರಕ್ಕಾಗಿ ಕೃತಜ್ಞತೆಯಿಂದ ಜೇಸನ್ನನು ಆಕೆಯನ್ನು ಮನಸ್ಸಿನಲ್ಲಿಯೇ ಸ್ತುತಿಸುತ್ತಾ ಮುಂದೆಮುಂದೆ ಹೊರಟನು. ಸ್ವಲ್ಪ ಹೊತ್ತಿನಲ್ಲೇ ಐಯಾಲ್ಕಾಸ್' ಪಟ್ಟಣದ ಗೋಪುರಗಳು ಕಾಣಲಾರಂಭಿಸಿದುವು. ಆಗ ಜೇಸನ್ನನು ತನ್ನ ಬಾಲ್ಯದ ಕೆಲವು ವಿಷಯಗಳನ್ನೂ, ಕೆಲಕೆಲವು ಸ್ಥಳಗಳನ್ನೂ ನೆನೆದುಕೊಂಡು ಹಿಗ್ಗುತ್ತಿದ್ದನು. ಇನ್ನು ಕೊಂಚ ಹೊತ್ತಿನೊಳಗಾಗಿ, ಆ ರಾಜಧಾನಿಯ ಪ್ರಜೆಗಳೆಲ್ಲರೂ ಹಬ್ಬದ ಉಡಿಗೆ ತೊಡಿಗೆಗಳನ್ನು ಧರಿಸಿ ಸಮುದ್ರತೀರದಲ್ಲಿದ್ದ ಒಂದಾನೊಂದು ಸ್ಥಳಕ್ಕೆ ಹೋಗುತ್ತಿದ್ದುದು ಕಂಡುಬಂದಿತು ಜೇಸನ್ನನೂ ಉದ್ದೇಶವಿಲ್ಲದೆಯೇ ಅತ್ತಕಡೆ ಹೊರಟನು.

ಮೂರನೆಯ ಪ್ರಕರಣ.

ತಂದೆಮಕ್ಕಳ ಭೇಟಿ.

ಪುರಜನರು ಜೇಸನ್ನನ್ನು ಕಂಡಕೂಡಲೇ—"ಅಗೋ ! ಅಗೋ ! ಒಂಟಿಕೆರದವನು !" ಎಂದು ಹೇಳಿಕೊಳ್ಳುತ್ತಾ, ಒಂದುಸಲ ಜೇಸನ್ನನ ಪಾದವನ್ನೂ, ಮತ್ತೊಂದುಸಲ ತಮ್ಮ ಸಂಗಡಿಗರ ಮುಖಗಳನ್ನೂ ನೋಡುತ್ತಾ, ಮೆಲ್ಲಗೆ ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು.

ಅದೇಕೆ ಜನರು ತನ್ನನ್ನು ನೋಡಿ ಪಿಸುಗುಟ್ಟಿಕೊಳ್ಳುತ್ತಿದ್ದರೆಂಬುದು ಜೇಸನ್ನಿಗೆ ತಿಳಿಯದು. ಅವನು ಹೊಳೆಯನ್ನು ದಾಟುತ್ತಿದ್ದಾಗ ಪ್ರವಾಹದ ರಭಸದಿಂದ ಅವನ ಒಂದು ಪಾದುಕೆಯು ಕಳಚಿ ಬಿದ್ದುಹೋಗಿದ್ದಿತು. ಇನ್ನು ತನ್ನ ರಾಜ್ಯವು ತನ್ನ ವಶವಾಗುವುದಲ್ಲಾ ಎಂಬ ಸಂತೋಷದಲ್ಲಿ ಜೇಸನ್ನನು ಅದನ್ನು ಗಮನಿಸಿಯೇ ಇರಲಿಲ್ಲ. ಆದರೆ, ಭವಿಷ್ಯವನ್ನು ಹೇಳುತ್ತಿದ್ದ ವಿಲಕ್ಷಣವಾದ ಒಂದು ಮರವು ಪೀಲಿಯಾಸನ್ನು ಕುರಿತು "ನೀನು ಒಂಟಿಹಾವಿಗೆಯವನಿಂದ ರಾಜ್ಯಚ್ಯುತನಾಗುವೆ" ಎಂದು ಹೇಳಿದ್ದಿತು. ಒಂಟಿಕೆರವನ್ನು ಮೆಟ್ಟಿದ್ದ ಜೇಸನ್ನನ್ನು ಪ್ರಜೆಗಳು ಕಂಡು ಆಶ್ಚರ್ಯಪಡುತ್ತಿದ್ದುದು ಈ ಭವಿಷ್ಯತ್ಸೂಚನೆಯ ದೆಸೆಯಿಂದಲೇ.

೧೪. ಜೇಸನ್ನನು ಮತ್ತೆ ಸ್ವಲ್ಪದೂರ ಹೋಗುವುದರೊಳಗಾಗಿ ಜನಸಂದಣಿಯು ಹೆಚ್ಚಿ ಅವನು ತನ್ನ ಮನಸ್ಸಿಗೆ ಬಂದಕಡೆ ಹೋಗಲಾರದಂತಾಯಿತು. ಆದುದರಿಂದ ಜೇಸನ್ನನು ಕಷ್ಟಪಟ್ಟುಕೊಂಡು ತನಗೆ ದಾರಿ ಸಿಕ್ಕಿದಕಡೆ ಮುಂದೆಮುಂದೆ ಹೊರಟನು. ಮತ್ತೆ ಸ್ವಲ್ಪದೂರ ಹೋಗುವುದರೊಳಗಾಗಿ, ತನ್ನ ಮುಂದುಗಡೆ ಯಜ್ಞವೇದಿಕೆಯಿಂದ ಹೋಮಧೂಮವು ಆಕಾಶದಕಡೆಗೆ ಏಳುತ್ತಿದ್ದುದು ಕಂಡುಬಂದಿತು. ತನ್ನ ಪ್ರಯತ್ನವಿಲ್ಲದೆಯೇ, ಜೇಸನ್ನನು ಅತ್ತಕಡೆಗೆ ಪ್ರಯಾಣಮಾಡಿ ಕಡೆಗೆ ಯಜ್ಞವೇದಿಕೆಯ ಬಳಿಗೆ ಬಂದು, ಅಲ್ಲಿ ಒಂದು ಪಶುವನ್ನು ದೇವರಿಗೆ ಯಜ್ಞಮಾಡುತ್ತಿದ್ದ ಪೀಲಿಯಾಸಿನ ಇದಿರಿನಲ್ಲಿ ನಿಂತನು. ಹೀಗೆ ಅಕಸ್ಮಾತ್ತಾಗಿ ಕಾಣಿಸಿಕೊಂಡ ಆ ಒಂಟಿಕೆರದವನನ್ನು ಕಂಡಕೂಡಲೆ ಪೀಲಿಯಾಸಿಗೆ ಭಯವೂ, ಕೋಪವೂ ಏಕಕಾಲದಲ್ಲಿ ಉಂಟಾದುವು.

೧೫. ತನ್ನಬಳಿಗೆ ಒಂಟಿಕೆರದವರು ಯಾರೂ ಬರಲೇ ಕೂಡದೆಂದು ಪೀಲಿಯಾಸನು ಕಟ್ಟಪ್ಪಣೆಯನ್ನು ಮಾಡಿದ್ದನು. ಅದಕ್ಕಾಗಿ ಕೆರದ ಒಂದು ಇಲಾಖೆಯನ್ನೇ ಏರ್ಪಡಿಸಿ ತನ್ನ ಆಸ್ಥಾನಕ್ಕೆ ಬರುತ್ತಿದ್ದವರ ಪಾದಗಳಲ್ಲಿ ಕೆರಗಳು ಸರಿಯಾಗಿದ್ದವೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದ್ದನು. ಯಾವ ಆಸ್ಥಾನಿಕನ ಮೆಟ್ಟುಗಳಾದರೂ ಸ್ವಲ್ಪ ಸವೆದುಹೋದುವೆಂದರೆ ಅವನಿಗೆ ಈ ಅಧಿಕಾರಿಯು ಕೆರದ ಹೊಸದೊಂದು ಜೊತೆಯನ್ನು ಕೂಡಲೆ ಒದಗಿಸಿಕೊಡುತ್ತಿದ್ದ

ನು. ಇಷ್ಟೆಲ್ಲಾ ಏರ್ಪಾಡುಗಳಿದ್ದರೂ ತನ್ನಬಳಿಗೆ ಒಂಟಿಹಾವಿಗೆಯನ್ನು ಧರಿಸಿದ್ದ ಜೇಸನ್ನನು ಬಂದುದೇ ಪೀಲಿಯಾಸಿನ ಕೋಪಭಯಗಳಿಗೆ ಕಾರಣವು.

೧೬. ಪೀಲಿಯಾಸನು ಕುತಂತ್ರಿ ಎಂದು ಹಿಂದೆಯೇ ಹೇಳಿದೆಯಲ್ಲವೆ? ಜೇಸನ್ನನ್ನು ಕಂಡಕೂಡಲೇ ಪೀಲಿಯಾಸನು ತನ್ನ ಭಯಕೋಪಗಳನ್ನು ಮರೆಸಿಕೊಂಡು, ನಸುನಗುತ್ತಾ "ಯಾರಪ್ಪಾ, ನೀನು?" ಎಂದು ಅವನನ್ನು ಕೇಳಿದನು. ಎಂತಹ ಕಷ್ಟಗಳು ಒದಗಿದರೂ ಸುಳ್ಳನ್ನು ಹೇಳಬಾರದೆಂದು ಷೈರನ್ನಿಂದ ಚೆನ್ನಾಗಿ ಕಲಿತುಕೊಂಡಿದ್ದ ಜೇಸನ್ನನು, ಪೀಲಿಯಾಸನ್ನು ಕುರಿತು—"ನಾನು ಜೇಸನ್; ನಮ್ಮ ತಂದೆಯು ಹೆಸರು ಏಸನ್. ಈ ಐಯಾಲ್ಕಾಸ್ ರಾಜ್ಯಕ್ಕೆ ಈಗ ದೊರೆಯಾಗಿರುವ ಪೀಲಿಯಾಸಿನಂತೆ ನೀನು ತೋರುತ್ತೀಯೆ. ಹಾಗಿದ್ದರೆ ನಿನ್ನಿಂದ ನಮ್ಮ ತಂದೆಯು ರಾಜ್ಯವನ್ನು ಬಿಡಿಸಿಕೊಳ್ಳಬೇಕೆಂದು ನಾನು ಬಂದಿದೇನೆ" ಎಂದು ನಿರ್ಭಯವಾಗಿ ಹೇಳಿದನು. ಈ ಮಾತುಗಳನ್ನು ಕೇಳಿದಕೂಡಲೆ ಪೀಲಿಯಾಸಿನ ಮನಸ್ಸಿನಲ್ಲಿ ಹೇಗೆ ಆಗಿರಬಹುದೋ ಅದನ್ನು ವಾಚಕರೇ ಊಹಿಸಿಕೊಳ್ಳಬಹುದು. ಆದರೂ ಪೀಲಿಯಾಸನು ತನ್ನ ಮನಸ್ಸಿನಲ್ಲಿ ತಳಮಳನೆ ಕುದಿಯುತ್ತಿದ್ದ ಕೋಪತಾಪಗಳನ್ನು ಸ್ವಲ್ಪವಾದರೂ ತೋರ್ಪಡಿಸದೆ "ಜೇಸನ್! ಈಹೊತ್ತು ಇಷ್ಟು ಸುದಿನವೆಂದು ನಾನು ತಿಳಿದಿರಲಿಲ್ಲ. ಮಗೂ! ನಿನ್ನನ್ನು ನೋಡದೆ ಇಷ್ಟು ದಿವಸವೂ ನಾನು ಬಹಳವಾಗಿ ಕೊರಗುತ್ತಲಿದ್ದೆನು. ನೀನು ಚಿಕ್ಕಂದಿನಲ್ಲಿಯೇ ಸತ್ತುಹೋಗಿದ್ದೆಯೆಂದು ಎಷ್ಟೋ ಶೋಕಿಸುತ್ತಿದ್ದೆನು. ನಮ್ಮ ಪುಣ್ಯದಿಂದ ನೀನು ಜೀವಸಹಿತವಾಗಿರುವೆ ಬಾರಪ್ಪಾ! ಬಹಳದೂರ ಪ್ರಯಾಣ ಮಾಡಿರುವುದರಿಂದ ನೀನು ದಣಿದುಹೋಗಿದ್ದೀಯೆ. ನಡೆ. ಅರಮನೆಗೆ ಹೋಗೋಣ" ಎಂದು ಅವನನ್ನು ತಬ್ಬಿಕೊಂಡು ತನಗೆ ಬಹಳ ಸಂತೋಷವುಂಟಾಗಿದ್ದಂತೆ ನಟಿಸಿದನು. ತಾನು ಮಾಡುತ್ತಿದ್ದ ಯಜ್ಞವನ್ನು ಪೀಲಿಯಾಸನು ಬೇಗಬೇಗನೆ ಮುಗಿಸಿಬಿಟ್ಟು ಜೇಸನ್ನನ್ನು ತನ್ನ ರಥದಲ್ಲಿಯೇ ಕುಳ್ಳಿರಿಸಿಕೊಂಡು ಅರಮನೆಗೆ ಹೋದನು.

೧೭. ಅನಿರೀಕ್ಷಿತವಾಗಿ ಬಂದಿದ್ದ ಜೇಸನ್ನನ್ನು ಗೌರವಿಸಬೇಕೆಂದು ಪೀಲಿಯಾಸನು ಅರಮನೆಯಲ್ಲಿ ಒಂದು ದೊಡ್ಡಔತಣವನ್ನು ಏರ್ಪಡಿಸಿದನು. ಅದಕ್ಕೆ ರಾಜಧಾನಿಯಲ್ಲಿದ್ದ ದೊಡ್ಡಮನುಷ್ಯರೆಲ್ಲರೂ ಬಂದಿದ್ದರು. ಬಂದು

ಕಡೆ ಮನೋಹರವಾದ ಉಡುಪುಗಳನ್ನು ಧರಿಸಿಕೊಂಡು ಅತಿಥಿಗಳೆಲ್ಲರೂ ಕುಳಿತಿದ್ದರು. ಮತ್ತೊಂದುಕಡೆ ಕವಿಗಳು ತಮ್ಮತಮ್ಮ ಕವನಗಳನ್ನು ರಮ್ಯವಾಗಿ ಹಾಡುತ್ತಾ ಸದಸ್ಯರುಗಳಿಗೆ ಬಹಳ ಸಂತೋಷವನ್ನುಂಟು ಮಾಡುತ್ತಿದ್ದರು. ಬಗೆಬಗೆಯ ಭಕ್ಷ್ಯಗಳನ್ನೂ ಪಾನೀಯಗಳನ್ನೂ ಪರಿಚಾರಕರು ತಂದು ಅತಿಥಿಗಳಿಗೆ ಬಡಿಸುತ್ತಿದ್ದರು. ಎತ್ತಕಡೆ ನೋಡಿದರೂ ಆ ಸಭಾಮಂದಿರದಲ್ಲಿ ಸಂತೋಷವು ಉಕ್ಕುತ್ತಿದ್ದಂತೆ ತೋರುತ್ತಿದ್ದಿತು.

೧೮. ಪೀಲಿಯಾಸನು ಮುಖ್ಯಾತಿಥಿಯಾದ ಜೇಸನ್ನನ್ನೂ, ತನ್ನ ಪುತ್ರಪುತ್ರಿಯರನ್ನೂ ತನ್ನ ಬಳಿಯಲ್ಲೇ ಕುಳ್ಳಿರಿಸಿಕೊಂಡು ಸರಸವಾಗಿ ಸಂಭಾಷಿಸುತ್ತಿದ್ದನು. ಜೇಸನ್ನನು ತನ್ನ ಗುರುವಿನ ಮಾಹಾತ್ಮ್ಯವನ್ನೂ ಆತನಿಂದ ತಾನು ಕಲಿತಿದ್ದ ಅನೇಕ ವಿಷಯಗಳನ್ನೂ ತನ್ನ ಚಿಕ್ಕಪ್ಪನಿಗೆ ಮುಚ್ಚುಮರೆಯಿಲ್ಲದೆ ತಿಳಿಸುತ್ತಿದ್ದನು. ಅವೆಲ್ಲವನ್ನೂ ಕೇಳಿ ಅತ್ಯಂತವಾಗಿ ಸಂತೋಷಪಟ್ಟಂತೆ ನಟಿಸುತ್ತಾ ಪೀಲಿಯಾಸನು ಜೇಸನ್ನನ್ನು ಕುರಿತು "ಅದೆಲ್ಲಾ ಸರಿಯೆ! ನಿನಗೆ ಲೋಕವ್ಯವಹಾರಜ್ಞಾನವು ಎಷ್ಟುಮಟ್ಟಿಗಿದೆಯೋ ಒಂದು ಪ್ರಶ್ನೆಯನ್ನು ಕೇಳಿ ಪರೀಕ್ಷಿಸುವೆನು. ಎಲ್ಲಿ ನೋಡೋಣ! ಉತ್ತರವನ್ನು ಕೊಡು" ಎಂದು ಹೇಳಿದನು. ಜೇಸನ್ನಾದರೋ ಪೀಲಿಯಾಸನ ಉದ್ದೇಶವನ್ನು ಅರಿತುಕೊಳ್ಳಲಾರದೆ "ಅದಕ್ಕೇನು? ನನಗೆ ತಿಳಿದಮಟ್ಟಿಗೆ ಉತ್ತರಹೇಳುವೆನು" ಎಂದನು. ಆಗ ಪೀಲಿಯಾಸನು "ಮಗೂ! ನಿನ್ನ ಸರ್ವಸ್ವವನ್ನೂ ಅಪಹರಿಸಿಕೊಂಡು ನಿನ್ನನ್ನು ಕೊಂದುಬಿಡಬೇಕೆಂದಿರುವ ಬಬ್ಬ ಶತ್ರುವು ನಿನಗೆ ಎದುರಾಗಿರುವನೆಂದು ಭಾವಿಸಿಕೊ; ಅಂತಹವನನ್ನು ಸುಲಭವಾಗಿಯೂ ಲೋಕಾಪವಾದವಿಲ್ಲದಂತೆಯೂ ನಿಗ್ರಹಿಸಬೇಕಾದರೆ ನೀನು ಏನುಮಾಡುವೆ?" ಎಂದು ಕೇಳಿದನು. ಜೇಸನ್ನನು ಸ್ವಲ್ಪಹೊತ್ತು ಯೋಚಿಸುತ್ತಿದ್ದು ತನ್ನ ಚಿಕ್ಕಪ್ಪನನ್ನು ನೋಡುತ್ತಾ "ಇಂತಹ ಸಂದರ್ಭದಲ್ಲಿ ನನ್ನ ಶತ್ರುವಿಗೆ ಯಾವುದಾದರೂ ಒಂದು ಅಸಾಧ್ಯವಾದ ಕೆಲಸವನ್ನು ಮಾಡಿಕೊಂಡು ಬರುವಂತೆ ಒಪ್ಪಿಸಿ ಅವನನ್ನು ಕಳುಹಿಸಿಬಿಡುವೆನು" ಎಂದು ಉತ್ತರಕೊಟ್ಟನು. ಪೀಲಿಯಾಸನು ಈ ಉತ್ತರವನ್ನು ಕೇಳಿ ಬಹಳ ಸಂತೋಷಪಟ್ಟವನಂತೆ ತೋರ್ಪಡಿಸಿಕೊಳ್ಳುತ್ತಾ ಜೇಸನ್ನಿಗೆ ಮತ್ತೂ ಉಪಚಾರವನ್ನು ಮಾಡಿದನು.

೧೯. ಈ ಮಧ್ಯದಲ್ಲಿ ಕವಿಗಳು ಒಬ್ಬರಾದಮೇಲೆ ಒಬ್ಬರಂತೆ ತಮ್ಮತಮ್ಮ ವೀಣೆಗಳನ್ನು ನುಡಿಸುತ್ತಾ ಪೂರ್ವಕಾಲದ ಶೂರರು ಮಾಡಿದ್ದ ಅನೇಕ ಸಾಹಸಕೃತ್ಯಗಳನ್ನು ಅದ್ಭುತವಾಗಿ ವರ್ಣಿಸುತ್ತಾ ಇದ್ದರು. ಅವರಲ್ಲಿ ಅತ್ಯುತ್ತಮನಾದ ಕವಿಯು ಪೀಲಿಯಾಸನು ಹಿಂದೆ ಸೂಚಿಸಿದ್ದಂತೆಯೆ ಕನಕರ್ಣದ ವೃತ್ತಾಂತವನ್ನೂ, ಅದನ್ನು ತರುವುದಕ್ಕಾಗಿ ಸಾಹಸಮಾಡಿ ನಾಶವಾಗಿದ್ದ ಅನೇಕ ಮಹಾಶೂರರ ವೃತ್ತಾಂತವನ್ನೂ, ಬಹಳ ಮನೋಹರವಾಗಿ ವರ್ಣಿಸಿದನು. ಆ ಸಭಾಮಂದಿರದಲ್ಲಿದ್ದ ತರುಣವಯಸ್ಕರೆಲ್ಲರಿಗೂ ಆ ಕವಿಯ ವರ್ಣನೆಯನ್ನು ಕೇಳಿ ಉತ್ಸಾಹವು ಇಮ್ಮಡಿಸಿದ್ದಿತು. ತನಗೆ ತಕ್ಕ ಸಮಯವು ಒದಗಿತೆಂದು ತಿಳಿದು ಪೀಲಿಯಾಸನು ಜೇಸನ್ನನ್ನು ಕುರಿತು "ಮಗೂ! ಈ ಕವಿಯ ವರ್ಣನೆಯನ್ನು ಕೇಳಿದೆಯಾ? ಆದರೆ ಅಂತಹ ಸಾಹಸಕಾರ್ಯಗಳು ನಮ್ಮವರ ಕಾಲಕ್ಕೇ ಮುಗಿದುಹೋದುವು. ಈ ಕಾಲದ ದುರ್ಬಲರಾದ ತರುಣರ ಕೈಯಿಂದ ಇಂತಹ ಕೆಲಸಗಳು ಆಗುವುವೆ?" ಎಂದು ಮೂದಲಿಸಿದನು. ಈಗ ಜೇಸನ್ನಿಗೆ ತಾನು ಹಿಂದೆ ಹೇಳಿದ್ದ ಉತ್ತರವು ಜ್ಞಾಪಕಕ್ಕೆ ಬಂದು ತನ್ನನ್ನು ಉಪಾಯವಾಗಿ ಸಾಗಹಾಕುವುದಕ್ಕಾಗಿಯೇ ತಂತ್ರಿಯಾದ ತನ್ನ ಚಿಕ್ಕಪ್ಪನು ಅಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿದ್ದನೆಂದು ತಟ್ಟನೆ ಅವನ ಮನಸ್ಸಿಗೆ ಹೊಳೆಯಿತು. ಆದರೆ ಮಹಾತ್ಮನಾದ ಗುರುವಿನ ಬೋಧನೆಯಿಂದ ಜೇಸನ್ನಿನಲ್ಲಿ ಉತ್ಸಾಹವೂ, ಧೈರ್ಯವೂ, ಆತ್ಮಗೌರವಬುದ್ಧಿಯೂ, ತಾನು ಕೊಟ್ಟಮಾತನ್ನು ಉಳಿಸಿಕೊಳ್ಳಬೇಕೆಂಬ ಜ್ಞಾನವೂ, ಚೆನ್ನಾಗಿ ವೃದ್ಧಿಯಾಗಿದ್ದುವು. ಆದುದರಿಂದ ಅವನು ಪೀಲಿಯಾಸನ್ನು ಕುರಿತು "ಚಿಕ್ಕಪ್ಪಾ! ಇದೇಕೆ ಹೀಗೆ ಹೇಳುವೆ? ಕನಕರ್ಣ ವನ್ನು ನಾನು ತೆಗೆದುಕೊಂಡು ಬರುವೆನು. ಒಂದುವೇಳೆ ಅದು ಸಿಕ್ಕದಿದ್ದರೆ ಪೂರ್ವದ ಶೂರರಹಾಗೆಯೇ ನಾನೂ ಆ ಪ್ರಯತ್ನದಲ್ಲೇ ಪ್ರಾಣಬಿಡುವೆನು. ಕನಕರ್ಣವನ್ನು ನಾನು ತಂದ ಪಕ್ಷದಲ್ಲಿ ನಮ್ಮತಂದೆಯ ರಾಜ್ಯವನ್ನು ಬಿಟ್ಟುಕೊಡುವೆಯಷ್ಟೆ?" ಎಂದು ಕೇಳಿದನು. ಇದಕ್ಕೆ ಉತ್ತರಕೊಡಲು ಪೀಲಿಯಾಸಿಗೆ ಸ್ವಲ್ಪವಾದರೂ ಸಂದೇಹವಿರಲಿಲ್ಲ. ಆದರೂ ಅವನು "ಮಗೂ! ಈ ಅಸಾಧ್ಯವಾದ ಕೆಲಸಕ್ಕೆ ನಿನ್ನನ್ನು ಕಳುಹಿಸುವುದಕ್ಕೆ ನನಗೆ ಮನಸ್ಸೇಬಾರದು; ಆದರೂ ನೀನು ಕೀರ್ತಿಯನ್ನು ಸಂಪಾದಿಸಬೇಕೆಂದಿದ್ದರೆ

ಅದಕ್ಕೆ ನಾನೇಕೆ ಅಡ್ಡಿಮಾಡಲಿ? ಹೋಗಿಬಿಟ್ಟು ಬಾರಪ್ಪಾ!'' ಎಂದು ಅತಿವಿನಯದಿಂದ ಹೇಳಿ ಅವನನ್ನು ಕಳುಹಿಸಿಕೊಟ್ಟನು.

ನಾಲ್ಕನೆಯ ಪ್ರಕರಣ.

ಪ್ರಯಾಣಸನ್ನಾಹವೂ—ಪ್ರಯಾಣವೂ.

ಐಯಾಲ್ಯಾಸನ್ನು ಬಿಡುವುದಕ್ಕೆ ಮುಂಚೆ, ಜೇಸನ್ನನು ಹಿಂದೆ ಹೇಳಿದ ವಿಲಕ್ಷಣವಾದ ವೃಕ್ಷದ ಬಳಿಗೆ ಬಂದನು. ಆ ಮರವು ಅನೇಕ ಶತಮಾನಗಳಿಂದ ಬೆಳೆದುಕೊಂಡಿದ್ದುದರಿಂದ ಅದರ ದಪ್ಪಕೊಂಬೆಗಳು ದಿಕ್ಕುದಿಕ್ಕಿಗೂ ಹರಡಿಕೊಂಡಿದ್ದುವು. ಅದರ ಎಲೆಗಳು ದಟ್ಟವಾಗಿದ್ದಕಾರಣ ಸೂರ್ಯಚಂದ್ರರ ಕಿರಣಗಳು ಗಿಡದ ನೆರಳಿನಲ್ಲಿ ಬೀಳುತ್ತಲೇ ಇರಲಿಲ್ಲ. ಜೇಸನ್ನನು ಆ ಗಿಡದ ಕೆಳಕ್ಕೆ ಹೋಗಿ ತನ್ನ ಅಭಿಮಾನದೇವತೆಯಾದ ಹೀರಾದೇವಿಯನ್ನು ಮನಸ್ಸಿನಲ್ಲಿಯೇ ಧ್ಯಾನಮಾಡುತ್ತಾ—"ಕನಕೋರ್ಣವನ್ನು ಸಂಪಾದಿಸುವುದಕ್ಕೆ ನಾನು ಏನುಮಾಡಬೇಕು?'' ಎಂದು ಭಯಭಕ್ತಿಗಳಿಂದ ಪ್ರಶ್ನಿಸಿದನು. ಆ ಸಮಯದಲ್ಲಿ ಒಂದು ಬಿರುಗಾಳಿಯು ಎದ್ದಿತು. ಸ್ವಲ್ಪಹೊತ್ತಿನವರೆಗೂ ಆ ಮರದ ಎಲೆಗಳು ರಭಸದಿಂದ ಅತ್ತಿತ್ತ ಕದಲುತ್ತಾ ಶಬ್ದಮಾಡಿದುವು. ಇನ್ನು ಸ್ವಲ್ಪ ಹೊತ್ತಾದಮೇಲೆ ಎಲೆಗಳ ಅಲುಗಾಟವು ಸ್ವಲ್ಪಸ್ವಲ್ಪವಾಗಿ ನಿಂತು ಎಲ್ಲೆಲ್ಲಿಯೂ ನಿಶ್ಶಬ್ದವಾಯಿತು. ಆಗ "ಐವತ್ತುಮಂದಿ ನಾವಿಕರು ಪ್ರಯಾಣಮಾಡುವಂತಹ ದೋಣಿಯೊಂದನ್ನು ಆರ್ಗಸ್ಸಿನಿಂದ ಕಟ್ಟಿಸು'' ಎಂಬ ಮಾತುಗಳು ಅಸ್ಪಷ್ಟವಾಗಿ ಕೇಳಿಬಂದುವು. ವೃಕ್ಷವು ಮತ್ತೇನನ್ನಾದರೂ ಹೇಳಬಹುದೆಂದು ಜೇಸನ್ನನು ಬಹಳ ಕುತೂಹಲದಿಂದ ಇನ್ನೂ ಸ್ವಲ್ಪಹೊತ್ತು ಕಾದಿದ್ದನು. ಆದರೆ ಯಾವ ಧ್ವನಿಯೂ ಕೇಳಿಸಲಿಲ್ಲ. ಆದುದರಿಂದ, ವೃಕ್ಷವು ಹೇಳಿದ್ದ ಆರ್ಗಸ್ಸನು ಎಲ್ಲಿರುವನೋ ಎಂದು ಮನಸ್ಸಿನಲ್ಲೇ ಯೋಚಿಸುತ್ತಾ ಮುಂದೆ ಹೊರಟನು.

೨೧. ಹೀರಾದೇವಿಯ ಒಲುಮೆಯು ಜೇಸನ್ನಿನ ಮೇಲೆ ಚೆನ್ನಾಗಿ ನೆಲೆಸಿದ್ದುದರಿಂದ ಸ್ವಲ್ಪಹೊತ್ತಿನಲ್ಲೇ ಒಬ್ಬ ಬಡಗಿಯ-ಪಟ್ಟಣಿಯು ಅವನಿಗೆ ಗೋಚರವಾಯಿತು. ಬಡಗಿಯ ಹೆಸರನ್ನು ವಿಚಾರಿಸಲು ಅವನೇ ಆರ್ಗಸ್ ಎಂದು ತಿಳಿಯಬಂದಿತು. ಆತನಿಗೆ ಜೇಸನ್ನನು ತನ್ನ ಉದ್ದೇಶವನ್ನು ತಿಳಿಸುತ್ತಲೂ ಆರ್ಗಸ್ಸನು ಸಂತೋಷದಿಂದ ದೋಣಿಯನ್ನು ಕಟ್ಟಿಕೊಡಲು ಒಪ್ಪಿದುದುಮಾತ್ರವೇ ಅಲ್ಲದೆ, ಐವತ್ತು ಜನ ನಾವಿಕರುಗಳಲ್ಲಿ ತಾನೂ ಒಬ್ಬನಾಗಿರುವುದಕ್ಕೆ ಸಮ್ಮತಿಸಿದನು. ಆ ಕಾಲಕ್ಕೆ ಮುಂಚೆ ಐವತ್ತು ಜನರು ಕುಳಿತು ನಡೆಸಬಹುದಾದ ದೊಡ್ಡದೋಣಿಯನ್ನು ಎಂದಾದರೂ ಗ್ರೀಕರು ಉಪಯೋಗಿಸಿಯೇ ಇರಲಿಲ್ಲವೆಂದು ತೋರುವುದು. ಆದರೂ ದೈವೇಚ್ಛೆಯಿಂದ, ಅಷ್ಟು ದೊಡ್ಡದೋಣಿಗೆ ಬೇಕಾಗಿದ್ದ ಒಣಮರವು ಐಯಾಲ್ಕಾಸಿನಲ್ಲಿಯೇ ಸುಲಭವಾಗಿ ಸಿಕ್ಕಿತು. ಆದರಿಂದ ಆರ್ಗಸ್ಸನು ದೋಣಿಯನ್ನಾಗಿ ಮಾಡಲು ಬಹಳಕಾಲಹಿಡಿಯಲಿಲ್ಲ. ಅವನು ತನ್ನ ಆಯುಧಗಳನ್ನು ಕೈಯಲ್ಲಿ ಹಿಡಿದಮಾತ್ರಕ್ಕೇ ಅವು ತಾವಾಗಿಯೇ ಚಲಿಸಿ ಬಂದು ಅಂದವಾದ ದೋಣಿಯನ್ನು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿಬಿಟ್ಟವು.

೨೨ ಮುಂದಕ್ಕೆ ಏನುಮಾಡಬೇಕೆಂಬುದು ಜೇಸನ್ನಿಗೆ ತೋರಲಿಲ್ಲ. ಆದುದರಿಂದ ಅವನು ಆ ಆಶ್ಚರ್ಯಕರವಾದ ವೃಕ್ಷವಿದ್ದ ಡೊಡೋನಾ ಎಂಬ ಸ್ಥಳಕ್ಕೆ ಹೋಗಿ "ಮುಂದಕ್ಕೆ ಏನು ಮಾಡಬೇಕು?" ಎಂದು ಅತ್ಯಂತ ನಮ್ರತೆಯಿಂದ ಕೇಳಿಕೊಂಡನು. "ಗ್ರೀಸಿನಲ್ಲಿರುವ ಸಾಹಸಿಗಳಾದ ವೀರರುಗಳನ್ನು ಕೇಳಿಕೊಂಡರೆ ಅವರು ನಿನ್ನ ಸಹಾಯಕ್ಕೆ ಬರುವರು" ಎಂಬ ಮಾತುಗಳು ಹಿಂದಿನಂತೆಯೇ ಕೇಳಿಸಿದುವು. ಇದಕ್ಕೆ ಅನುಸಾರವಾಗಿ ಜೇಸನ್ನನು ಗ್ರೀಸಿನ ಅನೇಕ ಪ್ರದೇಶಗಳಿಗೆ ಚಾರರನ್ನು ಕಳುಹಿಸಿಕೊಟ್ಟನು. ಈ ಸುದ್ದಿಯನ್ನು ಕೇಳಿದ ಕೂಡಲೆ ನಲವತ್ತೇಳುಮಂದಿ ಮಹಾಶೂರರುಗಳು ನಾನು ತಾನೆಂದು ಐಯಾಲ್ಕಾಸಿಗೆ ಬಂದು ಸೇರಿದರು. ಪೀಲಿಯಾಸನು ಪ್ರತಿಬಂಧಿಸುತ್ತಿದ್ದರೂ ಅವನ ಮಗನಾದ ಅಕಾಸ್ಟಸ್ ಎಂಬವನೂ ಒಬ್ಬ ನಾವಿಕನಾಗಿರಲು ಗೋಪ್ಯವಾಗಿ ಒಪ್ಪಿದ್ದನು. ಹೀಗೆ ಐವತ್ತುಮಂದಿ ನಾವಿಕರೂ ಸಿದ್ಧವಾದ ಕೂಡಲೆ ಅವರುಗಳು ತಮ್ಮತಮ್ಮ ಅಭಿಮಾನದೇವತೆಗಳಿಗೆ ಪ್ರಾರ್ಥನೆಯನ್ನು ಮಾಡಿ ದೋಣಿಯನ್ನು ಸಮುದ್ರದೊಳಕ್ಕೆ [illegible]

ಜೋಕೊಡರೂ ತಮ್ಮ ಶಕ್ತಿಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸಿದರು. ಆದರೂ ದೋಣಿಯು ಒಂದು ಕೂದಲಿನ ಗೆರೆಯಷ್ಟಾದರೂ ಕದಲಲಿಲ್ಲ. ಆಗ, ಬುದ್ಧಿವಂತನಾದ ಜೇಸನ್ನನು ತಾನು ಮತ್ತೆ ಯಾವುದೋ ಒಂದು ಅಗತ್ಯವಾದ ಕಾರ್ಯವನ್ನು ಮಾಡಬೇಕಾಗಿರುವುದೆಂದು ಭಾವಿಸಿ ಪುನಃ, ಪ್ರಶ್ನೆ ಹೇಳುತ್ತಿದ್ದ ವೃಕ್ಷದಬಳಿಗೆ ಹೋಗಿ ತಾನು ಮತ್ತೇನನ್ನು ಮಾಡಬೇಕೋ ಅದನ್ನು ಅಪ್ಪಣೆಕೊಡಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಂಡನು. ಆಗ ಆ ಮರದ ಒಂದು ಕೊಂಬೆಯು "ನನ್ನನ್ನು ಕಡಿದು ಒಂದು ಬೊಂಬೆಯನ್ನು ಮಾಡಿಸಿ ದೋಣಿಯಲ್ಲಿಟ್ಟುಕೋ; ಅದೇ ನಿನ್ನ ಮುಂದಣ ಕರ್ತವ್ಯಗಳನ್ನೆಲ್ಲಾ ತಿಳಿಸುವುದು" ಎಂದು ಹೇಳಿದಂತೆ ಕೇಳಬಂದಿತು. ಅದೇಮೇರೆಗೆ ಜೇಸನ್ನನು ಆ ಕೊಂಬೆಯನ್ನು ಕ್ಷಣಮಾತ್ರದಲ್ಲಿ ಕಡಿದು ಆರ್ಗಸ್ಸಿಗೆ ತಂದುಕೊಡಲು ಅವನು ಅದರಿಂದ ಒಂದು ಸುಂದರವಾದ ಬೊಂಬೆಯನ್ನು ಹೀರಾದೇವಿಯು ಕರುಣೆಯಿಂದ ಸಿದ್ಧಪಡಿಸಿದನು.

೨೩. ಅದನ್ನು ಜೇಸನ್ನನು ಪ್ರಶ್ನಿಸಲು "ದೋಣಿಯಲ್ಲಿ ನೀವೆಲ್ಲರೂ ಕುಳಿತುಕೊಂಡ ಮೇಲೆ ಆರ್ಫಿಯಸ್ಸನು ವೀಣೆಯನ್ನು ನುಡಿಸಲಿ." ಎಂದು ಉತ್ತರಕೊಟ್ಟಿತು. ಈ ಸಮಯದಲ್ಲಿ ಪೀಲಿಯಾಸನು ಒಂದು ಎತ್ತರವಾದ ಸ್ಥಳದಲ್ಲಿ ಕುಳಿತುಕೊಂಡು ದೋಣಿಯನ್ನೇ ದುರದುರನೆ ನೋಡುತ್ತಾ "ಅದು ಹಾಗೆಯೇ ನಾಶವಾಗಿ ಹೋಗಲಿ!" ಎಂದು ಮನಸ್ಸಿನಲ್ಲಿ ಎಂದುಕೊಳ್ಳುತ್ತಾ ಇದ್ದನು. ಅವನ ಪ್ರಜೆಗಳೆಲ್ಲರೂ ಸಮುದ್ರತೀರಕ್ಕೆ ತಂಡತಂಡವಾಗಿ ಬಂದು ಮುಂದೆ ಏನಾಗುವುದೋ ಎಂದು ಅತ್ಯಂತ ಕುತೂಹಲದಿಂದ ನೋಡುತ್ತಿದ್ದರು. ಆರ್ಫಿಯಸ್ಸನು ತನ್ನ ಬೆರಳುಗಳಿಂದ ವೀಣೆಯನ್ನು ಒಂದುಸಲ ಮೀಟಿದ ಕೂಡಲೆ ವೀಣಾಧ್ವನಿಯನ್ನು ಕೇಳಿದ ಜನರೆಲ್ಲರೂ ಕುಣಿಯಲಾರಂಭಿಸಿದರು. ಆ ದೋಣಿಯು ಚಲಿಸಿ ತಾನಾಗಿಯೇ ಸಮುದ್ರವನ್ನು ಪ್ರವೇಶಿಸಿತು. ಆ ಸಮಯದಲ್ಲಿ ಪ್ರಜೆಗಳೆಲ್ಲರೂ ಉತ್ಸಾಹದಿಂದ ಆರ್ಭಟಿಸುತ್ತಾ "ಹೋಗಿಬನ್ನಿ, ನಿಮಗೆ ಜಯವಾಗಲಿ" ಎಂದು ಗಟ್ಟಿಯಾಗಿ ಹೇಳಿ ಹರಸಿದರು. ಪೀಲಿಯಾಸನುಮಾತ್ರ ತನಗೆ ಬಂದಿದ್ದ ಅಪಮೃತ್ಯುವು ತೊಲಗಿತಲ್ಲಾ ಎಂದು ಭಾವಿಸಿಕೊಳ್ಳುತ್ತಾ, ಜೇಸನ್ನನೂ, ಅವನ ಸಂಗಡಿಗರೂ ಹಿಂದಿರುಗದಂತೆಯೇ ಮಾಡಬೇಕೆಂದು ತನಗೆ ಜ್ಞಾಪಕಕ್ಕೆ ಬಂದ

ದೇವತೆಗಳಿಗೆಲ್ಲಾ ಕೈಮುಗಿದು ಬಗೆಬಗೆಯ ಹರಕೆಗಳನ್ನು ಕಟ್ಟಿಕೊಳ್ಳುತ್ತಿದ್ದನು.

೨೪. ದೋಣಿಯ ನಾವಿಕರಲ್ಲಿ ಲಿನ್ಸಿಯಸ್ ಎಂಬಾತನು ಒಬ್ಬನಿದ್ದನು. ಅವನ ದೃಷ್ಟಿಪಾಟವವು ಅದ್ಭುತವಾಗಿದ್ದಿತು. ಸಮುದ್ರದ ತಳದಲ್ಲಿ ಎಷ್ಟೋಕಾಲಕ್ಕೆ ಹಿಂದೆ ಮುಳುಗಿಹೋಗಿದ್ದ ನಿಧಿಗಳನ್ನು ನೋಡಿದಾಗಲೆಲ್ಲಾ "ಇಗೋ! ಇಲ್ಲಿ ಚಿನ್ನದನಾಣ್ಯಗಳ ಪೆಟ್ಟಿಗೆಯೊಂದು ಬಿದ್ದುಹೋಗಿರುವುದು! ಇಗೋ! ಇಲ್ಲಿ ಮುತ್ತಿನಹಾರವು! ಅಗೋ! ಅಲ್ಲಿ ವಜ್ರಗಳ ಕಂಠಿಕೆ!" ಎಂದು ಆಗಾಗ ತನ್ನ ಸಂಗಡಿಗರೊಡನೆ ಹೇಳುತ್ತಿದ್ದನು. ಅನುಕೂಲವಾದ ಗಾಳಿಯು ಬೀಸುತ್ತಿದ್ದಿತು; ನಾವಿಕರುಗಳು ಉತ್ಸಾಹದಿಂದ ದೋಣಿಯನ್ನು ನಡೆಸುತ್ತಾ ಅನೇಕ ಮೈಲುಗಳ ದೂರ ಕೆಲವು ಗಂಟೆಗಳಲ್ಲೇ ಪ್ರಯಾಣಮಾಡಿದರು.

೨೫. ಅಷ್ಟುಹೊತ್ತಿಗೆ ಸಮುದ್ರತೀರದಲ್ಲಿ ನಿಂತು ನೋಡುತ್ತಿದ್ದ ಪ್ರಜೆಗಳೆಲ್ಲರೂ ಸಾಕಾಗಿ ತಮ್ಮತಮ್ಮ ಕೆಲಸಗಳಿಗೆ ಹೊರಟುಹೋಗಿದ್ದರು. ಪೀಲಿಯಾಸನುಮಾತ್ರ ತನ್ನ ಎತ್ತರವಾದ ಸ್ಥಾನದಲ್ಲಿ ಮೆಟ್ಟುಂಗಾಲು ಹಾಕಿಕೊಂಡು ಕಣ್ಣನ್ನು ಹೊಸಕಿಕೊಳ್ಳುತ್ತಾ ದೋಣಿಯು ಈಗ ಮುಳುಗಿಹೋಗುವುದು, ಆಗ ಮುಳುಗಿಹೋಗುವುದು, ಎಂದು ಭ್ರಮಿಸಿಕೊಳ್ಳುತ್ತಾ ನೋಡುತ್ತಲೇ ಇದ್ದುದು ಲಿನ್ಸಿಯಸ್ಸಿಗೆ ಕಾಣಬಂದಿತು. ಇದನ್ನು ಆತನು ತನ್ನಸಂಗಡಿಗರಿಗೆ ತಿಳಿಸಲು, ಅವರು ಗೊಳ್ಳೆಂದು ನಕ್ಕು ಮತ್ತಷ್ಟು ಉತ್ಸಾಹದಿಂದ ತಮ್ಮ ದೋಣಿಯನ್ನು ನಡೆಸಿಕೊಂಡು ಹೋದರು. ಬಿರುಗಾಳಿಯಿಂದ ಸಮುದ್ರವು ಉತ್ಲೋಲಕಲ್ಲೋಲವಾದ ಕೂಡಲೆ ಆರ್ಫಿಯಸ್ಸನು ತನ್ನ ವೀಣೆಯನ್ನು ನುಡಿಸಲಾರಂಭಿಸಲು ಸಮುದ್ರವು ಶಾಂತವಾಗುತ್ತಿದ್ದಿತು. ಹೀಗೆ ದೋಣಿಯು ಯಾವ ಅಪಾಯವೂ ಇಲ್ಲದೆ ಸಮುದ್ರದ ಮೇಲೆ ದೊಡ್ಡತರಂಗಗಳ ನಡುವೆ ನಲಿಯುತ್ತಾ ಮುಂದಕ್ಕೆ ಹೊರಟಿತು.

ಐದನೆಯ ಪ್ರಕರಣ.

ನಾವಿಕರ ಮೊದಲನೆಯ ಸಂಮೋಹನ.

ಜೇಸನ್ನನು ತನ್ನ ಸಂಗಡಿಗರೊಡನೆ ಐಯುಲ್ಕಾಸ್ ಪಟ್ಟಣದಿಂದ ಪ್ರಯಾಣ ಹೊರಟಾಗ ಸಿಕ್ಕಿದ ಸಮುದ್ರಕ್ಕೆ ಈಗಿನ "ಈಜಿಯನ್ ಸಮುದ್ರ" ಎಂಬ ಹೆಸರಿರಲಿಲ್ಲ. ಜೇಸನ್ನಿನ ಸಂಗಡಿಗರಲ್ಲಿ ಒಬ್ಬನಾದ ಥೀಸಿಯಸ್ ಎಂಬಾತನ ತಂದೆಯ ಹೆಸರು ಈಜಿಯಸ್ ಎಂದು ಈತನು ಪುತ್ರವ್ಯಾಮೋಹದಿಂದ ಈ ಸಮುದ್ರದಲ್ಲಿ ಬಿದ್ದು ಪ್ರಾಣವನ್ನು ಕಳೆದುಕೊಂಡುದರಿಂದ ಆಗಿನಿಂದಲೂ ಇದಕ್ಕೆ ಈಜಿಯನ್ ಸಮುದ್ರವೆಂದು ಹೆಸರಾಯಿತು. ಈ ಕಡಲಿನಲ್ಲಿ ಅನೇಕ ದ್ವೀಪಗಳಿರುವುವು. ಇವುಗಳಲ್ಲಿ ಲೆಮ್ನಾಸ್ ಎಂಬುದು ಪುರಾಣಪ್ರಸಿದ್ಧವಾದುದು. ನಮ್ಮ ಅಗ್ನಿದೇವನಿಗೂ ವಿಶ್ವಕರ್ಮನಿಗೂ ಸ್ವಲ್ಪಸ್ವಲ್ಪ ಹೋಲುವ ದೇವತೆಯೊಬ್ಬನು ಗ್ರೀಕರಲ್ಲಿಯೂ ಇದ್ದನು. ಆತನಿಗೆ ಹೆಫೆಸ್ಟಸ್ ಎಂಬ ಹೆಸರಿದ್ದಿತು. ಒಂದಾನೊಂದು ಕಾಲದಲ್ಲಿ ಗ್ರೀಕರ ದೇವದೇವನಾದ ಜ್ಯೂಸನು ಕೋಪಗೊಂಡು ಇವನನ್ನು ದೇವಲೋಕದಿಂದ ನೂಕಿಬಿಡಲು ಹೆಫೆಸ್ಟಸ್ಸನು ಈ ಲೆಮ್ನಾಸ್ ದ್ವೀಪದಲ್ಲಿ ಬಿದ್ದುಬಿಟ್ಟನೆಂದೂ ಆಗ ಈ ದೇವತೆಗೆ ಒಂದುಕಾಲು ಕುಂಟಾಯಿತೆಂದೂ, ಭೂಲೋಕದಲ್ಲಿ ಈ ದೇವತೆಗೆ ಮೊತ್ತಮೊದಲು ಇದೇ ಆಶ್ರಯಸ್ಥಾನವಾದುದರಿಂದ ಲೆಮ್ನಾಸ್ ದ್ವೀಪವು ಈ ದೇವತೆಗೆ ಪ್ರೀತಿಪಾತ್ರವಾದುದೆಂದೂ ಗ್ರೀಕರಲ್ಲಿ ಭಾವನೆಯಿದ್ದಿತು.

೨೩. ಆ ದ್ವೀಪದ ನಿವಾಸಿಗಳು ಎಷ್ಟೋಕಾಲದಿಂದ ಅಫ್ರೊಡೈಟ ಎಂಬ ಒಬ್ಬ ದೇವತೆಯನ್ನು ಪೂಜಿಸುತ್ತಿದ್ದರು. ಆದರೆ ಈ ಕಾಲಕ್ಕೆ ಸ್ವಲ್ಪಮುಂಚೆ ಅವರು ತಮ್ಮ ಸುಖಸಂತೋಷಗಳಲ್ಲಿ ಈ ದೇವಿಯ ಆರಾಧನೆಯನ್ನು ಅಲಕ್ಷ್ಯಮಾಡಿಬಿಟ್ಟಿದ್ದರು. ದೇವರನ್ನು ನಿರಾಕರಿಸುವುದರಿಂದ ಎಂದಿಗೂ ಒಳ್ಳೆಯದಾಗದಷ್ಟೆ? ಆದುದರಿಂದ ಅಫ್ರೊಡೈಟಗೆ ಕೋಪಬಂದು ಆ ದ್ವೀಪದ ಪುರುಷನಿವಾಸಿಗಳೆಲ್ಲರೂ ಕೊಲೆಯಾಗಿ ಹೋಗಲಿ ಎಂದು

ಶಾಪವನ್ನು ಕೊಟ್ಟುಬಿಟ್ಟಿದ್ದ ಮೊಹರಿಗೆ ಆ ಶಾಪವು ಫಲಿಸಿ, ಆ ದ್ವೀಪದ ರಾಣಿಯು ಮುದುಕತಂದೆಯೊಬ್ಬನು ವಿನಾ ಉಳಿದ ಗಂಡುಸರೆಲ್ಲರೂ ನಾಶವಾಗಿಹೋಗಿದ್ದರು. ಸುತ್ತುಮುತ್ತಲಿನ ದ್ವೀಪಗಳ ನಿವಾಸಿಗಳು ತಮಗೆ ಅನುಕೂಲವಾದ ಸಮಯವು ಸಿಕ್ಕಿತೆಂದು ತಿಳಿದು, ಲೆಮ್ನಾಸ್ ದ್ವೀಪಕ್ಕೆ ಬಹಳ ಬಾಧೆಯನ್ನುಂಟುಮಾಡುತ್ತಿದ್ದರು. ಗ್ರೀಸಿನಿಂದ ಬಂದ ಈ ನಾವಿಕರು ಲೆಮ್ನಾಸಿನಲ್ಲಿ ಕಾಲಿಟ್ಟಕೂಡಲೆ ರಾಣಿಯು ಜೇಸನ್ನಿನೊಡನೆ ತನ್ನ ದ್ವೀಪದ ಕಷ್ಟಗಳನ್ನೆಲ್ಲಾ ಹೇಳಿಕೊಂಡು ಆ ಶೂರರ ಸಹಾಯವನ್ನು ಬೇಡಿದಳು; ಜೇಸನ್ನಿನ ಸಂಗಡಿಗರಲ್ಲಿ ಒಬ್ಬನಾದ ಹರ್ಕ್ಯುಲೀಸ್ ಎಂಬಾತನ ವಶದಲ್ಲಿ ಆರ್ಗೋ ಎಂಬ ತಮ್ಮ ದೋಣಿಯನ್ನು ಇರಿಸಿ ಉಳಿದವರೆಲ್ಲರೂ ದ್ವೀಪದೊಳಕ್ಕೆ ಹೋಗಿ ಅಲ್ಲಿದ್ದ ಶತ್ರುಗಳನ್ನೆಲ್ಲಾ ಚೆನ್ನಾಗಿ ಶಿಕ್ಷಿಸಿ ಅವರನ್ನು ಓಡಿಸಿಬಿಟ್ಟರು. ಇವರ ಈ ಉಪಕಾರಕ್ಕಾಗಿ ಆ ದ್ವೀಪದ ನಿವಾಸಿಗಳು ಜೇಸನ್ ಮೊದಲಾದವರನ್ನು ಬಹಳವಾಗಿ ಉಪಚರಿಸಿದರು.

೨೮. ದೋಣಿಯ ಕಾವಲಿಗಾಗಿ ಹಿಂದೆ ನಿಂತಿದ್ದ ಹರ್ಕ್ಯುಲೀಸನು ಬಹಳ ಅಸಾಧಾರಣಪುರುಷನು: ದೇಹಬಲದ ವಿಷಯದಲ್ಲಿ ಇವನು ನಮ್ಮ ಭೀಮಸೇನನಂತೆಯೇ ಬಹುಪ್ರಸಿದ್ಧನು. ವಾಯುದೇವನ ಅಂಶವು ಭೀಮನಲ್ಲಿದ್ದಿತೆಂದು ನಾವು ಹೇಗೆ ಭಾವಿಸಿರುವೆವೋ, ಹಾಗೆಯೇ ಜ್ಯೂಸಿನ ಅಂಶವು ಹರ್ಕ್ಯುಲೀಸನಲ್ಲಿದ್ದಿತೆಂದು ಗ್ರೀಕರು ಭಾವಿಸಿದ್ದರು. ಈ ಶೂರನು ಇನ್ನೂ ಎಂಟುವರುಷದ ಹುಡುಗನಾಗಿದ್ದಾಗ ದೊಡ್ಡ ಎರಡು ಹೆಬ್ಬಾವುಗಳನ್ನು ತನ್ನ ಪುಟ್ಟಹಿಡಿಗಳಿಂದ ಹಿಸುಕಿ ಕೊಂದುಬಿಟ್ಟಿದ್ದನಂತೆ! ಈತನು ಹೀಗೆಯೇ ಅನಿತರಸಾಧಾರಣವಾದ ಅನೇಕ ಕಾರ್ಯಗಳನ್ನು ಮಾಡಿದ್ದುದರಿಂದ, ಗ್ರೀಕರಲ್ಲಿ ಈತನಿಗೆ ಬಹಳ ಗೌರವವಿದ್ದಿತು. ಆರ್ಗೋನಾವೆಯು ಪ್ರಯಾಣಮಾಡುವುದಕ್ಕೆ ಮುಂಚೆ ಆ ದೋಣಿಯ ನಾವಿಕರೆಲ್ಲರೂ ಹರ್ಕ್ಯುಲೀಸನನ್ನೇ ತಮ್ಮ ಪ್ರಮುಖನನ್ನಾಗಿ ಮಾಡಿಕೊಳ್ಳಲು ಯತ್ನಿಸಿದರು. ಅವರೆಲ್ಲರೂ ಏಕವಾಕ್ಯದಿಂದ ಈ ವಿಷಯವಾಗಿ ಆತನನ್ನು ಪ್ರಾರ್ಥಿಸಿಕೊಂಡರು. ಆದರೆ ಮಹಾತ್ಮರಲ್ಲಿ ಸ್ವಾರ್ಥಪರತೆಯು ಇರುವುದಿಲ್ಲ. ಆದುದರಿಂದ, ಆ ದೋಣಿಯನ್ನು ಬಹುಕಷ್ಟಪಟ್ಟು ಏರ್ಪಡಿಸಿ, ತಮ್ಮೆಲ್ಲರನ್ನೂ ಗ್ರೀಸಿನ ನಾನಾಪ್ರಾಂತ್ಯಗಳಿಂದ ಬರಮಾಡಿಕೊಂಡಿದ್ದ ಜೇಸನ್ನನೇ

ಆ ದೋಣಿಗೆ ಮುಖ್ಯಸ್ಥನಾಗಿರಬೇಕೆಂದು ಹೆರ್ಕ್ಯುಕ್ಲಿಸನು ಪಟ್ಟುಹಿಡಿದುದು ಮಾತ್ರವಲ್ಲದೆ, ಜೇಸನ್ನಿನ ಅಪ್ಪಣೆಗೆ ಅನುಸಾರವಾಗಿಯೇ ತಾನು ನಡೆದುಕೊಳ್ಳುವುದಾಗಿ ಆಣೆಯಿಟ್ಟುಕೊಂಡನು. ತಮಗಿಂತಲೂ ಗಟ್ಟಿಗನಾದವನೇ ಹಾಗೆಹೇಳಲು, ಉಳಿದವರು ಜೇಸನ್ನನ್ನೇ ತಮ್ಮ ಯಜಮಾನನನ್ನಾಗಿ ಸಂತೋಷದಿಂದ ಅಂಗೀಕರಿಸಿದರು.

೧೯. ಹೆರ್ಕ್ಯುಕ್ಲಿಸನು ಬಲಿಷ್ಠನಾಗಿದ್ದುದು ಮಾತ್ರವಲ್ಲದೆ ಬಹಳ ವಿವೇಕಿಯೂ ಆಗಿದ್ದನು. ಆದುದರಿಂದಲೇ ನಾವಿಕರು ಲೆಮ್ನಾಸಿನ ತೀರದಲ್ಲಿ ದೋಣಿಯನ್ನು ಆತನೊಬ್ಬನ ವಶದಲ್ಲಿಯೇ ಬಿಟ್ಟು ಧೈರ್ಯದಿಂದ ದ್ವೀಪವನ್ನು ಪ್ರವೇಶಿಸಿದ್ದುದು. ಭೋಗಭಾಗ್ಯಗಳು ಎಂತೆಂತಹವರನ್ನೂ ಸುಲಭವಾಗಿ ಮರುಳುಗೊಳಿಸಿಬಿಡುವುವು. ಆ ದ್ವೀಪದ ನಿವಾಸಿಗಳು ಜೇಸನ್ ಮೊದಲಾದವರಿಗೆ ಮಾಡಿದ ಆದರಾತಿಥ್ಯಗಳಿಂದ ಅವರ ಕರ್ತವ್ಯಜ್ಞಾನವು ಮಸುಳಿಸಿಹೋಗಿದ್ದಿತು : ತಮ್ಮ ದೋಣಿಯನ್ನು ಬಿಟ್ಟು ಎಷ್ಟು ದಿನಗಳಾದುವೆಂಬುದನ್ನು ಅವರು ಸ್ವಲ್ಪ ಕಾಲದಲ್ಲಿಯೇ ಮರೆತುಬಿಟ್ಟರು. ಇತ್ತ ಹೆರ್ಕ್ಯುಕ್ಲಿಸನು ಒಂಟಿಯಾಗಿಯೇ ಇದ್ದುಕೊಂಡು, ತನ್ನ ಸಂಗಡಿಗರು " ಇಂದು ಹಿಂದಿರುಗುವರು ; ನಾಳೆ ಬಂದುಬಿಡುವರು " ಎಂದುಕೊಳ್ಳುತ್ತಾ ಅನೇಕ ತಿಂಗಳುಗಳನ್ನು ಕಳೆದನು. ಹೀಗೆ ಎರಡು ವರುಷಗಳಾದರೂ ತನ್ನ ಸಂಗಡಿಗರು ಬರುವ ಸುಳಿವೇ ಕಾಣಲಿಲ್ಲ. ಆದುದರಿಂದ ಸಮುದ್ರತೀರಕ್ಕೆ ಬಂದಿದ್ದ ಒಬ್ಬನನ್ನು ವಿಚಾರಿಸಿ, ತನ್ನ ಸಂಗಡಿಗರೆಲ್ಲರೂ ಭೋಗಾಸಕ್ತರಾಗಿದ್ದುದನ್ನು ತಿಳಿದು, ಹೆರ್ಕ್ಯುಕ್ಲಿಸನು ಅವರ ಕರ್ತವ್ಯಪರಾಙ್ಮುಖತೆಯನ್ನು ಚೆನ್ನಾಗಿ ಹಂಗಿಸಿ ಹೇಳಿಕಳುಹಿಸಿದನು.

೨೦. ಈಗ ಜೇಸನ್ನಿಗೆ ತಾನು ಹೊರಟಿದ್ದ ಕಾರ್ಯದ ವಿಷಯವೂ, ತನ್ನತಂದೆಯು ಅಜ್ಞಾತವಾಸದಲ್ಲಿದ್ದುದೂ ಜ್ಞಾಪಕಕ್ಕೆ ಬಂದುವು. ತಾನು ಹಾಗೆ ಸುಖಾಸಕ್ತನಾಗಿದ್ದುದಕ್ಕಾಗಿ ಬಹಳ ಮರುಗಿ ಕೂಡಲೆ ತನ್ನ ಸಂಗಡಿಗರನ್ನೆಲ್ಲಾ ಕರೆದುಕೊಂಡು ದೋಣಿಯಬಳಿಗೆ ಬಂದು, ಹೆರ್ಕ್ಯುಕ್ಲಿಸನನ್ನು ವಂದಿಸಿ, ಅವನ ಕ್ಷಮಾಪಣೆಯನ್ನು ಕೇಳಿಕೊಂಡನು. ಈಸಾರಿ ತಮಗೆ ಒದಗಿದ್ದ ತಡೆಯನ್ನು ಅಷ್ಟರಲ್ಲಿ ಅನೇಕರು ಮರೆಯದೆ ಜ್ಞಾಪಕದಲ್ಲಿಟ್ಟ

ದ್ದುದರಿಂದ, ಅವರು ಮುಂದೆ ಭೋಗಾಪೇಕ್ಷಿಗಳಾಗದೆ ಎಷ್ಟೋ ಮಹಾಕಾರ್ಯಗಳನ್ನು ಮಾಡಲು ಸುಲಭವಾಯಿತು.

೩೧. ನಾವಿಕರೆಲ್ಲರೂ ತಮ್ಮ ದೋಣಿಯನ್ನು ಬೇಗಬೇಗನೆ ನಡೆಸಿಕೊಂಡು ಮುಂದಕ್ಕೆ ಹೊರಟರು. ದಾರಿಯಲ್ಲಿ ಸಣ್ಣ ಸಣ್ಣ ದ್ವೀಪಗಳು ಅನೇಕವಾಗಿ ಸಿಕ್ಕಿದುವು. ಅವರು ರಾತ್ರಿಯನ್ನು ಕಳೆಯುವುದಕ್ಕಾಗಿ ಯಾವುದಾದರೊಂದು ದ್ವೀಪದಲ್ಲಿ ನಿಲ್ಲುತ್ತಾ, ಪುನಃ ಹೊರಟು ಬಹುದೂರ ಪ್ರಯಾಣಮಾಡಿದರು. ಕಡೆಗೆ ಸ್ಯಾಮೊಥ್ರೇಸ್ ಎಂಬ ಒಂದು ದ್ವೀಪಕ್ಕೆ ಬಂದು ಅಲ್ಲಿ ಒಂದೆರಡುದಿನ ತಂಗಿದ್ದರು. ಈ ದ್ವೀಪಕ್ಕೂ ಹೆಲ್ಲೆಸ್‌ಪಾಂಟ್ ಎಂಬ ಜಲಸಂಧಿಗೂ ಸುಮಾರು ೫೦ ಮೈಲುಗಳು. ಆರ್ಗೋ ನಾವಿಕರು ಈ ಜಲಸಂಧಿಯೊಳಗೆ ಪ್ರಯಾಣಮಾಡಿ ಮುಂದಕ್ಕೆ ಹೋಗಬೇಕಾಗಿದ್ದಿತು.

ಮೂರನೆಯ ಪ್ರಕರಣ.

ಕನಕೋರ್ಣದ ಪೂರ್ವವೃತ್ತಾಂತ.

ಜೇಸನ್ನನು ಹುಟ್ಟುವುದಕ್ಕೆ ಒಂದೆರಡು ತಲೆಗಳಿಗೆ ಮುಂಚೆ, ಗ್ರೀಸಿನ ಬಿಯೋಷಿಯ ಎಂಬ ಪ್ರಾಂತದಲ್ಲಿ ಅಥಾಮಸ್ ಎಂಬೊಬ್ಬ ರಾಜನಿದ್ದನು. ಅವನು ಯುವಕನಾಗಿದ್ದಾಗ ತನ್ನ ರಾಜ್ಯದಲ್ಲಿದ್ದ ಒಂದು ಬೆಟ್ಟವನ್ನು ಸೂರ್ಯೋದಯಕ್ಕೆ ಮುಂಚೆ ಹತ್ತಿ ಅಲ್ಲಿಂದ ಸುತ್ತುಮುತ್ತಲಿನ ಪ್ರಕೃತಿಸೌಂದರ್ಯವನ್ನು ನೋಡಿ ಆನಂದಪಟ್ಟುಕೊಳ್ಳುತ್ತಿದ್ದನು. ಆ ಸಮಯದಲ್ಲಿ ಕೆಲವರು ಸ್ತ್ರೀಯರ ಧ್ವನಿಯು ಕೇಳಬಂದುದರಿಂದ ಅವನು ಶಬ್ದವು ಕೇಳಬಂದ ದಿಕ್ಕಿಗೆ ತಿರುಗಿನೋಡಿದನು. ಆಗ ಆ ಬೆಟ್ಟದ ತಪ್ಪಲಿನಲ್ಲಿದ್ದ ಸುಂದರವಾದ ಒಂದು ಸರಸ್ಸಿನಲ್ಲಿ ಆವರಿಸಿಕೊಂಡಿದ್ದ ಆವಿಯ ನಡುವೆ ಕೆಲವರು ಸ್ತ್ರೀಯರು ಸಲ್ಲಾಪಮಾಡಿಕೊಳ್ಳುತ್ತಾ ಜಲಕ್ರೀಡೆಯಾಡುತ್ತಿದ್ದುದು ಕಂಡುಬಂದಿತು. ಸೂರ್ಯನು ಉದಯಿಸಿ ಸ್ವಲ್ಪಕಾಲವಾದ ಕೂಡಲೆ ಆ ಸ್ತ್ರೀಯರು ಮೊದಮೊದಲು ಪ್ರಾತಃಕಾಲದ ಮೇಘಗಳಂತೆ

ಹಾರಿಹೋಗುತ್ತಾ ಸ್ವಲ್ಪ ಹೊತ್ತಿನಲ್ಲೇ ಅದೃಶ್ಯರಾಗಿಹೋದರು. ಅಥಾಮ ಸ್ಸಿಗೆ ಆ ಯುವತಿಯರಲ್ಲಿ ಒಬ್ಬಾಕೆಯ ವಿಷಯದಲ್ಲಿ ಅನುರಾಗವು ಹುಟ್ಟಿದ್ದುದರಿಂದ, ಅವನು ಮನಸ್ಸಿನಲ್ಲಿಯೇ ಆಕೆಯನ್ನು ನೆನೆದುಕೊಳ್ಳುತ್ತಾ ರಾಜಧಾನಿಗೆ ಬಂದನು.

೩೩. ಬಹಳ ದಿನಗಳವರೆಗೂ ಅಥಾಮಸ್ಸನಿಗೆ ಈ ಚಿಂತೆಯು ಬಾಧಿಸುತ್ತಲೇ ಇದ್ದಿತು. ಒಂದಾನೊಂದು ರಾತ್ರಿ ಅನುರಾಗಾಭಿಮಾನದೇವತೆಯಾದ ಆಫ್ರೊಡೈಟಿಯು ಅಥಾಮಸ್ಸಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಆ ಸ್ತ್ರೀಯು ನೆಫೇಲಿ ಎಂಬೊಬ್ಬ ಮೇಘಕನ್ನಿಕೆಯೆಂದು ತಿಳಿಸಿ ಆಕೆಯನ್ನು ಮದುವೆಯಾಗಲು ಮಾಡಬೇಕಾದ ಉಪಾಯವನ್ನೂ ತಿಳಿಸಿದಳು. ಆತನು ಅದೇಮೇರೆಗೆ ಮಾಡಲು ನೆಫೇಲೆಯು ಬೇಸಗೆಯಲ್ಲಿ ವಿನಾ ಉಳಿದ ಕಾಲಗಳಲ್ಲಿ ಪ್ರಾತಸ್ಸಾಯಂಕಾಲಗಳಲ್ಲಿಮಾತ್ರ ಆತನೊಡನೆ ಇರುವುದಾಗಿ ನಿಬಂಧನೆಮಾಡಿಕೊಂಡು ಅಥಾಮಸ್ಸನನ್ನು ಮದುವೆಯಾಗಿ ಕೆಲವು ಕಾಲವಾದ ಬಳಿಕ ಫ್ರಿಕ್ಸಸ್ ಎಂಬ ಪುತ್ರನನ್ನೂ, ಹೆಲ್ಲೆ ಎಂಬ ಪುತ್ರಿಯನ್ನೂ ಪ್ರಸವಿಸಿದಳು. ಈ ಮಕ್ಕಳು ಬಹಳ ಸ್ಫುರದ್ರೂಪಿಗಳೂ ಸುಗುಣಿಗಳೂ ಆಗಿದ್ದರು. ಇವರನ್ನು ಕಂಡು ಎಲ್ಲರೂ ಬಹಳ ಸಂತೋಷಪಡುತ್ತಿದ್ದರು. ಇವರಿಗೆ ಸುಂದರವಾದ ಒಂದು ಕುರಿಯಮರಿಯ ಮೇಲೆ ಬಹಳ ಪ್ರೇಮವಿದ್ದಿತು. ಇದು ದೇವಾಂಶಸಂಭೂತವಾಗಿದ್ದಿತು. ಇದನ್ನು ನೆಫೇಲೆಯ ಪ್ರಾರ್ಥನೆಯ ಮೇರೆಗೆ ಒಬ್ಬ ದೇವನು ಆ ಮಕ್ಕಳ ಸಮೀಪಕ್ಕೆ ಕಳುಹಿಸಿದ್ದನು.

೩೪. ನೆಫೇಲೆಯು ಆಗಾಗ ಅರಮನೆಯನ್ನು ಬಿಟ್ಟು ಮಾಯವಾಗುತ್ತಿದ್ದುದರಿಂದ ಆಕೆಯವಿಷಯದಲ್ಲಿ ಅಥಾಮಸ್ಸಿಗೆ ಕೆಲವು ದಿನಗಳಲ್ಲೇ ಅನಾದರ ಉಂಟಾಗಿ ಐನೊ ಎಂಬ ಮತ್ತೊಬ್ಬ ಹೆಂಡತಿಯನ್ನು ಮದುವೆಯಾದನು. ಇದರಿಂದ ನೆಫೇಲೆಗೆ ಮುನಿಸುಂಟಾಗಿ ಅಥಾಮಸ್ಸನನ್ನು ಕಾಣಿಸಿಕೊಳ್ಳದೆಯೇ ಹೋದಳು. ರಾಜನು ಈ ಕಿರಿಯಹೆಂಡತಿಯನ್ನೇ ಬಹಳವಾಗಿ ಪ್ರೀತಿಸುತ್ತಾಬಂದನು. ಆಕೆಗೂ ಸ್ವಲ್ಪದಿನಗಳಲ್ಲೇ ಒಬ್ಬ ಪುತ್ರನೂ ಒಬ್ಬ ಪುತ್ರಿಯೂ ಜನಿಸಿದರು. ಆದರೆ ಇವರು ತಮ್ಮ ತಾಯಿಯಂತೆಯೇ ಕಪ್ಪಗೂ ಸಿಡುಕಿನ ಸ್ವಭಾವದವರಾಗಿಯೂ ಇದ್ದರು.

ಎತ್ತರವಾದ ಒಂದು ವೃಕ್ಷದಮೇಲೆ ತಗುಲಹಾಕಿ ತಾನೂ ಅದರಬಳಿಯಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದನು.

೩೯. ಎಯೀ ಎಂಬ ದ್ವೀಪವೇ ಕಾಲ್ಚಿಸ್ ಎಂಬ ರಾಜ್ಯಕ್ಕೆ ರಾಜಧಾನಿಯಾಗಿದ್ದಿತು. ಇಲ್ಲಿಗೆ ಎಯೀಟೀಸ್ ಎಂಬಾತನು ದೊರೆಯಾಗಿದ್ದನು. ಈತನೂ ಈತನ ತಂಗಿಯಾದ ಸರ್ಸಿ ಎಂಬ ಮಾಟಗಾತಿಯೂ ಸೂರ್ಯಾಂಶಸಂಭವರು. ಇವರು ನೆಫೀಲೆಗೆ ದೂರಬಂಧುಗಳಾಗಿದ್ದರು. ನೆಫೀಲೆಯು ಮಕ್ಕಳನ್ನು ಇಲ್ಲಿಗೆ ತಂದುಬಿಟ್ಟರೆ ಅವರಿಗೆ ಅಪಾಯವಿರದೆಂದು ಭಾವಿಸಿ ಆ ಕುರಿಯು ಹಾಗೆ ಮಾಡಿದ್ದಿತು.

೪೦. ಆದರೆ ಎಯೀಟೀಸಿಗೆ ಆ ಕನಕೋರ್ಣದ ಮೇಲೆ ಬಹಳ ಆಸೆ ಇದ್ದಿತು. ಆದುದರಿಂದ ಫ್ರಿಕ್ಸಸ್ಸಿಗೆ ಬಹಳವಾಗಿ ಉಪಚರಿಸಿ ಚಾಲ್ಸಿಯೋಪಿ ಎಂಬ ತನ್ನೊಬ್ಬ ಮಗಳನ್ನು ಅವನಿಗೆ ಮದುವೆಮಾಡಿಕೊಟ್ಟನು. ಕೆಲವು ವರುಷಗಳಾದ ಬಳಿಕ ಆ ಕನಕೋರ್ಣವನ್ನು ತನ್ನದಾಗಿಯೇ ಮಾಡಿಕೊಳ್ಳಬೇಕೆಂಬ ದುರಾಸೆಯು ಹುಟ್ಟಿ ಅವನು ಉಪಾಯವಾಗಿ ಫ್ರಿಕ್ಸಸ್ಸನನ್ನು ಕೊಲ್ಲಿಸಿಬಿಟ್ಟನೆಂದು ಹೇಳುವರು. ಆದುದರಿಂದ ಫ್ರಿಕ್ಸಸ್ಸಿನ ಆತ್ಮಕ್ಕೆ ಶಾಂತಿಯಿಲ್ಲದೆ, ಗ್ರೀಸಿನ ಶೂರರಿಗೆ ಆಗಾಗ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾ ತನ್ನ ಕೊಲೆಗೆ ಮುಯ್ಯಿತೀರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದನು. ಈ ಪ್ರತೀಕಾರೇಚ್ಛೆಯಿಂದ ಅನೇಕ ಶೂರರುಗಳು ಪ್ರಯತ್ನಿಸಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಜೇಸನ್ ಮೊದಲಾದವರೂ ಪ್ರಯಾಣಮಾಡುತ್ತಿದ್ದುದು ಈ ಉಣ್ಣೆಯನ್ನು ಗ್ರೀಸಿಗೆ ತರುವುದರಮೂಲಕ ದೇವರ ಶಾಪದಂತೆ ಎಯೀಟೀಸನನ್ನು ಕೊಂದು ಫ್ರಿಕ್ಸಸ್ಸಿನ ಆತ್ಮಕ್ಕೆ ತೃಪ್ತಿಯನ್ನುಂಟುಮಾಡುವುದಕ್ಕಾಗಿಯೇ.

ಬೆನ್ನಿನಮೇಲೆ ಕುಳ್ಳಿರಿಸಿಕೊಂಡಕೂಡಲೆ ಅದಕ್ಕೆ ಎರಡುರೆಕ್ಕೆಗಳು ಹುಟ್ಟಿದುವು. ಕ್ಷಣಮಾತ್ರದಲ್ಲಿ ಆ ಕುರಿಯು ಆಕಾಶಕ್ಕೆ ನೆಗೆದು ಪೂರ್ವಾಭಿಮುಖವಾಗಿ ಹಾರಿ ದಾರಿಯಲ್ಲಿ ಸಿಕ್ಕಿದ ಅನೇಕ ದ್ವೀಪಗಳಲ್ಲಿದ್ದ ಬೆಟ್ಟಗುಡ್ಡಗಳನ್ನೂ ನೀಲವಾದ ಸಮುದ್ರವನ್ನೂ ದಾಟಿ ಮುಂದೆಮುಂದೆ ಹೋಯಿತು.

೩೭. ಈ ಮಧ್ಯದಲ್ಲಿ ಅತ್ತಕಡೆ ಇತ್ತಕಡೆ ಭೂಮಿಯೂ ಮಧ್ಯೆ ಸಮುದ್ರದ ಕಾಲುವೆಯಂತೆಯೂ ಇದ್ದ ಜಲಪ್ರದೇಶದಬಳಿಗೆ ಈ ಮೂವರೂ ಬಂದರು. ದೂರದಲ್ಲಿ ಬೆಟ್ಟಗುಡ್ಡಗಳು ಕಾಣಿಸುತ್ತಿದ್ದುವು. ಈ ಸಮಯದಲ್ಲಿ ಒಂದು ದೊಡ್ಡ ಬಿರುಗಾಳಿಯೆದ್ದಿತು. ಕೆಳಗಡೆ ಸಮುದ್ರದಲ್ಲಿ ಬಹಳ ದೊಡ್ಡದೊಡ್ಡ ಅಲೆಗಳು ಏಳುತ್ತಾ ಒಂದಕ್ಕೊಂದಕ್ಕೆ ಬಹುರಭಸದಿಂದ ಬಡಿದು ತುಂತುರುಗಳು ಮೇಲಕ್ಕೆ ಹಾರುತ್ತಿದ್ದುವು. ಸಾಲದುದಕ್ಕೆ ಇದಿರುಕಡೆಯಿಂದ ಒಂದು ಪ್ರವಾಹವು ಬಲವಾಗಿ ಹರಿಯುತ್ತಿದ್ದಿತು. ಆದರೂ ಆ ಅಸಾಧಾರಣವಾದ ಕುರಿಗೆ ಅದ್ಭುತವಾದ ಧೈರ್ಯಸಾಹಸಾದಿಗಳು ಇದ್ದಂತೆ ಕಾಣುತ್ತಿದ್ದಿತು. ಬಹುವೇಗವಾಗಿ ಸಂಚರಿಸುತ್ತಿದ್ದುದರಿಂದ ಫ್ರಿಕ್ಸಸ್ಸಿಗೆ ಬಲುದಣಿವಾಗಿದ್ದಿತು; ಹೆಲ್ಲಿಗಂತೂ, ಈ ಜಲಸಂಧಿಯಲ್ಲಿ ಸ್ವಲ್ಪದೂರ ಬರುವುದರೊಳಗಾಗಿ ಉಸಿರಾಡುವುದಕ್ಕೆ ಕಷ್ಟವಾಯಿತು; ತಲೆ ತಿರುಗುತ್ತ ಬಂದಿತು; ಕಣ್ಣುಗಳಿಗೆ ಕತ್ತಲೆ ಕವಿದುಕೊಂಡಿತು; ಆ ಕುರಿಯ ತುಪ್ಪಟವನ್ನು ಹಿಡಿದುಕೊಂಡಿದ್ದ ಹಿಡಿತವು ಸಡಿಲವಾಗಿ ಅವಳು ಸಮುದ್ರದೊಳಕ್ಕೆ ಬಿದ್ದು ಮುಳುಗಿಹೋದಳು. ಆಗಿನಿಂದಲೂ ಆ ಜಲಸಂಧಿಗೆ ಹೆಲ್ಲೆಸ್ಪಾಂಟ್ ಎಂದು ಹೆಸರಾಯಿತು.

೩೮. ಆ ಅದ್ಭುತವಾದ ಕುರಿಯು ಫ್ರಿಕ್ಸಸ್ಸನೊಬ್ಬನನ್ನೇ ತನ್ನ ಮೇಲೆ ಕುಳ್ಳಿರಿಸಿಕೊಂಡು ಬಲುಜಾಗರೂಕತೆಯಿಂದ ಮುಂದುಮುಂದಕ್ಕೆ ಹೋಯಿತು. ಬಳಿಕ ಒಂದು ಸಮುದ್ರವನ್ನು ದಾಟಿ, ಮತ್ತೊಂದನ್ನು ಪ್ರವೇಶಿಸಿ ಅದರ ಪೂರ್ವದ ದಡದ ಸಮೀಪದಲ್ಲಿ ಎಯೀ ಎಂಬ ಒಂದು ದ್ವೀಪಕ್ಕೆ ಬಂದು ಅಲ್ಲಿ ಫ್ರಿಕ್ಸಸ್ಸನ್ನು ಇಳಿಸಿ ಆ ಕುರಿಯು ಸತ್ತುಬಿದ್ದಿತು. ಅದರ ಸಾಹಸವನ್ನು ಕಂಡು ಜ್ಯೂಸಿಗೆ ಪರಮಸಂತೋಷವಾಗಿ ಅದರ ತುಪ್ಪಟವು ಚಿನ್ನವಾಗಬೇಕೆಂದು ಆ ದೇವದೇವನು ಅನುಗ್ರಹಿಸಿದನು. ಫ್ರಿಕ್ಸಸ್ಸನು ಅದನ್ನು ಅತಿಕೃತಜ್ಞತೆಯಿಂದ ಜ್ಯೂಸಿಗೇ ಸಮರ್ಪಿಸಿ ಅದನ್ನು

ಎತ್ತರವಾದ ಒಂದು ವೃಕ್ಷದಮೇಲೆ ತಗುಲಹಾಕಿ ತಾನೂ ಅದರಬಳಿಯಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದನು.

೩೯. ಎಯೀ ಎಂಬ ದ್ವೀಪವೇ ಕಾಲ್ಚಿಸ್ ಎಂಬ ರಾಜ್ಯಕ್ಕೆ ರಾಜಧಾನಿಯಾಗಿದ್ದಿತು. ಇಲ್ಲಿಗೆ ಎಯೀಟೀಸ್ ಎಂಬಾತನು ದೊರೆಯಾಗಿದ್ದನು. ಈತನೂ ಈತನ ತಂಗಿಯಾದ ಸರ್ಸಿ ಎಂಬ ಮಾಟಗಾತಿಯೂ ಸೂರ್ಯಾಂಶಸಂಭವರು. ಇವರು ನೆಫೇಲೆಗೆ ದೂರಬಂಧುಗಳಾಗಿದ್ದರು. ನೆಫೇಲೆಯು ಮಕ್ಕಳನ್ನು ಇಲ್ಲಿಗೆ ತಂದುಬಿಟ್ಟರೆ ಅವರಿಗೆ ಅಪಾಯವಿರದೆಂದು ಭಾವಿಸಿ ಆ ಕುರಿಯು ಹಾಗೆ ಮಾಡಿದ್ದಿತು.

೪೦. ಆದರೆ ಎಯೀಟೀಸಿಗೆ ಆ ಕನಕೋರ್ಣದ ಮೇಲೆ ಬಹಳ ಆಸೆ ಇದ್ದಿತು. ಆದುದರಿಂದ ಫ್ರಿಕ್ಸಸ್ಸಿಗೆ ಬಹಳವಾಗಿ ಉಪಚರಿಸಿ ಚಾಲ್ಸಿಯೋಪಿ ಎಂಬ ತನ್ನೊಬ್ಬ ಮಗಳನ್ನು ಅವನಿಗೆ ಮದುವೆಮಾಡಿಕೊಟ್ಟನು. ಕೆಲವು ವರುಷಗಳಾದ ಬಳಿಕ ಆ ಕನಕೋರ್ಣವನ್ನು ತನ್ನದಾಗಿಯೇ ಮಾಡಿಕೊಳ್ಳಬೇಕೆಂಬ ದುರಾಸೆಯು ಹುಟ್ಟಿ ಅವನು ಉಪಾಯವಾಗಿ ಫ್ರಿಕ್ಸಸ್ಸನನ್ನು ಕೊಲ್ಲಿಸಿಬಿಟ್ಟನೆಂದು ಹೇಳುವರು. ಆದುದರಿಂದ ಫ್ರಿಕ್ಸಸ್ಸಿನ ಆತ್ಮಕ್ಕೆ ಶಾಂತಿಯಿಲ್ಲದೆ, ಗ್ರೀಸಿನ ಶೂರರಿಗೆ ಆಗಾಗ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾ ತನ್ನ ಕೊಲೆಗೆ ಮುಯ್ಯಿತೀರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದನು. ಈ ಪ್ರತೀಕಾರೇಚ್ಛೆಯಿಂದ ಅನೇಕ ಶೂರರುಗಳು ಪ್ರಯತ್ನಿಸಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಜೇಸನ್ ಮೊದಲಾದವರೂ ಪ್ರಯಾಣ ಮಾಡುತ್ತಿದ್ದುದು ಈ ಉಣ್ಣೆಯನ್ನು ಗ್ರೀಸಿಗೆ ತರುವುದರಮೂಲಕ ದೇವರ ಶಾಪದಂತೆ ಎಯೀಟೀಸನನ್ನು ಕೊಂದು ಫ್ರಿಕ್ಸಸ್ಸಿನ ಆತ್ಮಕ್ಕೆ ತೃಪ್ತಿಯನ್ನುಂಟುಮಾಡುವುದಕ್ಕಾಗಿಯೇ.

ಏಳನೆಯ ಪ್ರಕರಣ.

ಆರುಕೈಗಳ ರಾಕ್ಷಸರ ವೃತ್ತಾಂತ.

ಹೆಲ್ಲೆಸ್ಪಾಂಟ್ ಜಲಸಂಧಿಯನ್ನು ದಾಟಿದ ಕೂಡಲೆ ಆರ್ಗೋ ನಾವಿಕರಿಗೆ ಸಿಕ್ಕಿದ ಸಮುದ್ರಕ್ಕೆ ಆ ಕಾಲದಲ್ಲಿ ಪ್ರೊಪಾಂಟಿಸ್ ಎಂದು ಹೆಸರಿದ್ದಿತು. ಈ ಕಡಲಿನಲ್ಲಿ ಒಂದುಹಗಲು ಪ್ರಯಾಣ ಮಾಡಿದ ಮೇಲೆ ತಮ್ಮ ಬಲಗಡೆಯ ದಡಕ್ಕೆ ಬಂದು ತಂಗಿದರು. ಬೆಳಗಾಗುತ್ತಲೇ ಅದು ಯಾವರಾಜ್ಯವೆಂದು ವಿಚಾರಿಸಲಾಗಿ, ಅದು ಮಿಸಿಯಾ ಎಂದು ತಿಳಿದುಬಂದಿತು. ಹರ್ಕ್ಯುಲೀಸನೂ ಮತ್ತೆ ಕೆಲವರು ನಾವಿಕರೂ ಜೇಸನ್ನಿನ ಅನುಮತಿಯನ್ನು ಪಡೆದು, ಸ್ವಲ್ಪದೂರ ಸಂಚರಿಸಿಕೊಂಡು, ಹೊರಟುಬರುತ್ತಿದ್ದಾಗ, ಈ ಗುಂಪನ್ನು ಹೈಲಾಸ್ ಎಂಬೊಬ್ಬ ಬಾಲಕನು ಸಂಧಿಸಿದನು. ಅವನು ಹರ್ಕ್ಯುಲೀಸ್ಸನ್ನು ಕಂಡಕೂಡಲೆ ಅವನ ದೃಢತರವಾದ ಮೈಕಟ್ಟನ್ನೂ, ಕಟ್ಟಾಳಿನ ಇತರ ಲಕ್ಷಣಗಳನ್ನೂ ಕಂಡು, ತನ್ನನ್ನು ಶಿಷ್ಯನನ್ನಾಗಿ ಅಂಗೀಕರಿಸುವಂತೆ ಹರ್ಕ್ಯುಲೀಸ್ಸನ್ನು ಪ್ರಾರ್ಥಿಸಿಕೊಂಡನು. ಆ ಬಾಲಕನು ಯಾರೆಂದು ವಿಚಾರಿಸಲಾಗಿ ಅವನು ಆ ರಾಜ್ಯದ ರಾಜಪುತ್ರನೆಂದು ತಿಳಿಯಬಂದಿತು. ಆಗ ಹರ್ಕ್ಯುಲೀಸ್ಸನು ಆ ಹುಡುಗನನ್ನು ಕುರಿತು "ನೀನು ನಿನ್ನ ತಾಯಿತಂದೆಗಳನ್ನೂ ರಾಜ್ಯವನ್ನೂ ಬಿಟ್ಟು, ಬಹಳ ಅಪಾಯಕರವಾದ ಕೆಲಸಕ್ಕಾಗಿ ಹೋಗುತ್ತಲಿರುವ ನಮ್ಮೊಡನೆ ಬರುವುದು ಸರಿಯಲ್ಲ" ಎಂದು ಎಷ್ಟೋ ಸಾರಿ ಹೇಳಿದರೂ ಆ ಬಾಲಕನು ಕೇಳಲಿಲ್ಲ. ಆದುದರಿಂದ ಆತನು ಆ ಬಾಲಕನನ್ನು ತನ್ನೊಡನೆ ಕರೆದುಕೊಂಡು, ತನ್ನಸಂಗಡಿಗರೊಡನೆ ದೋಣಿಗೆ ಬಂದುಸೇರಿದನು. ಆರ್ಗೋನಾವಿಕರೆಲ್ಲರೂ ಆ ಬಾಲಕನ ಮುಖಲಕ್ಷಣಗಳನ್ನೂ ವಿನಯಾದಿಸದ್ಗುಣಗಳನ್ನೂ ಕಂಡು ಬಹಳ ಸಂತೋಷಪಟ್ಟರು.

೪೦. ದೋಣಿಯು ಪುನಃ ಪ್ರಯಾಣ ಹೊರಟು ಸಿಜಿಕಸ್ ಎಂಬ ಒಂದು ದ್ವೀಪದ ಸಮೀಪಕ್ಕೆ ಬಂದಿತು. ಅದರ ಒಂದುಕಡೆಯ ತೀರದಲ್ಲಿ ಎತ್ತರವಾದ ಪರ್ವತಗಳು ಇದ್ದುವು. ಮತ್ತೊಂದುಕಡೆ ಇಳಿಜಾರಾಗಿದ್ದ

ನೆಲವು ಇದ್ದಿತು. ಸಮುದ್ರದ ಉಬ್ಬರವು ಇಲ್ಲದಿದ್ದಾಗ ಭೂಭಾಗಕಕ್ಕೂ ಈದ್ವೀಪಕಕ್ಕೂ ನಡುವೆ ಒಂದು ಆಳನಷ್ಟು ಆಳವೂ ಇಲ್ಲದ ನೀರು ಇರುತ್ತಿದ್ದಿತು. ಆಗೋ ನಾವೆಯನ್ನು ನಡೆಸುತ್ತಿದ್ದ ಟಫಿಸ್ ಎಂಬ ಕುಶಲ ನಾವಿಕನು ಈ ಆಳವಿಲ್ಲದ ಪ್ರದೇಶಕ್ಕೆ ದೋಣಿಯನ್ನು ತಂದು ಬಿಟ್ಟನು. ಇಷ್ಟುಹೊತ್ತಿಗೆ ಈ ಪ್ರದೇಶದಲ್ಲಿ ಕೆಲವರು ನಿವಾಸಿಗಳು ಬಂದು ಕಾದುಕೊಂಡಿದ್ದರು. ಅವರುಗಳಲ್ಲಿ ಮುಂದಾಳಾಗಿದ್ದವನನ್ನು ನೋಡಿದರೆ ಅವನು ಆ ಪ್ರಾಂತದ ರಾಜನಾಗಿದ್ದಂತೆ ತೋರುತ್ತಿದ್ದನು. ಅವನು ನಾವಿಕರನ್ನು ಕುರಿತು—"ನೀವು ಯಾರು? ಇಲ್ಲಿಗೆ ಏಕೆಬಂದಿರಿ? ನಿಮಗೆ ಈ ರಾಜ್ಯವನ್ನು ಆಕ್ರಮಿಸಬೇಕೆಂಬ ಇಷ್ಟವಿದ್ದರೆ, ನಮ್ಮೊಡನೆ ಯುದ್ಧಕ್ಕೆ ಸಿದ್ಧರಾಗಿ" ಎಂದು ಹೇಳಿದನು. ಇದಕ್ಕೆ ಜೇಸನ್ನನು ವಿನಯದಿಂದ ತಮ್ಮ ಉದ್ದೇಶವನ್ನು ತಿಳಿಸಲು, ಸಿಜಿಕಸ್ ಎಂಬುದಾಗಿಯೇ ಹೆಸರಿದ್ದ ಆ ದೊರೆಯು ಆರ್ಗೋ ನಾವಿಕರನ್ನು ಕುರಿತು ತನ್ನ ರಾಜ್ಯದಲ್ಲಿ ಎರಡುಮೂರು ದಿನಗಳಿದ್ದು ತನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡನು. ನಾವಿಕರೂ ಆತನ ವಿನಯಪೂರ್ವಕವಾದ ಆಹ್ವಾನವನ್ನು ಅಂಗೀಕರಿಸಿದರು.

೩೩. ಪ್ರಾಯಶಃ ಪೂರ್ವಕಾಲದ ಜನರೆಲ್ಲಾ ಅತಿಥಿಗಳನ್ನು ದೇವರಂತೆ ಭಾವಿಸಿದ್ದರು. ಅನೇಕವೇಳೆಗಳಲ್ಲಿ ದೇವತೆಗಳೇ ಅತಿಥಿಗಳ ವೇಷಗಳನ್ನು ಹಾಕಿಕೊಂಡು ಬಂದು, ಮಾನವರ ಸೇವೆಯನ್ನು ಪರಿಗ್ರಹಿಸುತ್ತಿದ್ದರೆಂದು ಆ ಕಾಲದ ಜನರುಗಳಲ್ಲಿ ಪ್ರಬಲವಾದ ನಂಬಿಕೆಯಿದ್ದಿತು. ಸಿಜಿಕಸ್ಸನು ತನ್ನ ಅತಿಥಿಗಳನ್ನು ಬಹಳ ಆದರದಿಂದ ಸತ್ಕರಿಸಿದನು. ಆದರೆ ಆತನ ಮುಖದಲ್ಲಿ ಯಾವುದೋ ಚಿಂತೆಯ ಕುರುಹು ಕಾಣುತ್ತಿದ್ದುದನ್ನು ಜೇಸನ್ನನ್ನು ನೋಡಿ, "ಇದೇಕೆ ಹೀಗೆ ನೀನು ಚಿಂತಿಸುತ್ತಿರುವಂತೆ ತೋರುವೆ? ನಿನಗೇನಾದರೂ ಚಿಂತೆಯಿದ್ದರೆ, ಅದನ್ನು ಹೋಗಲಾಡಿಸಲು ನಮ್ಮಿಂದ ಏನಾದರೂ ಸಹಾಯವಾಗಬಹುದಾದ ಪಕ್ಷದಲ್ಲಿ ನಮ್ಮನ್ನು ನಿಸ್ಸಂದೇಹವಾಗಿ ತಿಳಿದುಕೊಂಡು ನಮ್ಮ ಸೇವೆಯನ್ನು ಅಂಗೀಕರಿಸಬೇಕು" ಎಂದು ವಿನಯದಿಂದ ಕೇಳಿಕೊಂಡನು. ಆಗ ಸಿಜಿಕಸ್ಸನು "ಜೇಸನ್! ನನ್ನ ರಾಜ್ಯಕ್ಕೆ ಬಾಧೆಯನ್ನುಂಟುಮಾಡುವ ಕೆಲವರು ರಾಕ್ಷಸರು, ಅಗೋ! ಆ ಪರ್ವತದ ಮೇಲ್ಗಡೆ ವಾಸಿಸುತ್ತಿರುವರು. ಅವರಿಗೆ ಆರಾರು ಕೈಗಳಿವೆ, ಭಗಭಗೆಯು

ಆಯುಧಗಳನ್ನು ಈ ಕೈಗಳಲ್ಲಿ ಧರಿಸಿ ಅವರು ಆಗಾಗ ನನ್ನ ರಾಜ್ಯಕ್ಕೆ ಬಂದು ಹಾವಳಿಯನ್ನು ಮಾಡುತ್ತಿರುವರು. ಅವರ ಕಾಟದಿಂದ ನನ್ನ ಪ್ರಜೆಗಳಿಗೆ ಉಳಿಗಾಲವಿಲ್ಲದಿರುವುದು. ಆದುದರಿಂದ ನನಗೆ ಚಿಂತೆಯುಂಟಾಗಿದೆ" ಎಂದು ತಿಳಿಸಿದನು.

೪೪. ಈ ಮಾತುಗಳನ್ನು ಕೇಳಿದಕೂಡಲೆ ಆರ್ಗೋನಾವಿಕರೆಲ್ಲರೂ ಬೆಟ್ಟದ ಶಿಖರದ ಕಡೆಗೆ ತಿರುಗಿನೋಡಿದರು. "ಅಲ್ಲಿ ಯಾರೂ ಇಲ್ಲವಲ್ಲಾ!" ಎಂದು ಅನೇಕರು ಎಂದರು; "ಒಬ್ಬರಿಬ್ಬರು ಅಲ್ಲಿ ಕೆಲವು ಕಂಬಗಳು ಮಾತ್ರ ಕಾಣುತ್ತಿವೆ" ಎಂದರು; ಇನ್ನು ಕೆಲವರು—"ಛೆ! ಅವು ಕಂಬಗಳು ಏಕೆ ಆದಾವು? ಅವು ಮರಗಳು; ಅವುಗಳ ಕೊಂಬೆಗಳೂ ಕಾಣಿಸುವುವಲ್ಲಾ!" ಎಂದು ಹೇಳಿದರು. ಆಗ ಲಿಂಸಿಯುಸ್ಸನು ಅತ್ತ ಕಡೆಗೆ ಚೆನ್ನಾಗಿ ದೃಷ್ಟಿಸಿ ನೋಡಿ—"ಓಹೋ! ಬಿಳಿಯ ಕಂಬಗಳು! ಬಲು ಬಿಳಿಯ ಮರಗಳು!!" ಎಂದು ಹೇಳಿ—"ಅಲ್ಲಿ ನಿಂತಿರುವವರೇ ಆರು ಕೈಗಳ ರಾಕ್ಷಸರು; ಅವರು ಯಾರಮೇಲೆಯೋ ಯುದ್ಧಕ್ಕೆ ಹೊರಡುವಂತಿದೆ" ಎಂದು ಹೇಳಿದನು.

೪೫. ಈ ಮಾತುಗಳನ್ನು ಕೇಳಿದಕೂಡಲೆ ಜೇಸನ್ನನು ದೋಣಿಯ ಕಾವಲಿಗಾಗಿ ಕೆಲವರನ್ನು ಹೆರ್ಕ್ಯುಲಿಸನೊಡನೆ ಹಿಂದೆಬಿಟ್ಟು, ಕತ್ತಿ, ಗುರಾಣಿ, ಬಿಲ್ಲು ಬತ್ತಳಿಕೆಗಳನ್ನು ಧರಿಸಿ ಮಿಕ್ಕವರೊಡನೆ ಆ ಬೆಟ್ಟದ ಮೇಲಕ್ಕೆ ನುಗ್ಗಿಹೋದನು. ಬೆಟ್ಟದ ಶಿಖರವೇನೋ ಬಹಳ ಹತ್ತಿರದಲ್ಲಿಯೇ ಇರುವಂತೆ ತೋರುತ್ತಿದ್ದಿತಾದರೂ ಅಲ್ಲಿಗೆ ಹೋಗಲು ಜೇಸನ್ನಿಗೆ ಎರಡು ಗಂಟೆಗಳಷ್ಟು ಕಾಲವಾಯಿತು. ಈ ಮಧ್ಯದಲ್ಲಿ ಹಡಗಿನ ಬಳಿಯಲ್ಲಿ ಹಿಂದೆ ನಿಂತಿದ್ದ ಕೆಲವರು ತರುಣರು, ರಾಕ್ಷಸರನ್ನು ತಮ್ಮ ಸಂಗಡಿಗರು ಓಡಿಸಿ ಬಿಡುವರೆಂಬ ಧೈರ್ಯದಿಂದ, ಸ್ವಲ್ಪ ಸುತ್ತಾಡಿಕೊಂಡುಬರಲು ಹೊರಟಿದ್ದರು. ಕರ್ತವ್ಯಪರನಾದ ಹೆರ್ಕ್ಯುಲಿಸನಾದರೋ ದೋಣಿಯನ್ನು ಎಚ್ಚರದಿಂದ ನೋಡಿಕೊಳ್ಳುತ್ತಲಿದ್ದನು.

೪೬. ಜೇಸನ್ ಮೊದಲಾದವರು ಬೆಟ್ಟವನ್ನು ಹತ್ತಿ ಬರುತ್ತಿದ್ದುದನ್ನು ಆ ರಾಕ್ಷಸರುಗಳು ಕಂಡು, ಮೊದಲು ಆರ್ಗೋ ದೋಣಿಯನ್ನೂ ಅದರಲ್ಲಿರಬಹುದಾದ ಅಮೂಲ್ಯವಸ್ತುಗಳನ್ನೂ ವಶಪಡಿಸಿಕೊಂಡು, ಬಳಿಕ ತಮ್ಮಮೇಲೆ ನುಗ್ಗಿಬರುತ್ತಿದ್ದವರನ್ನು ವಿಚಾರಿಸಿಕೊಳ್ಳಬೇಕೆಂದು ಭಾವಿಸಿ,

ಬೇರೊಂದು ದಿಕ್ಕಿನಿಂದ ಆರ್ಗೋ ಬಳಿಗೆ ಇಳಿದುಬಂದರು. ಇವರು ತೆಂಗಿನ ಮರಗಳಷ್ಟು ಎತ್ತರವಾಗಿದ್ದುದರಿಂದ, ಸಾಧಾರಣರಾದ ಮನುಷ್ಯರು ಇಪ್ಪತ್ತು ಹಜ್ಜೆಗಳಲ್ಲಿ ನಡೆಯುವಷ್ಟು ದೂರವನ್ನು ತಮ್ಮ ಒಂದು ದಾಪಿನಲ್ಲಿ ನಡೆಯುತ್ತಿದ್ದರು. ಆದುದರಿಂದ ದೋಣಿಯಬಳಿಗೆ ಬರಲು ಇವರಿಗೆ ಬಹುಕಾಲ ಹಿಡಿಯಲಿಲ್ಲ. ಇವರ ಅಸಾಧಾರಣವಾದ ರೂಪವನ್ನೂ, ಇವರು ಹಿಡಿದಿದ್ದ ಬಗೆಬಗೆಯ ಆಯುಧಗಳನ್ನೂ, ಇವರು ಹಡಗಿನ ಕಡೆಗೆ ಅವನ್ನು ತೋರಿಸಿ ಗಟ್ಟಿಯಾಗಿ ಅರಚುತ್ತಿದ್ದುದನ್ನೂ ಕಂಡು, ಹೆರ್ಯಾಕ್ಲಿಸನು ಇವರು ಶತ್ರುಗಳೇ ಸರಿ ಎಂದು ನಿರ್ಧರಿಸಿ, ತನ್ನಬಿಲ್ಲಿನಿಂದ ಕೆಲವು ಬಾಣಗಳನ್ನು ಬಿಟ್ಟನು. ಈ ಬಿಲ್ಲು ಬಹಳ ದೊಡ್ಡದಾಗಿಯೂ ಬಲವಾಗಿಯೂ ಇದ್ದುದರಿಂದ ಅದನ್ನು ಇತರರು ಯಾರೂ ಬಾಗಿಸಲಾಗುತ್ತಲೇ ಇರಲಿಲ್ಲ. ದೋಣಿಯಲ್ಲಿದ್ದ ಒಬ್ಬೊಂಟಿಗನನ್ನು ಕಂಡು ಅದನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದೆಂದಿದ್ದ ರಾಕ್ಷಸರುಗಳು ಅವನ ಬಾಣಗಳ ರಭಸವನ್ನು ಕಂಡು ಅವನ ಹತ್ತರಷ್ಟು ಗಾತ್ರವಾಗಿದ್ದ ತಮ್ಮೆಲ್ಲರಮೇಲೆ ಅವನು ಯುದ್ಧಕ್ಕೆ ನಿಂತನಲ್ಲಾ ಎಂಬ ಕೋಪದಿಂದ, ದೊಡ್ಡದೊಡ್ಡ ಬಂಡೆಗಳನ್ನು ಆ ದೋಣಿಯಮೇಲೆ ಎತ್ತಿಹಾಕಿ ಅದನ್ನು ಮುಳುಗಿಸಿಬಿಡಬೇಕೆಂದು ನಿಶ್ಚಯಿಸಿ ಬಂಡೆಗಳನ್ನು ಎತ್ತುತ್ತಿದ್ದರು. ಹಡಗಿನಲ್ಲಿದ್ದಿರಬಹುದಾದ ಅಮೂಲ್ಯವಸ್ತುಗಳನ್ನು ವಶಪಡಿಸಿಕೊಳ್ಳಬೇಕೆಂದಿದ್ದ ಇವರ ಉದ್ದೇಶವು ಕೋಪವಶದಿಂದ ಮರತೇಹೋಗಿದ್ದಿತು. ಕೋಪವು ಎಂತೆಂತಹ ಅನರ್ಥವನ್ನೂ ಮಾಡಿಸಿಬಿಡಬಹುದಲ್ಲವೆ? ಆದರೆ ಹೆರ್ಯಾಕ್ಲಿಸ್ಸನು ಸಾಮಾನ್ಯನಲ್ಲವೆಂದು ಸ್ವಲ್ಪ ಹೊತ್ತಿನಲ್ಲಿಯೇ ಈ ರಾಕ್ಷಸರುಗಳು ಅರಿತುಕೊಂಡರು. ಬಂಡೆಗಳನ್ನು ದೋಣಿಯಮೇಲೆ ಹಾಕಬೇಕೆಂದಿದ್ದ ಅವರ ಮೇಲೆಲ್ಲಾ ಬಾಣಗಳು ಬಿದ್ದುದರಿಂದ ಕೆಲವರು ಬಂಡೆಗಳನ್ನೂ ಎತ್ತಿಹಾಕಿಕೊಂಡು ಬಿದ್ದು ಆ ಬಂಡೆಗಳ ಕೆಳಗೇ ಅಪ್ಪಚ್ಚಿಯಾದರು ; ಇನ್ನು ಕೆಲವರು ತಮ್ಮತಮ್ಮ ಬಂಡೆಗಳ ಮೇಲೆಯೇ ಮೂರ್ಛೆಬಿದ್ದರು ; ಮತ್ತೆ ಕೆಲವರು ಬಾಣಗಳು ತಗುಲಿದ್ದರೂ ಲಕ್ಷ್ಯಮಾಡದೆ ಬಂಡೆಗಳನ್ನೇನೋ ಎಸೆದರು ; ಆದರೆ ಏಟಿನಿಂದ ಅವರ ಶಕ್ತಿಯು ಕುಗ್ಗಿಹೋಗಿದ್ದುದರಿಂದ ಅವು ದೋಣಿಯವರೆಗೆ ಹೋಗಲೇ ಇಲ್ಲ. ಇದನ್ನು ಕಂಡು ರಾಕ್ಷಸರಲ್ಲಿ ಸಾಹಸಿಗಳಾದ ಕೆಲವರು ತಮ್ಮ ಸಾಧಾರಣ

ವಾದ ಆಯುಧಗಳನ್ನೇ ಝಳುಪಿಸುತ್ತಾ ಅರಚಿಕೊಂಡು ಮುಂದುಮುಂದಕ್ಕೆ ನುಗ್ಗಿಬಂದರು. ನಮ್ಮ ಭೀಮಸೇನನು ಗದಾಯುದ್ಧದಲ್ಲಿ ನಿಪುಣನಾಗಿದ್ದಂತೆಯೇ ಹೆರ್ಕ್ಯುಲಿಸನೂ ಗದಾಯುದ್ಧಕುಶಲನಾಗಿದ್ದುದರಿಂದ, ತನ್ನಬಳಿಗೆ ಬಂದ ಅನೇಕರಿಗೆ ತನ್ನ ಗದೆಯ ರುಚಿಯನ್ನು ತೋರಿಸುತ್ತಿದ್ದನು. ಆದರೆ ಒಬ್ಬನು ಎಷ್ಟು ಹೊತ್ತಿನವರೆಗೆ ತಾನೇ ಅನೇಕ ಪ್ರಬಲಶತ್ರುಗಳಮೇಲೆ ಕಾದಾಡುವುದು ಸಾಧ್ಯ? ಹೆರ್ಕ್ಯುಲಿಸನಿಗೂ ಬಲವು ಕುಗ್ಗುತ್ತಿದ್ದಿತು; ರಾಕ್ಷಸರ ಉತ್ಸಾಹವು ಹೆಚ್ಚುತ್ತಿದ್ದಿತು. ಆದುದರಿಂದ ಅವರ ಗರ್ಜನೆಯೂ ಕ್ಷಣಕ್ಷಣಕ್ಕೂ ಪ್ರಬಲವಾಗುತ್ತಿದ್ದಿತು.

೪೭. ಆದರೆ ಇಂತಹ ಬಿಗಿಕಟ್ಟಿನ ಸಂದರ್ಭಗಳಲ್ಲಿ ಎದೆಗಿಡದೆ ಸಾಹಸಮಾಡುವವರನ್ನು ದೇವರು ಕೈಬಿಡುವುದಿಲ್ಲವೆಂಬುದಕ್ಕೆ ನಿದರ್ಶನ ಸ್ವರೂಪವಾಗಿ, ಸುತ್ತಿಕೊಂಡುಬರಲು ಹೋಗಿದ್ದ ನಾವಿಕರು ದೋಣಿಯ ಬಳಿ ನಡೆಯುತ್ತಿದ್ದ ಕೋಲಾಹಲವನ್ನುಕೇಳಿ ಅದರ ರಕ್ಷಣೆಗಾಗಿ ಒಂದುಕಡೆಯಿಂದ ನುಗ್ಗಿಬಂದರು; ಜೇಸನ್ ಮೊದಲಾದವರು ಮತ್ತೊಂದು ಕಡೆಯಿಂದ ನುಗ್ಗಿಬಂದರು. ಆದಕಾರಣ ಕತ್ತರಿಗೆ ಸಿಕ್ಕಿದ ಇಲಿಯಂತೆ ಸ್ವಲ್ಪ ಹೊತ್ತಿನಲ್ಲಿಯೇ ರಾಕ್ಷಸರ ಪಾಡೂ ಆಯಿತು. ಹೀಗೆ ರಾಕ್ಷಸರೆಲ್ಲರನ್ನೂ ಸದೆಬಡಿದುದನ್ನು ಆ ದ್ವೀಪನಿವಾಸಿಗಳು ಅರಿಯರು. ಜೇಸನ್ ಮೊದಲಾದವರು ಬೆಟ್ಟವನ್ನು ಹತ್ತಿಹೋಗಿದ್ದ ದಿಕ್ಕನ್ನೇ ಅವರುಗಳೆಲ್ಲರೂ ಕುತೂಹಲದಿಂದ ನೋಡುತ್ತಿದ್ದುದೇ ಇದಕ್ಕೆ ಕಾರಣವು. ಈ ಮಧ್ಯದಲ್ಲಿ ಆರ್ಗೋನಾವಿಕರಲ್ಲೊಬ್ಬನು ಬೇರೊಂದು ದಿಕ್ಕಿನಿಂದ ಬಂದು, ರಾಕ್ಷಸರು ಧ್ವಂಸವಾದರೆಂದು ತಿಳಿಸಿದಾಗ ಸಿಜಿಕಸ್ ಮೊದಲಾದವರಿಗೆ ಅತ್ಯಂತ ಆಶ್ಚರ್ಯವಾಯಿತು. ಅವರೆಲ್ಲರೂ ಹಡಗಿನಬಳಿಗೆ ಬಂದು ನೋಡಲು ಅಲ್ಲಿ ಸತ್ತುಬಿದ್ದಿದ್ದ ರಾಕ್ಷಸರನ್ನು ಕಂಡು ಅವರುಗಳೆಲ್ಲರಿಗೂ ಅತ್ಯಾನಂದವಾಯಿತು. ಸಿಜಿಕಸ್ಸನು ಅವರೆಲ್ಲರನ್ನೂ ಮರ್ಯಾದೆಯಿಂದ ಅರಮನೆಗೆ ಕರೆತಂದು ಪುನಃ ಔತಣಗಳನ್ನು ಬಹು ವಿಜೃಂಭಣೆಯಿಂದ ಮಾಡಿಸಿ ತನ್ನ ಮದುವೆಗಾಗಿ ಅಲ್ಲಿಯೇ ಮತ್ತೆ ಕೆಲವು ದಿವಸಗಳಿದ್ದುಕೊಂಡು ಮುಂದಕ್ಕೆ ಪ್ರಯಾಣವನ್ನು ಮಾಡಬೇಕೆಂದು ಅವರನ್ನು ಎಷ್ಟೋ ಕೇಳಿಕೊಂಡನು. ಆದರೆ ಲೆಮ್ನಾಸಿನ ಅನುಭವವಿದ್ದ ಆರ್ಗೋನಾವಿಕರಿಗೆ ಪುನಃ ಸುಖಮಗ್ನರಾಗುವುದರಿಂದ ತಮ

ಉದ್ದೇಶಕ್ಕೆ ಭಂಗಬಂದೀತೆಂಬ ಶಂಕೆಯು ಬಾಧಿಸುತ್ತಿದ್ದಕಾರಣ ಅವರು ಸಿಜಿಕಸ್ಸಿನ ಅಪ್ಪಣೆಯನ್ನು ಪ್ರಯಾಸದಿಂದ ಪಡೆದು ಮುಂದಕ್ಕೆ ಪಯಣ ಹೊರಟರು.

ಎಂಟನೆಯ ಪ್ರಕರಣ.

ಒಂದು ಘೋರಕೃತ್ಯವೂ ಪ್ರಾಯಶ್ಚಿತ್ತವೂ

ಆರ್ಗೋದೋಣಿಯು ಪಯಣಹೊರಟಾಗ ಆಕಾಶವು ಬಹು ನಿರ್ಮಲವಾಗಿದ್ದಿತು. ಆಕಾಶದಲ್ಲಿ ಬಿಡಿಸಿದ ಹತ್ತಿಯಂತೆ ವಿರಳ ವಿರಳವಾಗಿ ತೋರುತ್ತಿದ್ದ ಬಿಳಿಯ ಮುಗಿಲುಗಳು ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತಿದ್ದುವು. ಕೆಲವು ಪಕ್ಷಿಗಳು ಸಂತೋಷದಿಂದ ಕೂಗುತ್ತಿದ್ದಂತೆ ಕಂಡುಬಂದರೂ, ಮತ್ತೆ ಕೆಲವುಮಾತ್ರ ವಿಕಾರವಾಗಿ ಧ್ವನಿಮಾಡುತ್ತಿದ್ದುವು ನಾವಿಕರಲ್ಲಿ ಮಾಪ್ಸಸ್ ಎಂಬುವನೊಬ್ಬನಿಗೆ ಪಕ್ಷಿಗಳ ಭಾಷೆಯು ತಿಳಿದಿದ್ದ ಕಾರಣ, ಅವನು ತಮಗೆ ಯಾವುದೋ ಒಂದು ಕೇಡು ಸನ್ನಿಹಿತವಾಗಿ ಯೆಂದು ಜೇಸನ್ನಿಗೂ ಹರ್ಕ್ಯುಲೀಸನ್ನಿಗೂ ತಿಳಿಸಿದನು. ಆರ್ಗೋನಾವಿಕರಲ್ಲಿ ಇಡ್ಮನ್ ಎಂಬಾತನಿಗೂ ನಮ್ಮ ಸಹದೇವನಂತೆ ಭವಿಷ್ಯಜ್ಞಾನವಿದ್ದುದರಿಂದ ಅವನೂ ತನ್ನ ಸಂಗಡಿಗರಿಗೆ ಏನೋ ಅಪಾಯವು ಸನ್ನಿಹಿತವಾಗಿರುವುದೆಂದ ತಿಳಿಸಿದನು. ಆದರೆ ಆ ನಾವಿಕರೆಲ್ಲರೂ ಅಪಾಯಕರವಾದ ಕಾರ್ಯವನ್ನೆ ಸಾಧಿಸಲು ಹೊರಟಿದ್ದುದರಿಂದಲೂ, ಆಗತಾನೇ ರಾಕ್ಷಸರನ್ನು ಜಯಿಸಿಬಿಟ್ಟಿದ್ದುದರಿಂದಲೂ ಆ ಇಬ್ಬರು ನಾವಿಕರ ಮಾತುಗಳನ್ನು ಲಕ್ಷ್ಯಮಾಡದೆ ಉತ್ಸಾಹದಿಂದ ದೋಣಿಯನ್ನು ನಡೆಯಿಸಿಕೊಂಡು ಹೊರಟರು. ಮೊದಲನೆಯ ದಿನದ ಪ್ರಯಾಣವು ಸುಖವಾಗಿ ಜರುಗಿತು.

೪೯. ಎರಡನೆಯ ದಿನದ ಪ್ರಯಾಣವು ಮೊದಮೊದಲಿನಲ್ಲಿ ಸುಖಕರವಾಗಿ ನಡೆದರೂ, ಪ್ರತಿಕೂಲಮಾರುತಗಳು ರಭಸದಿಂದ ಬೀಸತೊಡಗಿದುವು ಸಮುದ್ರವು ಉಲ್ಲೋಲಕಲ್ಲೋಲವಾಯಿತು ; ಮಳೆಯೂ ಬಲವಾ

ಹೊಯ್ಯತೊಡಗಿತು. ಐವತ್ತುಮಂದಿ ನಾವಿಕರಲ್ಲಿ ಒಬ್ಬನಾದರೂ ತನ್ನ ಹುಟ್ಟನ್ನು ಬಿಟ್ಟುಬಿಟ್ಟರೆ ದೋಣಿಯು ಮುಳುಗಿಹೋಗುವಂತಿದ್ದಿತು. ಅಂತಹ ಅನುಭವವನ್ನು ಆ ನಾವಿಕರು ಯಾವಾಗಲೂ ಕಂಡಿರಲಿಲ್ಲ. ಒಬ್ಬರೊಡನೆ ಒಬ್ಬರು ಮಾತನಾಡೋಣವೆಂದರೆ, ಹರ್‍ಯ್ಯಾಕ್ಲಿಸನ ಗರ್ಜನೆಯೂ ಕೇಳಿಸುವಂತಿರಲಿಲ್ಲ. ಅವರೂ ಜೇಸನ್ನನೂ ಎಷ್ಟೋಸಾರಿ ಆರ್ಫಿಯುಸ್ಸನ್ನು ಕುರಿತು—"ನಿನ್ನ ವೀಣೆಯನ್ನು ನುಡಿಸು! ಇದೇಕೆ ಹೀಗೆ ಸುಮ್ಮನಿರುವೆ?" ಎಂದು ಅರಚಿಕೊಂಡಿದ್ದರು. ದೋಣಿಯಲ್ಲಿದ್ದ ಬೊಂಬೆಯನ್ನಾದರೂ ಕೇಳಿ ತಿಳಿದುಕೊಳ್ಳೋಣವೆಂದರೆ, ಸ್ಥಳಬಿಟ್ಟು ಕದಲಿದಾಗ ದೋಣಿಯು ಮುಳುಗಿ ಹೋಗುವುದೆಂಬ ಹೆದರಿಕೆ! ಇಷ್ಟರಲ್ಲಿ ಕತ್ತಲೂ ಕವಿದುಕೊಂಡಿತು. ಅಂತೂ ಅರ್ಗೋನಾವೆಗೆ ಬಲವಾದ ಕಷ್ಟವೊದಗಿತು. ಈ ಚಂಡಮಾರುತವು ಎರಡುದಿನಗಳವರೆಗೂ ಎಡೆಬಿಡದೆ ಬೀಸುತ್ತಿದ್ದುದರಿಂದ ನಾವಿಕರಿಗೆ ತಾವು ಯಾವದಿಕ್ಕಿನಲ್ಲಿ ಪ್ರಯಾಣಮಾಡುತ್ತಿರುವರೆಂಬುದೂ ತಿಳಿದಿರಲಿಲ್ಲ. ಆ ಕಾಲದಲ್ಲೆಲ್ಲಾ ಒಂದು ಸಣ್ಣದ್ವೀಪವಾದರೂ ಲಿಂಸಿಯುಸ್ಸಿನ ದೃಷ್ಟಿಗೂ ಗೋಚರವಾಗಲಿಲ್ಲ.

೫೦. ಕಡೆಗೆ ಆ ದೋಣಿಯು ಒಂದು ಭೂಪ್ರದೇಶವನ್ನು ಸಮೀಪಿಸಿತು. ಆದರೆ ಅಂತಹ ಮಳೆಗಾಳಿಗಳಲ್ಲೂ ಸಮುದ್ರತೀರದಲ್ಲಿ ಆಯುಧಪಾಣಿಗಳಾಗಿದ್ದ ಜನರು ನಿಂತಿದ್ದುದು ಕಂಡುಬಂದಿತು. ದೋಣಿಯನ್ನು ಸಮುದ್ರತೀರಕ್ಕೆ ತರಲು ಟಿಫಿಸ್ಸನೂ ಇತರ ನಾವಿಕರೂ ತಮ್ಮ ಸರ್ವಸಾಹಸವನ್ನೂ ಪ್ರಯೋಗಿಸಬೇಕಾಯಿತು. ಸಮುದ್ರದ ಪಾಲಾಗುತ್ತಿದ್ದುದು ತಪ್ಪಿತಲ್ಲಾ ಎಂದು ಅವರು ಮನಸ್ಸಿನಲ್ಲಿಯೇ ಸಂತೋಷಪಟ್ಟುಕೊಳ್ಳುತ್ತಿದ್ದಾಗ, ಸಮುದ್ರತೀರದಲ್ಲಿದ್ದ ಯೋಧರು ಅವರೊಡನೆ ಯುದ್ಧಕ್ಕೆ ತೊಡಗಿದರು. ಅರ್ಗೋನಾವಿಕರು, ತಾವು ಯಾರೆಂಬುದನ್ನು ತಿಳಿಸಿದರೂ ಆ ಬಿರುಗಾಳಿಯಲ್ಲಿ ಅವರ ಮಾತುಗಳು ಇದಿರುಪಕ್ಷದವರಿಗೆ ಕೇಳಿಸಲೇ ಇಲ್ಲ. ಆದುದರಿಂದ ಅವರೂ ಆತ್ಮರಕ್ಷಣೆಗಾಗಿ ಯುದ್ಧಮಾಡಬೇಕಾಯಿತು. ಯುದ್ಧವೂ ಬಲವಾಗಿ ನಡೆದು ಶೂರರಾದ ಆ ನಾವಿಕರಲ್ಲಿ ಕೆಲವರಿಗೆ ದೊಡ್ಡ ದೊಡ್ಡ ಗಾಯಗಳಾದುವು. ಇದಿರುಪಕ್ಷದವರಲ್ಲಿ ಅನೇಕರು ಸತ್ತುಬಿದ್ದರು. ಕಡೆಗೆ ನಾವಿಕರಿಗೇ ಜಯವಾಯಿತು. ಇಷ್ಟುಹೊತ್ತಿಗೆ ಸ್ವಲ್ಪಸ್ವಲ್ಪವಾಗಿ ಬಿರುಗಾಳಿಯು ಶಮನವಾಗುತ್ತಬಂದು ಬೆಳಕು ತಲೆದೋರಿತು.

೫೧. ಆ ಸಮಯದಲ್ಲಿ ಊರಿನಿಂದ ಆ ಸಮುದ್ರತೀರಕ್ಕೆ ಕೆಲವರು ಹೆಂಗಸರುಮಕ್ಕಳುಗಳು ಅಳುತ್ತ ಬಂದರು. ಅವರಲ್ಲಿ ಮುಂದಾಳಾಗಿದ್ದವಳು ಕಿರೀಟವನ್ನು ಧರಿಸಿದ್ದುದರಿಂದ ಆಕೆಯು ರಾಣಿಯೆಂದು ತೋರುತ್ತಿದ್ದಿತು. ಅವರೆಲ್ಲರೂ ಬಂದು ಗೋಳಾಡುತ್ತಾ ಜಯಶಾಲಿಗಳಾಗಿದ್ದ ನಾವಿಕರನ್ನು ಕುರಿತು ತಮ್ಮನ್ನು ಬಾಧಿಸಕೂಡದೆಂದು ಬೇಡಿಕೊಂಡರು. ಅವರು ಯಾರೆಂಬುದನ್ನು ವಿಚಾರಿಸಲು ಆ ರಾಣಿಯು ಸಿಜಿಕಸ್ಸಿನ ನೂತನವಧುವೆಂದೂ, ಯುದ್ಧದಲ್ಲಿ ಮಡಿದು ಹೋಗಿದ್ದವರಲ್ಲಿ ಸಿಜಿಕಸ್ಸನೂ ಒಬ್ಬನೆಂದೂ ತಿಳಿಯಿತು. ಅಂತಹ ಬಿರುಗಾಳಿಗಳ ಸಮಯವನ್ನೇ ನಿರೀಕ್ಷಿಸಿಕೊಂಡಿದ್ದ ಕೆಲವರು ಸಮುದ್ರದಕಳ್ಳರು, ಆಗಾಗ ಅಲ್ಲಿಗೆ ಬಂದು ಹಾವಳಿಯನ್ನು ಮಾಡುತ್ತಿದ್ದುದರಿಂದ, ಅವರುಗಳು ನಾವಿಕರನ್ನು ಸಮುದ್ರಚೋರರೆಂದು ಭಾವಿಸಿ ಅವರೊಡನೆ ಕಾದಾಡಿ ಮಡಿದುಹೋಗಿದ್ದರೆಂದು ತಿಳಿಯಬಂದಿತು. ಈ ವೃತ್ತಾಂತಗಳೆಲ್ಲವನ್ನೂ ಕೇಳಿ ಆರ್ಗೋನಾವಿಕರು ಪಟ್ಟ ಪಶ್ಚಾತ್ತಾಪವನ್ನು ಹೇಳತೀರದು. ಅವರು ತಮ್ಮ ಘೋರವಾದ ವ್ಯಸನದಲ್ಲಿ ಮುಂದೆ ಏನು ಮಾಡಬೇಕೆಂಬುದನ್ನೂ ಸಹ ಮರೆತುಬಿಟ್ಟಿದ್ದರು.

೫೨. ಜೇಸನ್ನನು ಆಗ ಮನಸ್ಸಿನಲ್ಲಿಯೇ ಬಹಳವಾಗಿ ಶೋಕಿಸುತ್ತಾ ಹಡಗಿನ ಬೊಂಬೆಯ ಸಮೀಪಕ್ಕೆಹೋಗಿ ಅದಕ್ಕೆ ನಮಸ್ಕರಿಸಿ ಆ ಪಾಪವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಏನುಮಾಡಬೇಕೋ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸಿಕೊಂಡನು. ಆಗ ಆ ಬೊಂಬೆಯು ಅವನನ್ನು ಕುರಿತು—" ಇದು ದೈವೇಚ್ಛೆಯಿಂದ ಆದುದು ; ಸಿಜಿಕಸ್ಸಿನ ಉತ್ತರಕ್ರಿಯೆಗಳಲ್ಲಿ ಭಕ್ತಿಯಿಂದ ಭಾಗಿಗಳಾಗಿ ಡಿಂಡಿಮಪರ್ವತದ ದೇವಿಯನ್ನು ಆರಾಧಿಸು ". ಎಂದು ಹೇಳಿತು. ದೈವೇಚ್ಛೆಗೆ ವಿರೋಧವಾಗಿ ನಡೆಯಲು, ಆರ್ಗೋನಾವಿಕರಲ್ಲಿ ಒಬ್ಬನಾದ ಎಸ್ಕ್ಯುಲೇಪಿಯಸ್ಸಿಗೂ ಧೈರ್ಯವಿರಲಿಲ್ಲ. ಆದುದರಿಂದ ಅದೇಮೇರೆಗೆ ಆ ನಾವಿಕರೆಲ್ಲರೂ ಉತ್ತರಕ್ರಿಯೆಗಳನ್ನು ನೆರವೇರಿಸಿ, ಸಮೀಪದಲ್ಲಿದ್ದ ಡಿಂಡಿಮಪರ್ವತದ ಮೇಲೆ ನೆಲೆಸಿದ್ದ ದೇವತೆಯನ್ನು ಭಕ್ತಿಯಿಂದ ಆರಾಧಿಸಿ, ಸಿಜಿಕಸ್ಸಿನ ನಿವಾಸಿಗಳ ಕ್ಷಮಾಪಣೆಯನ್ನು ಮತ್ತೊಮ್ಮೆ ಕೇಳಿಕೊಂಡು ದುಃಖದಿಂದ ಮುಂದಕ್ಕೆ ಪಯಣಹೊರಟರು. ಇತ್ತ ಸಿಜಿಕಸ್ಸಿನ ಹೆಂಡತಿಗೆ ಯಾರು ಎಷ್ಟೇ ಸಮಾಧಾನಪಡಿಸಿದರೂ

ದುಃಖಕರವುನವಾಗಲಿಲ್ಲ. ಇವಳ ದಾರುಣವಾದ ದುಃಖವನ್ನು ದೇವತೆಗಳು ಕಂಡು ಕರುಣದಿಂದ ಅವಳನ್ನು ತಮ್ಮ ಸನ್ನಿಧಿಗೆ ಬರಮಾಡಿಕೊಂಡರಂತೆ! ಅವಳು ಅದೃಶ್ಯಳಾಗಿ ಹೋದ ಪ್ರದೇಶದಲ್ಲಿ ಅವಳ ಕಣ್ಣೀರಿಂದಲೇ ಒಂದು ಚಿಲುಮೆಯೊಂದು ಉದ್ಭವವಾಯಿತೆಂದು ಆ ಪ್ರಾಂತದ ಜನರು ಬಹುಕಾಲದ ವರೆಗೂ ಹೇಳಿಕೊಳ್ಳುತ್ತಲಿದ್ದರು.

ಒಂಬತ್ತನೆಯ ಪ್ರಕರಣ.

ನಾವಿಕರಿಗೆ ಹೆರ್ಕ್ಯುಲೀಸನ ಸಹಾಯವು ತಪ್ಪಿದುದು.

ದೋಣಿಯು ಬಿರುಗಾಳಿಯಲ್ಲಿ ಸಿಕ್ಕಿದಾಗ ಅದರ ನಾವಿಕರೆಲ್ಲರೂ ತಮ್ಮ ಶಕ್ತಿಯನ್ನೆಲ್ಲಾ ಬಿಟ್ಟು ಅದನ್ನು ನಡೆಸಬೇಕಾಗಿದ್ದುದರಿಂದ ಅವರು ಹುಟ್ಟುಗಳನ್ನು ಬಹು ರಭಸದಿಂದ ಹೊಡೆಯುತ್ತಿದ್ದರು. ಅವು ಬಿಲ್ಲಿನಂತೆ ಬಾಗುತ್ತಿದ್ದುವು. ಹೆರ್ಕ್ಯುಲೀಸನ ಹುಟ್ಟು ಮಿಕ್ಕವರದಕ್ಕಿಂತ ದಪ್ಪವಾಗಿದ್ದುದರಿಂದಲೂ, ಅವನು ಅದನ್ನು ಬಿರುಗಾಳಿಯಲ್ಲಿ ತನ್ನ ಶಕ್ತಿಯೆಲ್ಲವನ್ನೂ ಪ್ರಯೋಗಿಸಿ ಆಡಿಸುತ್ತಿದ್ದುದರಿಂದಲೂ, ಅದು ಆಗಲೇ ಸ್ವಲ್ಪ ಸೀಳಿಹೋಗಿದ್ದಿತು. ಆರ್ಗೋನಾವೆಯು ಸಿಜಿಕಸ್ ದ್ವೀಪದಿಂದ ಹೊರಟ ಮೂರನೆಯ ದಿನದ ಮಧ್ಯಾಹ್ನಸಮಯದಲ್ಲಿ ಹೆರ್ಕ್ಯುಲೀಸನ ಹುಟ್ಟು ಮುರಿದೇಹೋಯಿತು. ತನ್ನ ಜೊತೆಯವರು ಕಷ್ಟಪಡುತ್ತಿದ್ದಾಗ ತಾನು ಸುಮ್ಮನೆ ಕುಳಿತಿರುವುದಕ್ಕೆ ಹೆರ್ಕ್ಯುಲೀಸನು ಸ್ವಲ್ಪವೂ ಸಮ್ಮತಿಸದಿದ್ದುದರಿಂದಲೂ, ಮತ್ತೆ ಯಾರಹುಟ್ಟೂ ಅವನ ಕೈಗಳಿಗೆ ಸರಿಬೀಳದಿದ್ದುದರಿಂದಲೂ ನಾವಿಕರು ಇನ್ನೂ ಹೊತ್ತಾಗದಿದ್ದರೂ ತಮ್ಮ ದೋಣಿಯನ್ನು ತೀರಕ್ಕೆ ತಂದರು.

೫೪. ದೋಣಿಯು ನಿಂತಕೂಡಲೇ ಹೆರ್ಕ್ಯುಲೀಸನು ಹುಟ್ಟಿನ ಮರವನ್ನು ಹುಡುಕಿಕೊಂಡು ಹೊರಟನು; ಹೆರ್ಕ್ಯುಲೀಸನ ಹಿಂದೆ ಹೈಲಾಸನೂ ಹೊರಟನು. ನಾವಿಕರಲ್ಲಿ ಉಳಿದ ಕೆಲವರು ದೋಣಿಯಲ್ಲೇ ನಿಂತು [illegible] ಕಸ್ಸಿನಲ್ಲಿ ನಡೆದ ಅಸಂಗತವನ್ನು ಕುರಿತು ಮಾತನಾಡಿಕೊಳ್ಳುತ್ತಿದ್ದರು;

ಮತ್ತೆ ಕೆಲವರು ಸಮುದ್ರತೀರದಲ್ಲಿ ಸುತ್ತಾಡಿಕೊಂಡು ಬರಲು ಜೇಸನ್ನಿನ ಅಪ್ಪಣೆಯನ್ನು ಪಡೆದು ಹೊರಟರು; ಇನ್ನೂ ಕೆಲವರು ರಾತ್ರಿಯಲ್ಲಿ ನಾವಿಕರ ಹಾಸಿಗೆಗಳಿಗಾಗಿ ಹುಲ್ಲನ್ನೂ, ಅಡಿಗೆಗಾಗಿ ಬಣಸೌದೆಯನ್ನೂ ತರಲು ಸಂಚಾರಹೊರಟರು.

೫೫. ಹೆರ್ಕ್ಯುಲ್ಸನಿಗೆ ಹುಟ್ಟಿಗೆಬೇಕಾದ ಮರವು ಸುಲಭವಾಗಿ ಸಿಕ್ಕಲಿಲ್ಲ. ಕಡೆಗೆ ಸೂರ್ಯಾಸ್ತಮಯಸಮಯದಲ್ಲಿ ಅವನ ಮನಸ್ಸಿಗೆ ಒಪ್ಪಿದ ಒಂದು ಎಳೆಯಗಿಡವು ಗೋಚರವಾಯಿತು. ತನ್ನ ಗದೆಯಿಂದ ಅವನು ಅದರ ದಪ್ಪಕೊಂಬೆಗಳನ್ನು ಬಡಿದು ಕೆಡವಿ ಸಣ್ಣಸಣ್ಣ ಕೊಂಬೆಗಳನ್ನು ಕೈಯಿಂದಲೇ ತರಿದುಹಾಕಿದನು. ಕಡೆಗೆ ಆ ಬೋಳುಗಿಡವನ್ನು ನೆಲದಿಂದ ಕಿತ್ತು ಬೇರುಗಳನ್ನು ತೆಗೆದುಹಾಕುವ ಕೆಲಸಮಾತ್ರ ಉಳಿಯಿತು. ಬುಡದ ನೆಲವನ್ನು ಮಿದುಮಾಡಿಕೊಳ್ಳುವುದಕ್ಕಾಗಿ ತನ್ನ ಗದೆಯಿಂದ ಗಿಡದಸುತ್ತಲೂ ಬಡಿದು ಗಿಡವನ್ನು ಬಲವಾಗಿ ತಬ್ಬಿ ಮೇಲಕ್ಕೆ ಎತ್ತಲು ಪ್ರಯತ್ನಿಸಿದನು. ಇದೂ ಅಷ್ಟು ಸುಲಭವಾಗಿರಲಿಲ್ಲ. ಆದರೂ ಸ್ವಲ್ಪಕಾಲ ಪ್ರಯತ್ನಿಸಿದ ಮೇಲೆ ಆ ಗಿಡವು ಬುಡಸಹಿತವಾಗಿ ಬಂದುಬಿಟ್ಟಿತು. ಆಗ ಬೇರುಗಳನ್ನು ಮುರಿದು ಗಿಡದ ಮುಂಡವನ್ನು ಸರಿಪಡಿಸಿಕೊಳ್ಳುವ ಹೊತ್ತಿಗೆ ಕತ್ತಲೆಯು ಸುಮಾರಾಗಿ ಕವಿದುಕೊಂಡಿದ್ದಿತು.

೫೬. ಈ ನಡುವೆ ಹೈಲಾಸನು ತಾನು ತಂದಿದ್ದ ಬುಟ್ಟಿಯನ್ನು ಹೆರ್ಕ್ಯುಲ್ಸನು ಕೆಲಸಮಾಡುತ್ತಿದ್ದ ಬಳಿಯಿದ್ದ ಬಂಡೆಯ ದಡದ ದಿಂಬಿಗೆ ಇಟ್ಟು ಕೈಕಾಲುಗಳನ್ನು ತೊಳೆದುಕೊಳ್ಳುವುದಕ್ಕೂ ಕುಡಿಯುವುದಕ್ಕೂ ನೀರನ್ನು ತೆಗೆದುಕೊಂಡು ಬರುವುದಕ್ಕಾಗಿ ಕಂಚಿನ ಒಂದು ಹೂಜೆಯನ್ನು ಹಿಡಿದುಕೊಂಡು ನೀರಿನಬಳಿಗೆ ಹೊರಟಿದ್ದನು. ಇವನು ರಾಜಪುತ್ರನಾಗಿದ್ದರೂ ಕೆಲಸದ ವಿಷಯದಲ್ಲಿ ಹಿಂದೆಗೆಯುತ್ತಿರಲಿಲ್ಲ. ವರ್ಧಿಷ್ಣುವಾದ ಯಾವ ಶ್ರೀಮಂತನು ತಾನೇ "ಈ ಕೆಲಸವು ನನ್ನಪದವಿಗೆ ಕೀಳಾದುದು; ಇದನ್ನು ಆಳುಗಳೇ ಮಾಡಬೇಕು" ಎಂದು ಪಾಲುಮಾರುವನು? ನೀರನ್ನು ಹುಡುಕಿಕೊಂಡು ಹೈಲಾಸನು ಬಹಳ ಸುತ್ತಾಡಿ ಕಡೆಗೆ ಒಂದು ಚಿಲುಮೆಯ ಬಳಿಗೆ ಬಂದನು. ಅದರ ನೀರು ಮಧ್ಯಪ್ರದೇಶದಲ್ಲಿ ಬಹಳ ನಿರ್ಮಲವಾಗಿದ್ದರೂ, ಸುತ್ತುಮುತ್ತಲೂ ಜೊಂಡು ಬೆಳೆದುಕೊಂಡಿದ್ದಿತು. ಮಧ್ಯದಲ್ಲಿ ಒಂದು

ಬಿಂದಿಯು ಇದ್ದುದರಿಂದ ಅದನ್ನು ಹತ್ತಿ ಅದರಮೇಲಿಂದ ನೀರನ್ನು ಮೊಗೆ ದುಕೊಳ್ಳಬೇಕೆಂದು ಹೈಲಾಸನು ಪಾತ್ರೆಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾಗ ಆ ನೀರಿನಲ್ಲಿ ಹಲವು ಸುಂದರಮುಖಗಳು ಕಾಣಿಸಿದುವು. ಹಾಗೆಯೇ ಕುತೂಹಲದಿಂದ ನೋಡುತ್ತಿದ್ದಾಗ, ಆ ಜಲಕನ್ನಿಕೆಯರು ಹೈಲಾಸನ್ನು ತಾವು ಇದ್ದಲ್ಲಿಗೆ ಬರುವಂತೆ ಸನ್ನೆಮಾಡುತ್ತಿದ್ದಂತೆ ಕಂಡಿತು. ಇನ್ನೂ ಸ್ವಲ್ಪಹೊತ್ತಾದಕೂಡಲೆ ಆ ಜಲಕನ್ನಿಕೆಯರು ಹೈಲಾಸಿನ ಕೈಗಳನ್ನು ಹಿಡಿದುಕೊಂಡು ತಾವು ಇದ್ದಲ್ಲಿಗೆ ಬಲಾತ್ಕಾರದಿಂದ ಎಳೆದುಕೊಂಡು ಬಿಟ್ಟರು. ತನ್ನನ್ನು ಬಿಡಬೇಕೆಂದು ಅವನು ಎಷ್ಟೆಷ್ಟೋ ಕೇಳಿಕೊಂಡರೂ ಅವರು ಅವನನ್ನು ಬಿಡಲಿಲ್ಲ.

೫೭. ಇತ್ತ ಹೆರ್‍ಯಾಕ್ಲಿಸನು ತನ್ನ ಕೆಲಸವನ್ನು ಮುಗಿಸಿದ ಕೂಡಲೆ ತನ್ನೊಡನೆ ಬಂದಿದ್ದ ಹೈಲಾಸನ್ನು ನೆನೆದುಕೊಂಡು ಸುತ್ತಲೂ ನೋಡಿದನು. ಮರಕ್ಕೆ ತೂಗಹಾಕಿದ್ದ ಬುತ್ತಿಯು ಮಾತ್ರ ಕಣ್ಣಿಗೆ ಗೋಚರವಾಯಿತು ನೀರನ್ನು ತರಲು ಅವನು ಹೋಗಿರಬಹುದೆಂದು ಭಾವಿಸಿ "ಹೈಲಾಸ್! ಹೈಲಾಸ್!" ಎಂದು ಗಟ್ಟಿಯಾಗಿ ಕೂಗಿದನು. ಉತ್ತರವೇ ಬಾರಲಿಲ್ಲ. ಅವನ ಹೆಸರನ್ನು ಹಿಡಿದು ಪುನಃಪುನಃ ತನ್ನಶಕ್ತಿಯೆಲ್ಲವನ್ನೂ ಉಪಯೋಗಿಸಿ ಅರಚಿದನು. ಆದರೆ ಏನೂ ಪ್ರತ್ಯುತ್ತರವು ಕೇಳಿಸಲಿಲ್ಲ. ಈ ಕೂಗನ್ನು ಜಲಕನ್ನಿಕೆಯರ ಕೈಗೆ ಸಿಕ್ಕಿದ್ದ ಹೈಲಾಸನು ಕೆಲವುಸಾರಿ ಕೇಳಿ ಪ್ರತಿ ಯೊಂದು ಬಾರಿಯೂ "ಜಲುಮೆಯೊಳಗೆ ಮುಳುಗಿಕೊಂಡಿರುವೆನು! ಬಿಡಿಸು! ನನ್ನನ್ನು ಬಿಡಿಸು!" ಎಂದು ಕೂಗಿಕೊಂಡನು. ಆದರೆ ಬಾವಿಗೆ ಇಳಿದಿರುವವರ ಧ್ವನಿಯಂತೆ ಹೈಲಾಸನ ಉತ್ತರವೂ ಬಹುದೂರದಲ್ಲಿದ್ದ ಹೆರ್‍ಯಾಕ್ಲಿಸ್ಸಿಗೆ ಕೇಳಿಸಲೇ ಇಲ್ಲ.

೫೮. ಹೈಲಾಸಿನವಿಷಯದಲ್ಲಿ ಹೆರ್‍ಯಾಕ್ಲಿಸನಿಗೆ ಬಲುಪ್ರೀತಿ; ಹೈಲಾಸಿಗೂ ಹೆರ್‍ಯಾಕ್ಲಿಸ್ಸಿನ ವಿಷಯದಲ್ಲಿ ಹೀಗೆಯೇ. ಹೈಲಾಸನು ಅದೃಶ್ಯ ವಾಗಿ ಹೋಗಿದ್ದುದಕ್ಕಾಗಿ ಹೆರ್‍ಯಾಕ್ಲಿಸ್ಸಿಗೆ ಮೊದಮೊದಲು ಹೆದರಿಕೆಯೂ ಬಳಿಕ ಚಿಂತೆಯೂ ಉಂಟಾದುವು. ಕತ್ತಲೆಯಾದಮೇಲೂ ಅವನು ಅಲ್ಲಿಗೆ ಬಾರದಿದ್ದುದರಿಂದ ಅವನಿಗೆ ಶೋಕವು ಹೆಚ್ಚಿ ಹುಟ್ಟಿನಮರವನ್ನೂ, ಬುತ್ತಿ

ಯನ್ನೂ ತ್ಯಜಿಸಿ "ಹೈಲಾಸ್! ಓ ಹೈಲಾಸ್!!" ಎಂದು ಕೂಗಿಕೊಳ್ಳುತ್ತಾ ದಿಕ್ಕುದಿಕ್ಕಿನಲ್ಲಿಯೂ ಸುತ್ತಾಡುತ್ತಿದ್ದನು.

೩೯. ರಾತ್ರಿ ಬಹಳ ಹೊತ್ತಾದರೂ ಹೆರ್ಕ್ಯುಲೀಸ್ಸನೂ ಹೈಲಾಸನೂ ಹಡಗಿಗೆ ಹಿಂದಿರುಗದಿದ್ದುದರಿಂದ ನಾವಿಕರಿಗೆ ಸಂಶಯವೂ, ಚಿಂತೆಯೂ ಉಂಟಾದುವು. ತಾವು ಅವರನ್ನು ಹುಡುಕಿ ಕರೆತರುವುದಾಗಿ ಹೊರಟಿದ್ದ ಕೆಲವರು ನಾವಿಕರು ಎಲ್ಲೆಲ್ಲೋ ಬಹಳ ಸುತ್ತಾಡಿ ಬಳಲಿ ದೋಣಿಗೆ ಹಿಂದಿರುಗಿದರು. ಈ ಸಮಯಕ್ಕೆ ದೋಣಿಯಲ್ಲಿದ್ದವರಲ್ಲಿ ಬಹಳ ವಾಗ್ವಾದವು ನಡೆಯುತ್ತಿದ್ದಿತು. ಬಲಿಷ್ಠನಾದ ಹೆರ್ಕ್ಯುಲೀಸ್ಸನ್ನು ಬಿಟ್ಟು ಮುಂದಕ್ಕೆ ಹೊರಡಲು ಕೆಲವರು ಇಷ್ಟಪಡದಿದ್ದುದೇ ಈ ವಾಗ್ವಾದಕ್ಕೆ ಕಾರಣವು. ಉತ್ತರದಿಕ್ಕಿನ ವಾಯುದೇವನಾದ ಬೋರಿಯಸ್ಸಿನ ಮಕ್ಕಳುಗಳಾದ ಕಲಾಯಿಸ್, ಜೀಟೀಸ್ ಎಂಬ ಇಬ್ಬರು ನಾವಿಕರು ಹೆರ್ಕ್ಯುಲೀಸ್ಸಿನ ವಿಷಯದಲ್ಲಿ ಸ್ಪರ್ಧಿಸುತ್ತಿದ್ದುದರಿಂದ, ಹೆರ್ಕ್ಯುಲೀಸ್ಸನ್ನು ಬಿಟ್ಟೇ ಹಡಗು ಹೊರಡತಕ್ಕುದೆಂದು ಬಲವಾಗಿ ವಾದಿಸುತ್ತಿದ್ದರು. ಈ ವಾದವನ್ನು ಇನ್ನೂ ಅನೇಕರು ಒಪ್ಪುವಹಾಗೆ ಕಾಣುತ್ತಿದ್ದಿತು. ಅವರಿಗೆ ತಮ್ಮ ಕರ್ತವ್ಯವನ್ನು ಬೋಧಿಸಲು ಯೋಗ್ಯವಾದ ಮರದಬೊಂಬೆಯೇ ಸಮೀಪದಲ್ಲಿದ್ದಾಗ ಅಷ್ಟೊಂದು ವಿವಾದವು ನಿರರ್ಥಕವೆಂದು ಜೇಸನ್ನನು ಸಮಾಧಾನಹೇಳಿ, ಬೊಂಬೆಯ ಬಳಿಗೆ ಹೋಗಿ ಆ ಸಂದರ್ಭದಲ್ಲಿ ಏನುಮಾಡಬೇಕೋ ತಿಳಿಸಬೇಕೆಂದು ಪ್ರಾರ್ಥಿಸಿಕೊಂಡನು. "ಹೆರ್ಕ್ಯುಲೀಸ್ಸನು ನಿಮ್ಮೊಡನೆ ಬಂದು ಕನಕೋರ್ಣಾರ್ಜನಕಾರ್ಯದಲ್ಲಿ ಸಹಾಯಮಾಡುವುದು ದೈವೇಚ್ಛೆಯಲ್ಲ. ನೀವು ಹಿಂದಿರುಗುವಾಗ ದಾರಿಯಲ್ಲಿ ಅವನು ಬಂದು ನಿಮ್ಮಗುಂಪನ್ನು ಸೇರಿಕೊಳ್ಳುವನು" ಎಂದು ಬೊಂಬೆಯು ಹೇಳಿತು. ಇದರಿಂದ ವಾಗ್ವಾದವೆಲ್ಲವೂ ಶಾಂತವಾಯಿತು. ಉಳಿದ ನಾವಿಕರೆಲ್ಲರೂ ಏಕಮನಸ್ಕರಾಗಿ ಮುಂದೆ ಹೊರಟರು.

ಹತ್ತನೆಯ ಪ್ರಕರಣ.

ಜಂಬಗಾರನಾದ ಒಬ್ಬ ದಾಂಡಿಗನು.

ದೋಣಿಯು ಪೂರ್ವಾಭಿಮುಖವಾಗಿ ಹೊರಟು ಬಂದೆರಡು ದಿನಗಳಲ್ಲಿ ಬೆಬ್ರಿಸಿಯು ಎಂಬ ಒಂದುರಾಜ್ಯಕ್ಕೆ ಬಂದಿತು. ಸಮುದ್ರತೀರದಲ್ಲಿ ಕಾವಲಿದ್ದ ಆಳುಗಳು, ದೂರದಲ್ಲಿ ಹೊಸಬರು ಬರುತ್ತಿದ್ದುದನ್ನು ಅಲ್ಲಿಯ ದೊರೆಯಾದ ಅಮಿಕಸ್ ಎಂಬಾತನಿಗೆ ಅರಿಕೆಮಾಡಿದರು. ಈ ದೊರೆಯು ಸಾಧಾರಣಮನುಷ್ಯರಿಗಿಂತ ಗಾತ್ರದಲ್ಲಿ ಬಲು ದೊಡ್ಡವನು. ಮುಷ್ಟಿಯುದ್ಧದಲ್ಲಿ ಇವನಿಗೆ ಬಹಳ ಪ್ರೀತಿಯೂ ಕೌಶಲವೂ ಇದ್ದುವು. ಆದರೆ ಇವನಿಗೆ ಬಹಳ ಗರ್ವವಿದ್ದಿತು. ಆದುದರಿಂದ ಸಿಕ್ಕಿಸಿಕ್ಕಿದವರನ್ನೆಲ್ಲಾ ಇವನು ಮುಷ್ಟಿಯುದ್ಧಕ್ಕೆ ಕರೆಯುತ್ತಿದ್ದನು. ಇವನ ಕೀಟಲೆಯನ್ನು ತಡೆಯಲಾರದೆ ಯಾರಾದರೂ ಇವನೊಡನೆ ಮುಷ್ಟಿಯುದ್ಧಕ್ಕೆ ನಿಂತರೆ, ಪ್ರಾಯಶಃ ಅಂತಹವನು ಬದುಕಿಬರುತ್ತಲೇ ಇರಲಿಲ್ಲ; ಒಂದುವೇಳೆ ಜೀವಸಹಿತವಾಗಿ ಉಳಿದುಕೊಂಡರೂ ಅವನ ಕೈಯೋ, ಕಣ್ಣೋ, ಕಿವಿಯೋ ಊನವಾಗಿಹೋಗುತ್ತಿದ್ದುವು.

೬೧. ಹೊಸಬರು ಬಂದ ಸುದ್ದಿಯನ್ನು ಕೇಳಿದಕೂಡಲೆ ಅಮಿಕಸ್ಸಿಗೆ ತನ್ನೊಡನೆ ಮುಷ್ಟಿಯುದ್ಧಮಾಡಲು ಯಾರಾದರೂ ಸಿಕ್ಕುವರೆಂದು ಬಹಳ ಸಂತೋಷವಾಯಿತು. ಅವನು ಎರಡುಜೋಡಿ ಕೈಚೀಲಗಳನ್ನು ತೆಗೆಸಿಕೊಂಡು ದೋಣಿಯು ದಡಮುಟ್ಟುವುದಕ್ಕೆ ಸ್ವಲ್ಪಮುಂಚೆ ಹೋಗಿ ತೀರದಲ್ಲಿ ನಿಂತುಕೊಂಡು ಜೇಸನ್ ಮೊದಲಾದವರನ್ನು ಕುರಿತು ಹೀಗೆ ಹೇಳಿದನು :—"ನಿಮ್ಮಲ್ಲಿ ಯಾರಾದರೂ ನನ್ನೊಡನೆ ಮುಷ್ಟಿಯುದ್ಧವನ್ನು ಮಾಡುವರಿರುವಿರೋ? ಅಥವಾ, ಈ ವಿದ್ಯೆಯಲ್ಲಿ ನಾನೇ ಗಟ್ಟಿಗನೆಂದು ಯುದ್ಧವಿಲ್ಲದೆಯೇ ಒಪ್ಪಿಕೊಂಡುಬಿಡುವಿರೋ? ಬೇಗ ಉತ್ತರಕೊಡಿ. ಉತ್ತರ ಹೇಳದಹೊರತು ನನ್ನರಾಜ್ಯದಲ್ಲಿ ಕಾಲಿಡಕೂಡದು" ಎಂದು ಹೇಳಿದನು. ಆಗ ಜೇಸನ್ನನು ನಾವಿಕರಲ್ಲೊಬ್ಬನಾದ ಪಾಲ್ಲಕ್ಸ್ ಎಂಬಾತನ ಮುಖ

ವನ್ನು ನೋಡಿ ಸನ್ನೆಮಾಡಿದನು. ಈತನಿಗೆ ಮಲ್ಲಯುದ್ಧದಲ್ಲಿ ಬಹಳ ಪರಿಶ್ರಮವಿದ್ದಿತು ; ಆದುದರಿಂದಲೇ ಜೇಸನ್ನನು ಇವನಿಗೆ ಸನ್ನೆಮಾಡಿದುದು. ಪೊಲ್ಲಕ್ಸನು ಅಮಿಕಸ್ಸನ್ನು ಸಂಬೋಧಿಸಿ—"ನನಗೆ ಮುಷ್ಟಿಯುದ್ಧವು ಸುಮಾರಾಗಿ ಬರುವುದು. ನಿನ್ನೊಡನೆ ಬಂದಿಷ್ಟುಹೊತ್ತು ಕಾದಾಡಿ, ಬಳಿಕ ನೀನೇ ಗಟ್ಟಿಗನೆಂದು ಒಪ್ಪಿಕೊಳ್ಳಬಹುದಷ್ಟೆ ?" ಎಂದು ಹೇಳಿದನು. ಜಂಬಗಾರನಾದ ಅಮಿಕಸ್ಸನು ಅವನನ್ನು ಕಂಡು ಗಹಗಹಿಸಿ ನಕ್ಕು,—"ನೀನು ನನ್ನೊಡನೆ ಯುದ್ಧಮಾಡುವೆಯಾ ? ನಿನ್ನ ಎರಡರಷ್ಟು ದಪ್ಪವಾಗಿದ್ದ ಎಷ್ಟೋ ಜಟ್ಟಿಗಳನ್ನು ಸ್ವಲ್ಪಹೊತ್ತಿನಲ್ಲೇ ಹೊಡೆದು ಮಲಗಿಸಿಬಿಟ್ಟಿರುವೆನು. ನೀನು ಏಕೆ ವ್ಯರ್ಥವಾಗಿ ಸಾಯುವೆ ? ನಾನೇ ಗಟ್ಟಿಗನೆಂದು ಸುಮ್ಮನೆ ಒಪ್ಪಿಕೊ" ಎಂದನು. ಪೊಲ್ಲಕ್ಸನು ಇದಕ್ಕೆ ಸಮ್ಮತಿಸದಿರಲು, ಅಮಿಕಸ್ಸನು ತಾನು ತಂದಿದ್ದ ಕೈಚೀಲಗಳನ್ನು ಪೊಲ್ಲಕ್ಸನ ಮುಂದೆ ಎಸೆದು—"ಇಗೋ! ನೋಡು ! ಆಮೇಲೆ ನನ್ನಕೈಚೀಲ ಒಳ್ಳೆಯದಲ್ಲ ; ಅವನದು ಒಳ್ಳೆಯದು" ಎಂದು ದೂರಬೇಡ. ನಿನಗೆ ಬೇಕಾದ ಜೋಡಿ ಕೈಚೀಲವನ್ನು ಆರಿಸಿಕೊಂಡು ಯುದ್ಧಕ್ಕೆ ಸಿದ್ಧನಾಗು. ತಿಳಿಯಿತೋ?" ಎಂದನು. ಪೊಲ್ಲಕ್ಸನು ತನ್ನಸಮೀಪದಲ್ಲಿದ್ದ ಕೈಚೀಲವನ್ನು ಹಾಕಿಕೊಂಡು ಯುದ್ಧಕ್ಕೆಸಿದ್ಧನಾದನು.

೬೨. ಆರ್ಗೋನಾವಿಕರಲ್ಲಿ ಕೆಲವರು—ಹೆರ್ಕ್ಯುಲಿಸನಾದರೂ ಈ ಸಮಯದಲ್ಲಿ ಇದ್ದಿದ್ದರೆ ಚೆನ್ನಾಗಿದ್ದಿತೆಂದು ಎಂದುಕೊಂಡರು ; ಇನ್ನು ಕೆಲವರು ಪೊಲ್ಲಕ್ಸನ ಗತಿಯೇನಾಗುವುದೋ ಎಂದು ಸಂಶಯಪಡುತ್ತಿದ್ದರು. ಇದಿರುಪಕ್ಷದವರಂತೂ, ಪೊಲ್ಲಕ್ಸನ ಆಯುಸ್ಸು ಅಂದಿಗೇ ಮುಗಿದು ಹೋಗುವುದೆಂದು ನಂಬಿದ್ದರು. ಸ್ವಲ್ಪಹೊತ್ತಿನಲ್ಲೇ ಇಬ್ಬರು ಯೋಧರೂ ಕಾಳಗಕ್ಕೆ ಮೊದಲುಮಾಡಿದರು. ತನ್ನಮೇಲೆ ಯುದ್ಧಕ್ಕೆ ನಿಂತನಲ್ಲಾ ಎಂಬ ರೋಷದಿಂದ ಅಮಿಕಸ್ಸನು ಪೊಲ್ಲಕ್ಸನ್ನು ಒಂದೇಪಟಿಗೆ ತೀರಿಸಿಕೊಂಡು ಬಿಡಬೇಕೆಂದು ಗುರಿಕಟ್ಟಿಹೊಡೆದನು. ಪೊಲ್ಲಕ್ಸನಾದರೋ ಅದಕ್ಕೆ ಸಿದ್ಧನಾಗಿಯೇ ಇದ್ದನು. ಏಟು ಬೀಳುವುದೆಂಬ ಹೊತ್ತಿಗೆ ಸರಿಯಾಗಿ ಬೇಕೆಂದು ಕುಕ್ಕರಿಸಿದನು. ಇದರಿಂದ ಅಮಿಕಸ್ಸನ ಗುರಿತಪ್ಪಿದುದು ಮಾತ್ರವೇ ಅಲ್ಲದೆ ಮುಗ್ಗರಿಸಿದನು. ಪ್ರತಿಕಕ್ಷಿಯು ಮತ್ತೊಮ್ಮೆ ಗುರಿಕಟ್ಟಿ ಹೊಡೆಯುವ ಸಮಯಕ್ಕೆ ಸರಿಯಾಗಿ ಪೊಲ್ಲಕ್ಸನು ಎಡಕ್ಕೆ ತಿರುಗಿ

ಬಿಟ್ಟುದರಿಂದ ಆಮಿಕಸ್ಸನ ಗುರಿಯು ಪುನಃ ತಪ್ಪಿತು. ಈ ಸಲವೇ ಆಮಿಕಸ್ಸನ ಕೋಪವು ಮಿತಿಮೀರಿಹೋಗಿದ್ದಿತು. ಮಗುದೊಮ್ಮೆ ಪೊಲ್ಲಕ್ಸಿಗೆ ಖಂಡಿತವಾಗಿಯೂ ಬುದ್ಧಿ ಕಲಿಸಬೇಕೆಂದು ಆಮಿಕಸ್ಸನು ತನ್ನ ಎರಡು ಮುಷ್ಟಿಗಳಿಂದಲೂ ಬಲವಾಗಿ ಹೊಡೆದನು. ಆದರೆ ಪೊಲ್ಲಕ್ಸನು ಈಸಾರಿ ಕ್ಷಣಮಾತ್ರದಲ್ಲಿ ಹಿಂದಕ್ಕೆ ನುಸುಳಿಕೊಂಡುಬಿಟ್ಟುದರಿಂದ ಆಮಿಕಸ್ಸಿನ ಮುಷ್ಟಿಗಳು ಒಂದಕ್ಕೊಂದು ತಗುಲಿದುವು. ಆಮಿಕಸ್ಸಿನ ಮುಖವು, ಬಹಳ ಹುಳಿಯಾಗಿರುವ ಪದಾರ್ಥವನ್ನು ಅರಿಯದೆ ಬಾಯಲ್ಲಿ ಹಾಕಿಕೊಂಡರೆ ಹೇಗಾಗುವುದೋ ಹಾಗೆ ಆಯಿತು ; ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಇದನ್ನು ಕಂಡು ಆಗ್ರೋನಾವಿಕರು ಗೊಳ್ಳೆಂದು ನಕ್ಕರು ; ಅವರು ನಕ್ಕಷ್ಟು ಆಮಿಕಸ್ಸಿಗೆ ರೋಷವು ಹೆಚ್ಚಿತು. ಅವನು ಯಾವಯಾವ ಪಟ್ಟುಗಳನ್ನು ಪ್ರಯೋಗಿಸಿದರೂ ಗಾಳಿಯನ್ನು ಗುದ್ದಿ ಮೈನೋಯಿಸಿಕೊಂಡಂತೆ ಆಯಿತೇ ಹೊರತು ಪೊಲ್ಲಕ್ಸಿಗೆ ಒಂದು ಏಟಾದರೂ ತಗುಲಲಿಲ್ಲ.

೬೩. ಇಷ್ಟುಹೊತ್ತಿಗೆ ಆಮಿಕಸ್ಸಿನ ಗರ್ವವು ಮುಕ್ಕಾಲುಪಾಲು ಅಣಗಿಹೋಗಿದ್ದಿತು. ಪೊಲ್ಲಕ್ಸನು ಬೇಗಬೇಗನೆ ಸುತ್ತಾಡುತ್ತಾ ಆಮಿಕಸ್ಸನ್ನು ಚೆನ್ನಾಗಿ ದಣಿಸಿಬಿಟ್ಟು ಒಳ್ಳೆಯಸಮಯ ನೋಡಿಕೊಂಡು ಅವನ ಮುಖದಮೇಲೆ ಒಂದುಸಲ ಮುಷ್ಟಿಪ್ರಹಾರವನ್ನು ಮಾಡಿದನು. ಇದರ ರಭಸಕ್ಕೆ ಅವನ ಮೂಗಿನ ಸೆರೆಗಳು ಒಡೆದು ರಕ್ತವು ಧಾರೆಧಾರೆಯಾಗಿ ಹರಿಯಲಾರಂಭಿಸಿತು. ಅವನಿಗೆ ಸ್ವಲ್ಪ ಚೇತರಿಸಿಕೊಳ್ಳಲು ಅವಕಾಶವನ್ನು ಕೊಟ್ಟಬಳಿಕ ಪೊಲ್ಲಕ್ಸನು ಪುನಃ ಯುದ್ಧಕ್ಕೆ ನಿಂತನು. ಆಮಿಕಸ್ಸಿಗೆ ಕೋಪವು ತಡೆಯಲಾರದಷ್ಟು ಬಂದಿದ್ದಿತು ; ಆದರೆ ಕೋಪದಿಂದ ಕಾಳಗವನ್ನು ಗೆಲ್ಲಲಾಗುವುದೆ? ಆವನು ಹೇಗೋ ಅತ್ಯಂತಸಾಹಸಪಟ್ಟು ಪೊಲ್ಲಕ್ಸಿಗೆ ಒಂದುಏಟನ್ನು ಹೊಡೆದರೂ ಆ ಹೊಡೆತವೂ ಅಷ್ಟು ಬಲವಾದುದಾಗಿರಲಿಲ್ಲ. ಪೊಲ್ಲಕ್ಸನು "ಇಗೋ! ನಿನ್ನಏಟಿನ ಸಾಲವನ್ನು ಬಡ್ಡಿಸಹಿತ ತೀರಿಸುವೆನು ; ತೆಗೆದುಕೋ" ಎಂದುಹೇಳಿ ಒಂದುಏಟನ್ನು ಬಲವಾಗಿಕೊಟ್ಟನು. ಇದರಿಂದ ಆಮಿಕಸ್ಸನ ಒಂದು ಹೆಗಲಿನ ಮೂಳೆಯು ಮುರಿಯಿತು. ಆದರೂ ಅವನು ಯುದ್ಧಕ್ಕೆ ನಿಂತೇ ಇದ್ದುದರಿಂದ ಮೂರನೆಯಸಾರಿ ಮತ್ತೊಂದು

ಏಟನ್ನು ಕಿವಿಯಬುಡಕ್ಕೆ ತಾಕುವಂತೆ ಪೊಲ್ಲಕ್ಸನು ಹೊಡೆದುದರಿಂದ ಆಮಿಕಸ್ಸನು ತತ್ತರಿಸತೊಡಗಿದನು; ಕಣ್ಣುಗಳಿಗೆ ಕತ್ತಲೆ ಕವಿದುಕೊಂಡಿತು; ಕಿವಿಯಲ್ಲಿ ಏನೋ ಅಪೂರ್ವವಾದ ಶಬ್ದವುಂಟಾಗಿ ಅವನು ಸ್ವಲ್ಪಹೊತ್ತಿನಲ್ಲೇ ನಿಶ್ಚೇತನನಾಗಿ ನೆಲದಮೇಲೆ ಬಿದ್ದುಬಿಟ್ಟನು. ಅವನ ಕಡೆಯ ಪರಿಚಾರಕರು ಎಷ್ಟೋ ಉಪಚರಿಸಿದಮೇಲೆ ಆಮಿಕಸ್ಸಿಗೆ ಜ್ಞಾನವು ಬಂದಿತು. ಪೊಲಕ್ಸಿನ ಕಡೆಗೆ ನೋಡಲೂಸಹ ಅವನಿಗೆ ಧೈರ್ಯವಿರಲಿಲ್ಲ.

೬೪. ಆಗ ಪೊಲ್ಲಕ್ಸಸನು ಪುನಃ ಅವನನ್ನು ಯುದ್ಧಕ್ಕೆ ಕರೆದನು; ಆಮಿಕಸ್ಸನಾದರೋ ಹಿಂದೆ ತನಗೆ ಉಂಟಾಗಿದ್ದ ಜಯಗಳಿಂದ ಮತ್ತನಾಗಿ ಅನೇಕರನ್ನು ಹೀಯಾಳಿಸುತ್ತಿದ್ದುದು ಸರಿಯಲ್ಲವೆಂದು ಯೋಚಿಸಿಕೊಳ್ಳುತ್ತಿದ್ದನು. ಅವನ ದೀನದೃಷ್ಟಿಯಿಂದ ಆಮಿಕಸ್ಸನ ಮನೋಭಾವವನ್ನರಿತು, ಪೊಲ್ಲಕ್ಸಸನು ಇನ್ನು ಮುಂದೆ ಯಾರನ್ನೂ ಮಲ್ಲಯುದ್ಧಕ್ಕೆ ಕೇಳಕೂಡದಿಲ್ಲವೆಂದು ಆಮಿಕಸ್ಸಿನಿಂದ ಪ್ರಮಾಣಮಾಡಿಸಿ ಆ ಮುಷ್ಟಿಯುದ್ಧವನ್ನು ಕೊನೆಗಾಣಿಸಿದನು. ಆದರೆ ಆಮಿಕಸ್ಸನ ಕಡೆಯ ಆಳುಗಳಿಗೆ ತಮ್ಮ ದಣಿಯು ಆದಿನ ಅನುಭವಿಸಿದ ಅವಮಾನಕ್ಕಾಗಿ ಬಲುಕೋಪವುಂಟಾಗಿದ್ದಿತು. ಅವರು, ಪೊಲ್ಲಕ್ಸನು ಮಾಡಿದ ಯುದ್ಧವು ಅನ್ಯಾಯವಾದುದೆಂದು ಹೇಳುತ್ತಾ ಆರ್ಗೋನಾವಿಕರೊಡನೆ ಕೇಳಕುಜಗಳವನ್ನು ತೆಗೆದರು. ಆದುದರಿಂದ ಜೇಸನ್ ಮೊದಲಾದವರು ಅವರನ್ನು ಚೆನ್ನಾಗಿ ಶಿಕ್ಷಿಸಿ, ಆಮಿಕಸ್ಸಿಗೆ ಉಂಟುಮಾಡಿದ್ದಂತೆಯೇ ಅವರಿಗೂ ವಿವೇಕವನ್ನು ಕಲಿಸಿ, ಮುಂದಕ್ಕೆ ಪಯಣಹೊರಟರು

ಹನ್ನೊಂದನೆಯ ಪ್ರಕರಣ.

ಒಬ್ಬ ನಿರ್ಭಾಗ್ಯನಾದ ದೊರೆಯ ಕಷ್ಟನಿವಾರಣೆ.

ಆರ್ಗೋ ನಾವೆಯು ಪ್ರೊಪಾಂಟಿಸ್ ಸಮುದ್ರದಲ್ಲಿ ಇದುವರೆಗೂ ಬಲದಹದ ಬಳಿಯಲ್ಲೇ ಪ್ರಯಾಣಮಾಡುತ್ತಿದ್ದಿತು. ಈಗ ನಾವಿಕರು ಎಷ್ಟೆಷ್ಟೋ ತಡೆಯುತ್ತಿದ್ದರೂ ದೋಣಿಯು ಎಡಬಡವಕಡೆಗೇ

ತಿರುಗುತ್ತಿದ್ದಿತೆಂದು ಕಂಡಿತು ದೋಣಿಯು ಬೊಂಬೆಯನ್ನು ಕೇಳಲು ಪ್ರೊಪಾಂಟಿಸ್ಸಿನ ಬಲದಡದಲ್ಲಿ ಆ ನಾವಿಕರು ಮಾಡಬೇಕಾದುದು ಮತ್ತೇನೂ ಇಲ್ಲವೆಂದು ತಿಳಿಯಿತು. ಸ್ವಲ್ಪಕಾಲ ದೋಣಿಯು ಎಡತೀರದಲ್ಲಿ ಪಯಣ ಮಾಡಿದಕೂಡಲೆ ಥ್ರೇಸ್ ಎಂಬ ಪ್ರದೇಶಕ್ಕೆ ಅದು ಬಂದಿತು. ಆ ರಾಜ್ಯದ ಮುಖ್ಯಪಟ್ಟಣದ ಸಮೀಪಕ್ಕೆ ಬರುವಾಗ ಸಮುದ್ರತೀರದಲ್ಲಿ ಆಶ್ಚರ್ಯಕರವಾದ ಒಂದು ನೋಟವನ್ನು ಕಂಡರು.

೬೬. ದೋಣಿಯು ದಡವನ್ನು ಸೇರುವ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ಒಬ್ಬ ಮನುಷ್ಯನೂ ಅವನಿಗೆ ದೂರದಲ್ಲಿ ಕೆಲವರು ಆಳುಗಳೂ ಇದ್ದರು. ಅವನ ತಲೆಯಮೇಲಿದ್ದ ಕಿರೀಟದಿಂದಲೂ, ಧರಿಸಿದ್ದ ಉಡುಪಿನಿಂದಲೂ ಆತನು ಆ ಪ್ರಾಂತದ ರಾಜನೆಂದು ಸುಲಭವಾಗಿ ತಿಳಿಯುವಂತಿದ್ದಿತು. ಅವನ ಕೈಯಲ್ಲಿ ಮಾತ್ರ ರಾಜದಂಡಕ್ಕೆ ಬದಲಾಗಿ ಊರುಗೋಲೊಂದು ಇದ್ದಿತು. ಮುಖವೂ ಕೈಕಾಲುಗಳೂ ಕ್ಷಯರೋಗಿಯ ಅವಯವಗಳಂತೆ ಬಹಳ ಕೃಶವಾಗಿದ್ದುವು ; ಅವನ ಕಣ್ಣುಗಳ ಗುಡ್ಡೆಗಳು ಒಡೆದುಹೋಗಿ ನೋಡುವುದಕ್ಕೆ ಭಯಂಕರವಾಗಿದ್ದುವು ; ಅವಕ್ಕೆ ಸ್ವಲ್ಪಮಾತ್ರವೂ ದೃಷ್ಟಿಪಾಟವವಿರಲಿಲ್ಲವಾದುದರಿಂದಲೇ ಅವನು ಒಂದು ಕೈಯಲ್ಲಿ ಊರುಗೋಲಿನಿಂದ ಸುತ್ತಲೂ ತಡಕಿನೋಡುತ್ತಾ, ಮತ್ತೊಂದು ಕೈಯಿಂದ ತಡವರಿಸುತ್ತಾ ಮೆತ್ತಮೆತ್ತಗೆ ಸಮುದ್ರದ ಅಂಚಿನವರೆಗೂ ಬಂದಿದ್ದನು. ನಾವಿಕರಲ್ಲಿ ಕೆಲವರು ಅವನನ್ನು ಕಂಡು, ಸಮುದ್ರದಲ್ಲಿ ಬಿದ್ದು ಸಾಯುವನಲ್ಲಾ ಎಂದು ಚಿಂತಾಯುತರಾಗಿದ್ದರು.

೬೭. ದೋಣಿಯು ಸಮುದ್ರತೀರವನ್ನು ಸೇರಿದುದನ್ನು ಶಬ್ದದಿಂದಲೇ ಫೀನಿಯಸ್ ಎಂಬ ಆ ರಾಜನು ತಿಳಿದು “ಜೇಸನ್ ! ನಿನಗೆ ಸ್ವಾಗತವು ! ” ಎಂದು ಗಟ್ಟಿಯಾಗಿ ಹೇಳಿದನು. ಆ ವಿಲಕ್ಷಣಪುರುಷನ ಪರಿಚಯವು ನಾವಿಕರಲ್ಲಿ ಒಬ್ಬರಿಗೂ ಇರಲಿಲ್ಲವಾದರೂ, ಅವನಿಗೆ ಅವರ ಪರಿಚಯವಿದ್ದಂತೆ ತೋರಿದುದು ನಾವಿಕರಿಗೆ ಮತ್ತೂ ಆಶ್ಚರ್ಯವನ್ನುಂಟು ಮಾಡಿತು. ಅವನಿಗೆ ಭವಿಷ್ಯದ್ವರ್ತಮಾನವು ತಿಳಿದಿದ್ದಕಾರಣ ಜೇಸನ್ ಮೊದಲಾದವರ ಆಗಮನವನ್ನು ಕುತೂಹಲದಿಂದ ಇದಿರುನೋಡುತ್ತಾ

ಸೇವಕರಿಗೆ ಆಜ್ಞಾಪಿಸಿದ ಕೂಡಲೆ, ಅವರು ಭಯಭಕ್ತಿಯಿಂದ ದೋಣಿಯು ಬಳಿಗೆ ಬಂದು ನಾವಿಕರ ಪದಾರ್ಥಗಳನ್ನು ಇಳಿಸಲು ಸಹಾಯಮಾಡಿದರು. ನಾವಿಕರಲ್ಲಿ ಯಾರಿಗೂ ಬಣಜಂಬವಿರಲಿಲ್ಲ, ಪ್ರತಿಯೊಬ್ಬನಿಗೂ ಸಣ್ಣಸಣ್ಣ ಕೆಲಸಗಳವಿಷಯದಲ್ಲಿಯೂ ಬಹಳ ಗೌರವವಿದ್ದಿತು. ಆದಕಾರಣ ಅವರಿಗೆ ಸೇವಕರ ಆವಶ್ಯಕತೆಯೇ ಇರಲಿಲ್ಲ. ಆದರೂ ಸೇವಕರ ಸಹಾಯ ವನ್ನು ಅಂಗೀಕರಿಸದೆ ಹೋದರೆ ಆ ಕುರುಡ ದೊರೆಯ ಮನಸ್ಸಿಗೆ ಖೇದ ವಾಗುವುದೆಂದು ತಿಳಿದು ಅವರ ಸೇವೆಯನ್ನು ಅಂಗೀಕರಿಸಿದರು. ಇತರರ ಮನಸ್ಸಿಗೆ ಖೇದವಾಗದಂತೆ ನಡೆದುಕೊಳ್ಳುವುದೇ ಮಹಾತ್ಮರ ಒಂದು ಮುಖ್ಯಲಕ್ಷಣವಷ್ಟೆ !

೬೮. ಆ ರಾಜನು ಅತಿಥಿಗಳನ್ನು ತನ್ನ ಅರಮನೆಗೆ ಕರೆದುಕೊಂಡು ಹೋದಾಗ, ಊಟದ ಸಮಯವಾಗಿದ್ದಿತು ಭೋಜನಕ್ಕೆ ಎಲ್ಲವೂ ಅಣಿ ಯಾಗುತ್ತಿದ್ದಿತು ಸ್ವಲ್ಪಹೊತ್ತಿನಲ್ಲೇ ಪರಿಚಾರಕರು ಬಗೆಬಗೆಯ ಭಕ್ಷ್ಯ ಭೋಜ್ಯಪಾನೀಯಗಳನ್ನು ಎಲ್ಲರಿಗೂ ತಂದು ಬಡಿಸಲಾರಂಭಿಸಿದರು. ಇಷ್ಟುಹೊತ್ತಿಗೆ ಫೀನಿಯಸ್ಸನೂ ತನ್ನ ಕಾರ್ಶ್ಯಕ್ಕೆ ಕಾರಣವನ್ನು ವಿವರಿಸ ಲಾರಂಭಿಸಿದ್ದನು : "ಮಹಾತ್ಮರುಗಳಿರಾ ! ನನಗೆ ಧನಧಾನ್ಯಾದಿಗಳೂ, ಬಂಧುಮಿತ್ರರೂ ಬೇಕಾದಷ್ಟು ಇರುವರು ; ಆದರೆ ಮನಶ್ಶಾಂತಿಮಾತ್ರ ಇರುವುದಿಲ್ಲ. ಇದೊಂದು ಇಲ್ಲದಿದ್ದರೆ, ಎಷ್ಟೇ ಐಶ್ವರ್ಯವಿದ್ದರೂ ವ್ಯರ್ಥ ವೆಂದು ನಿಮ್ಮ ಮಹಾತ್ಮಗುರುವು ಬೋಧಿಸುತ್ತಿದ್ದುದನ್ನು ನೀವು ಎಷ್ಟೋ ಬಾರಿ ಕೇಳಿಯೇ ಇರುವಿರಿ. ನಾನು ಊಟಕ್ಕೆ ಕುಳಿತುಕೊಳ್ಳುವ ಸಮಯ ಕ್ಕೆ ಸರಿಯಾಗಿ ಎಲ್ಲಿಂದಲೋ ಹೊಲಸುನಾತದ ಕೆಲವು ಪಕ್ಷಿಗಳು ಬಂದು ನನ್ನ ಬಳಿಯಿರುವ ಆಹಾರವನ್ನೆಲ್ಲಾ ಕಚ್ಚಿಕೊಂಡು ಹಾರಿಹೋಗುವುವು. ಅವಕ್ಕೆ ಕಾಲನಿಯಮವೇ ಇರುವುದಿಲ್ಲ. ಅವುಗಳನ್ನು ತಪ್ಪಿಸಬೇಕೆಂದು ಮಧ್ಯರಾತ್ರಿಯಲ್ಲಿ ದುರ್ಗಮವಾದ ಪ್ರದೇಶದಲ್ಲಿ ಊಟಕ್ಕೆ ಕುಳಿತು ಕೊಂಡರೂ, ಆ ಪಕ್ಷಿಗಳ ಕಾಟವು ಒಂದುಸಲವಾದರೂ ನನಗೆ ತಪ್ಪಿರು ವುದಿಲ್ಲ. ನನಗೆ ಒಬ್ಬ ದೇವತೆಯ ಶಾಪದಿಂದಲೇ ಹೀಗೆ ಆಗಿರುವುದರಿಂದ ದೈವಿಕವಾದ ಈ ಕಷ್ಟವು ತಪ್ಪುವುದಕ್ಕೇ ಅವಕಾಶವಿರಲಿಲ್ಲ. ಆದರೆ ಇಲ್ಲಿರುವ ಬೋರಿಯಾಸಿನ ಮಕ್ಕಳಿಂದ ನನಗೆ ಶಾಪವಿಮೋಚನೆಯು ಕಾಲ

ವು ಈಗ ಒದಗಿರುವುದರಿಂದ ನನ್ನ ಕಷ್ಟವು ಕೊನೆಗಾಣುವುದು" ಎಂದು ಫೀನಿಯುಸ್ಸನು ಹೇಳುತ್ತಿದ್ದನು.

೬೯. ಇಷ್ಟರಲ್ಲಿ ಪರಿಚಾರಕರು ಊಟಕ್ಕೆ ಸಂಪೂರ್ಣವಾಗಿ ಸಿದ್ಧಪಡಿಸಿದ್ದರು. ಅಕಸ್ಮಾತ್ತಾಗಿ ಸುಂಟರಗಾಳಿಯು ಮೊರೆತವಂತೆ ಒಂದು ದೊಡ್ಡ ಶಬ್ದವು ಕೇಳಬಂದಿತು; ಆ ಶಬ್ದವು ಹತ್ತಿರಹತ್ತಿರಕ್ಕೆ ಬಂದ ಹಾಗೆಲ್ಲಾ ಅದರ ರಭಸವು ಹೆಚ್ಚುತ್ತಾ ಬಂದುದೂ ಅಲ್ಲದೆ ತಡೆಯಲಾಗದ ದುರ್ಗಂಧವೊಂದು ವ್ಯಾಪಿಸುತ್ತಿದ್ದಿತು. ಅತಿಥಿಗಳಲ್ಲಿ ಅನೇಕರು ತಮ್ಮ ಮೂಗುಗಳನ್ನು ಬಲವಾಗಿ ಮುಚ್ಚಿಕೊಂಡರು. ಒಂದು ಕ್ಷಣಮಾತ್ರದಲ್ಲಿ ವಿಲಕ್ಷಣವಾದ ಕೆಲವು ಪಕ್ಷಿಗಳು ಭೋಜನಮಂದಿರಕ್ಕೆ ಹಾರಿಬಂದುವು. ಅವುಗಳ ಮುಖವು ಸುಂದರವಾದ ಬಾಲಿಕೆಯರ ಮುಖದಂತೆ ಇದ್ದುವು; ಆದರೆ ಅವುಗಳು ಎಷ್ಟೋ ಕಾಲದಿಂದ ತಿನ್ನಲಿಕ್ಕಿಲ್ಲದೆ ಬಂಗೆಟ್ಟವರ ಮುಖದಂತೆ ತೋರುತ್ತಿದ್ದುವು. ಅವುಗಳ ಮೈಯೂ ರೆಕ್ಕೆಪುಕ್ಕಗಳೂ ಪಕ್ಷಿಗಳಿಗೆ ಇರುವಂತೆಯೇ ಇದ್ದುವು. ಆದರೆ ಅವುಗಳ ಕೊಕ್ಕೂ ಉಗುರುಗಳೂ ಅವುಗಳ ಗಾತ್ರಕ್ಕೆ ಮೀರಿದುದಾಗಿ ಬಹು ಭಯಂಕರವಾಗಿದ್ದುವು. ಎಂದಿಗಿಂತಲೂ ಸಮೃದ್ಧಿಯಾಗಿ ಬಡಿಸಿದ್ದ ಆಹಾರವನ್ನೆಲ್ಲಾ ಆ ಪಕ್ಷಿಗಳು ಸ್ವಲ್ಪಹೊತ್ತಿನಲ್ಲೇ ತಿಂದುಬಿಟ್ಟುವು. ಯಾರಿಗೇನೂ ತೋಚದು. ಈ ಸಮಯಕ್ಕೆ ಸರಿಯಾಗಿ ನಾವಿಕರ ಮಧ್ಯದಲ್ಲಿದ್ದ ಜಿಟೀಸ್ ಕಲಾಯಿಸ್ ಎಂಬುವರು ಕಣಕಾಲುಗಳಿಂದ ಹೊರಟಿದ್ದ ರೆಕ್ಕೆಗಳ ಸಹಾಯದಿಂದ ಇಬ್ಬರೂ ತಮ್ಮ ತಮ್ಮ ಆಯುಧಗಳನ್ನು ಹಿಡಿದು ಆ ಪಕ್ಷಿಗಳ ಹಿಂದೆಯೇ ಬಹುವೇಗವಾಗಿ ಹಾರಿಹೋದರು. ಎಂದೂ ಇಲ್ಲದ ಈ ಶತ್ರುಗಳನ್ನು ಕಂಡು ಆ ಪಕ್ಷಿಗಳು ಹೆದರಿ ತಮಗೆ ಶಕ್ತಿಯಿದ್ದಷ್ಟು ವೇಗದಿಂದ ಹಾರಿಹೋದುವು. ಮುಂದೆ ಆ ಪಕ್ಷಿಗಳೂ, ಹಿಂದೆ ಆಕಾಶಗಾಮಿಗಳಾದ ಈ ಇಬ್ಬರೂ ಎಷ್ಟೋ ದೂರ ಹೋದರು. ಸಮುದ್ರಮಧ್ಯದಲ್ಲಿ ಒಂದು ದ್ವೀಪವು ಸಿಕ್ಕಿತು. ಪಕ್ಷಿಗಳು ಇನ್ನು ಮುಂದಕ್ಕೆ ಹಾರಲಾರದೆ ಅಲ್ಲಿ ಬಿದ್ದುಬಿಟ್ಟುವು; ಜಿಟೀಸನೂ ಕಲಾಯಿಸನೂ ಕೆಳಕ್ಕಿಳಿದು ಅವುಗಳನ್ನು ಕೊಂದುಹಾಕಲು ತಮ್ಮ ಕತ್ತಿಗಳನ್ನು ಬೀಸುವುದರಲ್ಲಿದ್ದರು. ಆಗ ಒಬ್ಬ ದೇವತೆಯು ಅವರಿಗೆ ಕಾಣಿಸಿ

ಕೊಂಡು—"ದೇವತೆಗಳ ಕೋಪಕ್ಕೆ ಪಾತ್ರರಾದವರನ್ನು ಶಿಕ್ಷಿಸುವುದಕ್ಕಾಗಿಯೇ ಇವು ಸೃಷ್ಟವಾಗಿರುವುವು; ಫೀನಿಯುಸ್ಸಿನ ಶಾಪವು ಇಂದಿಗೆ ನಿವೃತ್ತವಾಯಿತು; ನೀವು ಇವನನ್ನು ಕೊಲ್ಲುವುದು ದೇವತೆಗಳಿಗೆ ಇಷ್ಟವಿಲ್ಲ" ಎಂದು ತಿಳಿಸಿದನು. ಆ ಪಕ್ಷಿಗಳೂ ಮನುಷ್ಯಧ್ವನಿಯಿಂದ "ಮುಂದೆ ಎಂದೆಂದಿಗೂ ದೇವರ ಆಣೆಗೂ ಫೀನಿಯುಸ್ಸನ್ನು ಕಾಡುವುದಿಲ್ಲ; ನಮ್ಮ ಪ್ರಾಣವನ್ನು ಉಳಿಸಿ" ಎಂದು ಬೇಡಿಕೊಂಡುವು. ಆದುದರಿಂದ ಅವರಿಬ್ಬರೂ ತಮ್ಮ ವಧೋದ್ಯೋಗವನ್ನು ಬಿಟ್ಟು ಫೀನಿಯುಸ್ಸಿನ ಬಳಿಗೆ ಹಿಂದಿರುಗಿದರು.

೨೦. ಇವರು ಬರುವಹೊತ್ತಿಗೆ ಭೋಜನಮಂದಿರದಲ್ಲಿ ಪುನಃ ಭೋಜನಕ್ಕೆ ಸಿದ್ಧಪಡಿಸಿದ್ದರು; ಫೀನಿಯುಸ್ಸಿಗೆ ದೃಷ್ಟಿಯು ಬಂದಿದ್ದಿತು; ಅವನ ಮುಖದಮೇಲಿದ್ದ ಗ್ಲಾನಿಚಿಹ್ನೆಗಳು ಹೋಗಿ ಅವನು ಬಹಳ ಗೆಲುವಾಗಿ ಕಾಣುತ್ತಿದ್ದನು. ಅವನ ಧ್ವನಿಯೂ ಬಹಳ ಸಂತೋಷದ್ಯೋತಕವಾಗಿದ್ದಿತು. ಫೀನಿಯುಸ್ಸನು ಆಹಾರವನ್ನು ತಿಂದು ಅಂದಿಗೆ ಎಷ್ಟೋ ವರುಷಗಳಾಗಿ ಹೋಗಿದ್ದುದರಿಂದ, ಅವನಿಗೆ ಆದಿನ ಆಹಾರದಲ್ಲಿ ಅತ್ಯಪೂರ್ವವಾದ ರುಚಿಯು ತೋರುತ್ತಿದ್ದಿತು. ಅತಿಥಿಗಳೆಲ್ಲರೂ ಸಂತೃಪ್ತಿಯಾಗಿ ಊಟಮಾಡುವಂತೆ ಫೀನಿಯುಸ್ಸನು ಬಹಳವಾಗಿ ಉಪಚಾರ ಹೇಳುತ್ತಿದ್ದನು. ಈ ನಡುವೆ "ನಿನಗೆ ಶಾಪವುಂಟಾಗಿದ್ದುದಕ್ಕೆ ಕಾರಣವೇನು?" ಎಂದು ಜೇಸನ್ನನು ಕೇಳಲು,—"ಒಬ್ಬ ದೇವತೆಯು ತನಗೆ ಸಂಬಂಧಪಟ್ಟ ಒಂದು ಗುಪ್ತವಿಷಯವನ್ನು ಹೇಳಿದನು; ಅದನ್ನು ನಾನು ಹೇಳಿದ್ದರೆ ಅನೇಕ ಜಗಳಗಳುಂಟಾಗುತ್ತಿದ್ದುವು. ಆದುದರಿಂದ ನಾನು ಹೇಳಲಿಲ್ಲ. ಈ ಕಾರಣಕ್ಕಾಗಿ ನನಗೆ ಶಾಪವು ಬಂದಿದ್ದಿತು; ನನಗೆ ಕಷ್ಟಬಂದರೂ ಚಿಂತೆಯಿಲ್ಲ. ನನ್ನಿಂದ ಇತರರಿಗೆ ಕಷ್ಟವುಂಟಾಗಲಿಲ್ಲವಲ್ಲಾ ಎಂದು ಸಂತೋಷಪಡುತ್ತಿರುವೆನು" ಎಂಬುದಾಗಿ ಫೀನಿಯುಸ್ಸನು ಉತ್ತರಹೇಳಿದನು.

೨೧. ಮಾರನೆಯದಿನದ ಪ್ರಾತಃಕಾಲದಲ್ಲಿ ಮುಂದಕ್ಕೆ ಪಯಣಬೆಳೆಸುವ ವಿಚಾರವನ್ನು ಪ್ರಸ್ತಾಪಿಸಿದಾಗ, ಅಲ್ಲಿಗೆ ಸ್ವಲ್ಪ ದೂರದಲ್ಲಿ ಮೃತ್ಯುವಿನ ಬಾಯಂತಿದ್ದ ತೇಲುವ ಬಂಡೆಗಳಿರುವುವೆಂದೂ, ದೇವತೆಗಳಿಗೆ ಅಮೃತವನ್ನು ತಗೆದುಕೊಂಡು ಹೋಗುತ್ತಿದ್ದ ಪಾರಿವಾಳದ ಪಕ್ಷಿಗಳನ್ನೂ ಸಹ

ಸಲಕ್ಕೆ ಒಂದೊಂದರಂತೆ ಅವು ಅನೇಕವೇಳೆ ತಮ್ಮನಡುವೆ ಸಿಕ್ಕಿಸಿಕೊಂಡು ಕೊಂದುಬಿಟ್ಟಿರುವುವೆಂದೂ ತಿಳಿಸಿ, ಅವುಗಳಿಂದ ತಪ್ಪಿಸಿಕೊಳ್ಳಬಹುದೋ ಇಲ್ಲವೋ ಎಂಬುದನ್ನು ಒಂದು ಪಾರಿವಾಳವನ್ನು ಮುಂಚೆ ಹಾರಿಸಿ ನೋಡುವುದರ ಮೂಲಕ ತಿಳಿದುಕೊಳ್ಳಬಹುದೆಂಬುದೂ ಫೀನಿಯಸ್ಸನು ಬೋಧಿಸಿದನು. ಬಳಿಕ ನಾವಿಕರು ಫೀನಿಯುಸ್ಸಿನ ಅಪ್ಪಣೆಯನ್ನು ಪಡೆದು ಮುಂದಕ್ಕೆ ಪಯಣಹೊರಟರು.

ಹನ್ನೆರಡನೆಯ ಪ್ರಕರಣ.

ಮೃತ್ಯುವಿನಬಾಯಿ ; ಕಂಚಿನಗರಿಯ ಪಕ್ಷಿಗಳು

ಸ್ವಲ್ಪದೂರ ಪ್ರಯಾಣಮಾಡಿದ ಕೂಡಲೆ ನಾವಿಕರಿಗೆ ತಮ್ಮ ಆಕಡೆ ಈಕಡೆಯ ತೀರಗಳು ಹತ್ತಿರ ಹತ್ತಿರಕ್ಕೆ ಬರುತ್ತಿದ್ದಂತೆ ತೋರಿದುವು. ಕಡೆಗೆ ಅವರು ಒಂದು ಜಲಸಂಧಿಯನ್ನು ದಾಟಿ ಮತ್ತೊಂದು ಸಮುದ್ರಕ್ಕೆ ಹೋಗಬೇಕಾಗಿರುವುದನ್ನು ಕಂಡುಕೊಂಡರು. ಜಲಸಂಧಿಯನ್ನು ಪ್ರವೇಶಿಸುವುದಕ್ಕೆ ಸ್ವಲ್ಪ ಮುಂಚೆ ಅದರ ಉಭಯ ಪಾರ್ಶ್ವಗಳಲ್ಲಿಯೂ ಬೆಳ್ಳಗಿದ್ದ ಬಲುದೊಡ್ಡದಾಗಿದ್ದ ಎರಡು ಬಿಳಿಯ ಬಂಡೆಗಳು ನಾವಿಕರಿಗೆ ಗೋಚರವಾದುವು. ಅವುಗಳ ಮೇಲಿಂದ ಬೆಳ್ಳಗಿದ್ದ ಸಣ್ಣ ಕಲ್ಲುಹಲಗೆಗಳು ಶಬ್ದಮಾಡುತ್ತ ಆಗಾಗ ಉದುರುತ್ತಿದ್ದುವು. ಆ ಎರಡು ಬಂಡೆಗಳೂ ಒಂದೊಂದುಸಾರಿ ಸಮೀಪಿಸುತ್ತಲೂ, ಮತ್ತೆ ಕೆಲವು ಸಾರಿ ಒಂದರಿಂದ ಮತ್ತೊಂದು ದೂರವಾಗಿ ಹೋಗುತ್ತಲೂ ಇದ್ದಂತೆ ಕಾಣುತ್ತಿದ್ದುವು. ಫೀನಿಯುಸ್ಸನು ಹೇಳಿದ್ದ ತೇಲುವ ಬಂಡೆಗಳು ಅವೇ ಎಂದು ನಾವಿಕರಿಗೆ ಸಂಶಯವು ಉಂಟಾಯಿತು ; ಸ್ವಲ್ಪಹೊತ್ತಿನಲ್ಲೇ ಆ ಬಂಡೆಗಳ ನಡುವೆ ಒಂದು ಹದ್ದು ಹಾರಿಹೋಗಲು ಯತ್ನಿಸಿದಾಗ ಅದು ಅವುಗಳ ಮಧ್ಯೆ ಸಿಕ್ಕಿಸತ್ತುಹೋದುದು ಕಂಡುಬರಲು, ನಾವಿಕರೆಲ್ಲರೂ ಆ ಬಂಡೆಗಳನ್ನೇ

ಫೀನಿಯಸ್ಸನು "ಮೃತ್ಯುವಿನ ತಾಯಿ" ಎಂದು ಕರೆದದ್ದನೆಂಬುದಾಗಿ ನಿಶ್ಚಯಿಸಿಕೊಂಡರು.

೩೩. ಜೇಸನ್ನನು ತನ್ನ ಹಡಗಿನಿಂದ ಒಂದು ಪಾರಿವಾಳವನ್ನು ಬಿಡಲು, ಅದರ ಬಾಲದಗರಿ ಮಾತ್ರ ಕಲ್ಲುಬಂಡೆಗಳಿಗೆ ಸಿಕ್ಕಿ ಆ ಪಕ್ಷಿಯು ಪ್ರಾಣಸಹಿತವಾಗಿ ತಪ್ಪಿಸಿಕೊಂಡು ಹೊರಟುಹೋಯಿತು. ಇದರಿಂದ ತಮ್ಮ ಪ್ರಯಾಣವು ಸುಗಮವಾಗುವುದೆಂದು ಜೇಸನ್ನನು ಭಾವಿಸಿ ತನ್ನ ಸಂಗಡಿಗರಿಗೆ ಪ್ರೋತ್ಸಾಹಿಸಿದನು. ಅವರೆಲ್ಲರೂ ಬಹು ಎಚ್ಚರಿಕೆಯಿಂದ ಕಾದಿದ್ದು ಆ ಬಂಡೆಗಳು ಸ್ವಲ್ಪ ದೂರವಾಗಿ ಅಗಲಿದ್ದ ಸಮಯದಲ್ಲಿ ಬೇಗನೆ ತಮ್ಮ ಹಡಗನ್ನು ನಡೆಸಿಕೊಂಡು ಬಂದರು. ಇನ್ನುಸ್ವಲ್ಪ ತಡವಾಗಿ ಹಡಗು ಬಂದಿದ್ದರೆ ಅದರ ಕಡೆಯಲ್ಲಿ ಕುಳಿತಿದ್ದ ನಾವಿಕರು ಬಂಡೆಗಳ ನಡುವೆ ಸಿಕ್ಕಿಹೋಗುತ್ತಿದ್ದರು; ಹಡಗೂ ಕೆಟ್ಟುಹೋಗಿ ಒಡೆದೊಳಕ್ಕೆ ನೀರು ತುಂಬಿಕೊಳ್ಳುತ್ತಿದ್ದಿತು. ಪ್ರಬಲವಾದ ಈ ಗಂಡವು ತಪ್ಪಿದುದಕ್ಕಾಗಿ ನಾವಿಕರು ದೇವರನ್ನು ಮನಸ್ಸಿನಲ್ಲಿಯೇ ವಂದಿಸಿ ಮುಂದಕ್ಕೆ ಹೊರಟರು. ಸ್ವಲ್ಪದೂರದಲ್ಲಿ "ಯೂಕ್ಸೈನ್" ಎಂಬ ಸಮುದ್ರವು ಸಿಕ್ಕಿತು. ಇದಕ್ಕೆ ಈಗ ಕಪ್ಪುಕಡಲು ಎಂಬ ಹೆಸರು ಬಂದಿರುವುದು.

೩೪. ಕೆಲವು ದಿವಸ ಪ್ರಯಾಣಮಾಡಿದಮೇಲೆ ಒಂದು ರಾಜ್ಯಕ್ಕೆ ಬಂದರು. ಅಲ್ಲಿಯ ದೊರೆಯ ಹೆಸರು ಲೈಕಸ್ ಎಂದು. ಕಪ್ಪುಕಡಲಿನ ತೀರದಲ್ಲಿ ಬಹುಕಾಲದಿಂದಲೂ ವಾಸವಾಗಿದ್ದ ಕತ್ರನೆಯ ಕಾಡುಜನರು ಅತಿಥಿ ಅಭ್ಯಾಗತರ ವಿಷಯದಲ್ಲಿ ಬಹಳ ನಿಷ್ಠುರಿಗಳಾಗಿದ್ದರೂ, ಲೈಕಸ್ಸನು ಮಾತ್ರ, ತನ್ನರಾಜ್ಯಕ್ಕೆ ಬಂದ ಆರ್ಗೋ ನಾವಿಕರನ್ನು ಬಹಳ ಆದರದಿಂದ ಇದಿರುಗೊಂಡು ಉಪಚರಿಸಿದನು. ಆರ್ಗೋ ನಾವಿಕರೂ ದಣಿದಿದ್ದುದರಿಂದ, ಆ ರಾಜ್ಯದಲ್ಲಿ ಮೂರು ನಾಲ್ಕು ದಿನ ವಿಶ್ರಮಿಸಿಕೊಂಡರು. ಇಲ್ಲಿಗೆ ಬರುವಹೊತ್ತಿಗೇ ಕರ್ಣಧಾರನಾದ ಟಿಫಿಸ್ಸಿಗೆ ದೇಹಾಲಸ್ಯವಾಗಿದ್ದಿತು; ರೋಗವು ಪ್ರಬಲಿಸಿ ಇಲ್ಲಿ ಅವನು ಕಾಲವಶನಾದನು. ಖಗೋಳಶಾಸ್ತ್ರದ ವಿಷಯದಲ್ಲಿ ಅವನಿಗೆ ಬಹಳ ಪರಿಶ್ರಮವಿದ್ದಿತು; ಯಾವಯಾವ ಗ್ರಹ ನಕ್ಷತ್ರಗಳು ಎಷ್ಟುಎಷ್ಟು ಹೊತ್ತಿಗೆ ಯಾವಯಾವ ದಿಕ್ಕಿನಲ್ಲಿ ಇರು

ವುವು ಎಂಬುದನ್ನು ಅವನು ಚೆನ್ನಾಗಿ ತಿಳಿದುಕೊಂಡಿದ್ದನು. ಹಡಗು ನಡೆಸುವುದರಲ್ಲೂ ಅವನು ಬಹಳ ಗಟ್ಟಿಗನು. ಬಿರುಮಳೆ, ರಾತ್ರಿಯ ಕಾಲದಲ್ಲೂ ಪ್ರಯಾಣ ಮಾಡಬೇಕಾಗಿ ಬಂದರೆ ಆ ಸಮಯದಲ್ಲಿ ಮಾತ್ರ ಅವನ ಸಹಾಯವನ್ನು ಕೋರದೆ, ಮೊದಲಿಂದಲೂ ಅವನ ಸಹಾಯವು ತಮಗೆ ದೊರೆತೇ ಇರಬೇಕೆಂದು ಕರ್ಣಧಾರತ್ವಕ್ಕೆ ಜೇಸನ್ನನು ಟಿಫಿಸ್ಸನ್ನು ನೇಮಿಸಿದ್ದನು. ಅವನ ಸಹಾಯವು ಈಗ ತಪ್ಪಿದುದರಿಂದ ನಾವಿಕರಿಗೆ ಅತಿನಷ್ಟವಾದಂತಾಯಿತು. ಇದೇ ಸಮಯದಲ್ಲೇ, ನಾವಿಕರಲ್ಲಿ ಮತ್ತೊಬ್ಬನಾದ ಇಡ್ಮನ್ನನು ಒಂದು ಕಾಡುಹಂದಿಯ ಕೈಗೆ ಸಿಕ್ಕಿ ಹತನಾದನು. ಈತನಿಗೆ ಭವಿಷ್ಯಜ್ಞಾನವಿದ್ದಿತೆಂದು ಹಿಂದೆಯೇ ಹೇಳಿರುವುದು. ಆದರೆ ಈ ನಿರ್ಭಾಗ್ಯನು ತನಗೆ ಸನ್ನಿಹಿತವಾಗಿದ್ದ ಮೃತ್ಯುವಿಗೆ ಗಮನಕೊಡದೆ, ಅಲ್ಪವಯಸ್ಸಿನಲ್ಲಿಯೇ ಮೃತ್ಯುವಿನ ಬಾಯಿಗೆ ತುತ್ತಾದನು. ಹೀಗೆ ಕಾಲವಾದ ಸಂಗಡಿಗರಿಬ್ಬರ ಉತ್ತರಕ್ರಿಯೆಗಳನ್ನು ಮುಗಿಸಿಕೊಂಡ ಬಳಿಕ ಆರ್ಗೋನಾವಿಕರು ಮುಂದಕ್ಕೆ ಪಯಣ ಹೊರಟರು.

೩೪. ಸ್ವಲ್ಪಕಾಲ ಪ್ರಯಾಣಮಾಡಿದ ಕೂಡಲೆ ಸಮುದ್ರತೀರದಲ್ಲಿದ್ದ ಒಂದು ಮಣ್ಣಿನ ದಿಬ್ಬದಮೇಲೆ ಒಬ್ಬ ಯೋಧನು ತಟ್ಟನೆ ಕಾಣಿಸಿಕೊಂಡನು. ಅವನ ತಲೆಯಮೇಲೆ ಕಬ್ಬಿಣದ ಕುಲಾಯಿಯೂ, ಮೈಮೇಲೆ ಒಂದು ಕವಚವೂ ಇದ್ದುವು; ಆದರೆ ಅವು ಮಣ್ಣು ತಿಂದುಹೋಗಿದ್ದುವು. ಅವನ ಒಂದು ಕೈಯಲ್ಲಿ ಕತ್ತಿಯೂ, ಮತ್ತೊಂದರಮೇಲೆ ಗುರಾಣಿಯೂ ಇದ್ದುವು; ಆದರೆ ಕತ್ತಿಗೆ ತುಕ್ಕು ಹಿಡಿದುಹೋಗಿ ಅರ್ಧಭಾಗಕ್ಕೆ ಸರಿಯಾಗಿ ಮುರಿದುಹೋಗಿದ್ದಿತು; ಗುರಾಣಿಯೂ ಬಹುಕಾಲದಿಂದ ಉಪಯೋಗಿಸದೆ, ನೆಲದಲ್ಲಿ ಹೂತಿದ್ದರೆ ಹೇಗೆ ಕಾಣಿಸುವುದೋ ಹಾಗೆ ಕಾಣುತ್ತಿದ್ದಿತು. ಆ ಯೋಧನು ಮೂರಾವೃತ್ತಿ ಗಟ್ಟಿಯಾಗಿ ಕೂಗಿ ಮೂರಾವೃತ್ತಿ ತನ್ನ ಮೊಟಕುಕತ್ತಿಯನ್ನು ಅಲ್ಲಾಡಿಸಿ ತಟ್ಟನೆ ಮಾಯವಾದನು. ಸ್ವಲ್ಪ ಹೊತ್ತಾದ ಬಳಿಕ, ಸಾದೆ ಸೊಪ್ಪುಗಳನ್ನು ಕೂಡಿಸಲು ಬಂದಿದ್ದ ಕೆಲವರು ನಿವಾಸಿಗಳಿಂದ ಆ ಯೋಧನ ವೃತ್ತಾಂತವು ತಿಳಿಯಿತು. ಆರ್ಗೋನಾವಿಕರಿಗೆ ಕಾಣಿಸಿಕೊಂಡ ಆಕೃತಿಯು ಮನುಷ್ಯನಲ್ಲವೆಂದೂ, ಅದು ಸ್ಥೆನೆಲಸ್

ಎಂಬೊಬ್ಬ ಗ್ರೀಕ್ ಯೋಧನ ಲಿಂಗದೇಹ (ಪಿಶಾಚರೂಪ) ವೆಂದೂ, ಅವನಿಗೆ
ಒಂದು ಬಾಣವು ತಗುಲಿ ಅವನು ಕಾಲವಾಗಿದ್ದನೆಂದೂ, ಗ್ರೀಸಿನಿಂದ ಬಂದ
ತನ್ನ ದೇಶದವರನ್ನು ನೋಡಿದಾಗಲೆಲ್ಲಾ ಆ ಪಿಶಾಚವು ಕಾಣಿಸಿಕೊಂಡು
ಆ ರೀತಿಯಲ್ಲೇ ವರ್ತಿಸುತ್ತಿದ್ದಿತೆಂದೂ ಅವರು ಹೇಳಿದರು. ಜೇಸನ್ ಮೊದ
ಲಾದವರು, ಆ ಪಿಶಾಚವು ಕಾಣಿಸಿಕೊಂಡಿದ್ದ ಪ್ರದೇಶದಲ್ಲಿ ತಂಗಿ, ಅದರ
ತೃಪ್ತ್ಯರ್ಥವಾಗಿ ಕೆಲವು ಕ್ರಿಯೆಗಳನ್ನು ನಡೆಯಿಸಿದರು. ಆರ್ಫಿಯುಸ್ಸನು ಒಂ
ದು ವೀಣೆಯನ್ನು ಸಮೀಪದಲ್ಲಿದ್ದ ಒಂದು ಗಿಡಕ್ಕೆ ನೇತುಹಾಕಿದನು. ಗಾಳಿ
ಬೀಸಿದಾಗಲೆಲ್ಲ ಅದರ ತಂತಿಗಳಿಂದ ಧ್ವನಿಯು ಹೊರಡುತ್ತಿದ್ದಿತು. ಅಲ್ಲಿ
ಸ್ವಲ್ಪಹೊತ್ತು ವಿಶ್ರಮಿಸಿಕೊಂಡ ಬಳಿಕ ಆರ್ಗೋನಾವಿಕರು ಮುಂದೆ
ಹೊರಟರು.

೨೬. ಒಂದೆರಡು ದಿನಗಳು ಪ್ರಯಾಣಮಾಡಿದನಂತರ ಆ ನಾವಿಕರು
ಒಂದು ರಾಜ್ಯಕ್ಕೆ ಬಂದರು. ವಿಚಾರಿಸಲಾಗಿ ಅದು ಸ್ತ್ರೀ ರಾಜ್ಯವೆಂದು ಪ್ರಸಿ
ದ್ಧವಾಗಿದ್ದ ಕಪ್ಪಡೋಸಿಯಾ ಪ್ರಾಂತವೆಂದು ತಿಳಿಯಿತು. ಇಲ್ಲಿಯ ಸ್ತ್ರೀ
ಯರು ಪುರುಷೋಚಿತವಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತಾ ಸ್ತ್ರೀಯ
ರಿಗೆ ರೂಢಿಯಾಗಿದ್ದ ಕೆಲಸಕಾರ್ಯಗಳನ್ನು ಅಲಕ್ಷ್ಯಮಾಡಿಬಿಟ್ಟಿದ್ದರು;
ತಮ್ಮ ರಾಜ್ಯದಲ್ಲಿ ಪುರುಷರಿಗೆ ಪ್ರಾಶಸ್ತ್ಯವೇ ಇಲ್ಲದಂತೆ ಮಾಡಿಕೊಂಡಿ
ದ್ದರು. ಯುದ್ಧವೆಂದರೆ ಈ ವೀರಸ್ತ್ರೀಯರಿಗೆ ಬಲುಪ್ರೀತಿ. ಇವರಿಗೆ
ಗಂಡುಮಕ್ಕಳಾದರೆ ಅವರನ್ನು ಅನ್ಯದೇಶಗಳ ಜನರಿಗೆ ಕೊಟ್ಟುಬಿಡುತ್ತಿದ್ದ
ರೆಂದು ಹೇಳುವರು ; ಇವರು ಪ್ರಾಯಶಃ ತಮ್ಮ ಗಂಡುಮಕ್ಕಳನ್ನು ನಿರ್ಜ
ನಪ್ರದೇಶದಲ್ಲಿ ತ್ಯಜಿಸಿಬಿಡುತ್ತಿದ್ದರೆಂದೂ ಮತ್ತೆ ಕೆಲವರು ಹೇಳುವರು!
ಆರ್ಗೋನಾವಿಕರಲ್ಲಿ ಅನೇಕರಿಗೆ ಈ ವೀರಸ್ತ್ರೀಯರನ್ನು ನೋಡಬೇ
ಕೆಂದೂ ಇವರೊಡನೆ ಯುದ್ಧಮಾಡಬೇಕೆಂದೂ ಬಹಳ ಕುತೂಹಲವಿದ್ದಿತು;
ಆದರೆ ಹಡಗಿನಲ್ಲಿದ್ದ ಬೊಂಬೆಯು "ಹರ್ಕ್ಯುಲಿಸನೂ, ಥೀಸಿಯುಸ್ಸನೂ
ಮುಂದೆ ಈ ಸ್ತ್ರೀಯರೊಡನೆ ಯುದ್ಧಮಾಡಬೇಕಾಗುವುದು. ಈಗ
ನಿಮ್ಮಲ್ಲಿ ಯಾರೂ ಇವರ ಗೊಡವೆಗೆ ಹೋಗುತಕ್ಕುದಿಲ್ಲ" ಎಂದು ಹೇಳಿ
ದುದರಿಂದ ಹಡಗು ಮುಂದುಮುಂದಕ್ಕೆ ಪ್ರಯಾಣಮಾಡಿಕೊಂಡು ಹೋ
ಯಿತು

೩೩. ಸ್ವಲ್ಪದೂರ ಹೋಗುವುದರೊಳಗಾಗಿ ಅಭೂತಪೂರ್ವವಾದ ಒಂದು ಮೊರೆತವು ಕೇಳಿಸಿತು; ಅದು ಸಮೀಪಿಸಿದಂತೆಲ್ಲಾ ಅನೇಕ ಕತ್ತಿಯ ಅಲಗುಗಳು ಒಂದಕ್ಕೊಂದಕ್ಕೆ ಸೋಕುವುದರಿಂದ ಉಂಟಾಗುವ ಶಬ್ದದಂತೆ ಕೇಳಲಾರಂಭವಾಯಿತು. ಹಡಗು ಹೋಗುತ್ತಿದ್ದ ದಿಕ್ಕಿನಲ್ಲಿ ಮೋಡದಂತೆ ಕಂಡುಬಂದು ಸ್ವಲ್ಪಹೊತ್ತಿನಲ್ಲೇ ಅದು ಹಡಗಿನಬಳಿಗೇ ಚಲಿಸಲಾರಂಭಿಸಿತು. ಆಗ ಹುಟ್ಟುಬಗೆಯುತ್ತಿದ್ದ ಒಬ್ಬ ನಾವಿಕನ ಕೈಗೆ ಒಂದು ಬಾಣವು ನಟ್ಟು ಅವನು ತನ್ನ ಕೆಲಸವನ್ನು ನಿಲ್ಲಿಸಿಬಿಡುವಂತಾಯಿತು. ಇಷ್ಟುಹೊತ್ತಿಗೆ ಸರಿಯಾಗಿ ಮೋಡದಂತೆ ಕಾಣುತ್ತಿದ್ದುದು ನಾವಿಕರ ತಲೆಯ ಮೇಲ್ಗಡೆಯಲ್ಲಿ ಪಕ್ಷಿಗಳ ತಂಡವೆಂದು ಕಂಡುಬಂದಿತು. ಈ ಸಮಯದಲ್ಲಿ ಆ ಪಕ್ಷಿಗಳಿಂದ ತಂಡತಂಡವಾಗಿ ಕಂಚಿನ ಗರಿಗಳು ಉದಿರಲಾರಂಭವಾಗಿ, ಅನೇಕ ನಾವಿಕರಿಗೆ ಗಾಯಗಳಾದುವು. ಇದರಿಂದ ಅವರಲ್ಲಿ ಕಾತರವು ಹೆಚ್ಚಿ ಆ ಹಡಗಿಗೆ ಅಪಾಯವು ಸಂಭವಿಸುವುದರಲ್ಲಿದ್ದಿತು. ಆಗ ಜೇಸನ್ನನು ಹಡಗಿನ ಬೊಂಬೆಯನ್ನು ಪ್ರಶ್ನಿಸಲು, ನಾವಿಕರಲ್ಲಿ ಅರೆವಾಸಿಯಷ್ಟುಮಂದಿ ಹಡಗನ್ನು ನಡೆಯಿಸುವ ಕಾರ್ಯವನ್ನು ಮಾಡಬೇಕೆಂದೂ, ಮತ್ತೆ ಅರೆವಾಸಿ ಜನರು ತಮ್ಮತಮ್ಮ ಗುರಾಣಿಗಳನ್ನು ಬಾಣಗಳಿಂದ ಬಡಿದು ಹೆದರಿಸಬೇಕೆಂದೂ ಅದು ತಿಳಿಸಿತು. ನಾವಿಕರು ಅದೇಮೇರೆಗೆ ಮಾಡಲು, ಕಂಚಿನಗರಿಯ ಪಕ್ಷಿಗಳು ಗುರಾಣಿಗಳ ಆ ಧ್ವನಿಯನ್ನು ಕೇಳಿ ಭಯಭ್ರಾಂತವಾಗಿ ಹಾರಿಹೋದುವು. ಆ ನಾವಿಕರಲ್ಲಿ ಒಬ್ಬನು ಆ ಪಕ್ಷಿಗಳ ವಿಚಾರವಾಗಿ ತನ್ನ ಸಂಗಡಿಗರಿಗೆ ಹೀಗೆ ತಿಳಿಸಿದನು :—“ ಥೆಸ್ಸಲಿಗೆ ಆಗ್ನೇಯದಿಕ್ಕಿನಲ್ಲಿ ಆರ್ಕೇಡಿಯ ಎಂಬ ರಾಜ್ಯವಿರುವುದಷ್ಟೆ! ಈ ಹಕ್ಕಿಗಳು ಆರ್ಕೇಡಿಯದ ಒಂದು ಸರೋವರದತೀರದಲಿ ವಾಸವಾಗಿರುವುವು. ಇವುಗಳು ಸಮುದ್ರದಲ್ಲಿ ಪ್ರಯಾಣಮಾಡುವ ನಾವಿಕರಿಗೆ ಬಹಳ ತೊಂದರೆ ಕೊಡುತ್ತಿರುವುವು ” ಎಂದು ಹೇಳಿದನು. ಈ ಹಕ್ಕಿಗಳನ್ನು ಮುಂಗೆ ಹೆರ್ಕ್ಯುಲಿಸನು ನಿರ್ಮೂಲಮಾಡಿ ನಾವಿಕರ ಕಷ್ಟವನ್ನು ತಪ್ಪಿಸಿದನು.

೩೪. ಮತ್ತೆ ಕೆಲವುದಿನ ಪ್ರಯಾಣಮಾಡಿದಬಳಿಕ ನಾವಿಕರಿಗೆ ಕಪ್ಪನೆಯ ಹೊಗೆಯು ದಟ್ಟವಾಗಿ ಏಳುತ್ತಿದ್ದ ಒಂದು ಪ್ರದೇಶವು ಗೋಚರವಾಯಿತು. ಆ ಸ್ಥಳದಲ್ಲಿ ಸಾವಿರಾರು ಕೊಡತಿಗಳನ್ನು ಅಡಿಗಲ್ಲುಗಳ

ಮೇಲೆ ಹೊಡೆಯುತ್ತಿದ್ದ ಶಬ್ದವು ಕೇಳಿಸಿತು. ಹಡಗಿನಲ್ಲಿದ್ದವರಲ್ಲೊಬ್ಬನು—"ಇಲ್ಲಿಯೇ ಕಬ್ಬಿಣದ ಗಣಿಗಳು ಬಹಳವಾಗಿರುವುವು. ಹೆಫೆಸ್ಟಸ್ಸಿನ ಭಕ್ತರು ಇಲ್ಲಿ ಕಬ್ಬಿಣದಿಂದ ಅನೇಕವಿಧವಾದ ಆಯುಧಗಳನ್ನು ರಾತ್ರಿಯೂ ಹಗಲೂ ಸಿದ್ಧಪಡಿಸುತ್ತಲಿರುವರು. ಈ ಪ್ರದೇಶಕ್ಕೆ ಪೂರ್ವದಲ್ಲಿ ಸ್ವಲ್ಪ ದೂರದಲ್ಲಿಯೇ ಕಾಲ್ಚಿಸ್ ಇರುವುದು ಎಂದು ನಮ್ಮ ತಂದೆಯವರು ಹಿಂದೆ ಒಂದುಸಾರಿ ತಿಳಿಸಿದ್ದರು" ಎಂಬುದಾಗಿ ಹೇಳಿದನು. ಕಾಲ್ಚಿಸ್‌ರಾಜ್ಯವು ಸಮೀಪವಾಯಿತೆಂದು ಕೇಳಿದಕೂಡಲೆ ನಾವಿಕರೆಲ್ಲರಿಗೂ ಪರಮಾನಂದವಾಯಿತು ; ಏಕೆಂದರೆ ಕನಕೋರ್ಣವು ಇದ್ದುದು ಈ ನಾಡಿನಲ್ಲಿಯೇ.

ಹದಿಮೂರನೆಯ ಪ್ರಕರಣ.

ಕನಕೋರ್ಣದನಾಡೂ ; ನಾವಿಕರ ಎರಡನೆಯ ಸಂಮೋಹನವೂ.

ನಾವಿಕರು ಬಹಳ ಸಂತೋಷದಿಂದ ತಮ್ಮ ದೊಡ್ಡ ದೋಣಿಯನ್ನು ನಡೆಯಿಸಿಕೊಂಡುಹೋದರು. ಆ ದಿನದ ಸಂಜೆಯ ಹೊತ್ತಿಗೆ ಒಂದು ದ್ವೀಪವು ಅವರಿಗೆ ಗೋಚರವಾಯಿತು. ಸಮುದ್ರತೀರದಲ್ಲಿ ಇಬ್ಬರು ತರುಣರು ನಿಂತಿದ್ದರು. ನೋಡಲು ಅವರು ಲಕ್ಷಣವಾಗಿದ್ದರೂ, ವಸ್ತ್ರವಿಹೀನರಾಗಿದ್ದರು. ನಾವಿಕರು ಅವರಿಗೆ ವಸ್ತ್ರಗಳನ್ನು ಕೊಟ್ಟು ಅವರನ್ನು ಕುರಿತು—"ನೀವು ಯಾರು ? ಇದೇಕೆ ಹೀಗಿರುವಿರಿ ?" ಎಂದು ಕೇಳಿದರು. ಅದಕ್ಕೆ ಅವರು—"ನಾವುಗಳು ಫ್ರಿಕ್ಸಸ್ಸಿನ ಮಕ್ಕಳುಗಳು. ನಮ್ಮ ತಾಯಿಯ ತಂದೆಯಾದ ಎಯಿಟೀಸನು ಕನಕೋರ್ಣದ ಮೇಲಿನ ದುರಾಸೆಯಿಂದ ನಮ್ಮ ತಂದೆಯನ್ನು ಕೊಲ್ಲಿಸಿ, ನಮ್ಮ ತಂದೆಯ ತಂದೆಯಾದ ಅಥಾಮಸ್ಸಿನಬಳಿಗೆ ನಮ್ಮನ್ನು ಕಳುಹಿಸಿಕೊಡುವ ನೆವದಿಂದ ನಿರ್ಜನವಾದ ಈ ದ್ವೀಪದಲ್ಲಿ ನಮ್ಮನ್ನು ಬಿಟ್ಟುಬಿಟ್ಟನು. ಕನಕೋರ್ಣಕ್ಕೆ ಮತ್ತೆ ಯಾರೂ ಬಾಧ್ಯಸ್ಥರಿರಬಾರದೆಂಬುದೇ ಅವನು ಹೀಗೆ ನಿಷ್ಕರುಣ

ದಿಂದ ಸಹೆದುಕೊಂಡುದಕ್ಕೆ ಕಾರಣ ಅನೇಕವರುಷಗಳಿಂದ ಈ ದ್ವೀಪಕ್ಕೆ ಯಾವುದಾದರೂ ಹಡಗು ಬಂದೀತೇ ಎಂದು ಇದಿರುನೋಡುತ್ತಿರುವೆವು. ನೀವು ಗ್ರೀಕರಂತೆ ತೋರುವಿರಿ ನಮ್ಮನ್ನು ಗ್ರೀಸಿಗೆ ಕರೆದುಕೊಂಡು ಹೋಗಿ ಬಿಟ್ಟರೆ ಬಹಳ ಉಪಕಾರವಾಗುವುದು " ಎಂದು ಉತ್ತರಕೊಟ್ಟರು. ನಾವಿಕರು ತಮ್ಮ ಪ್ರಯಾಣದ ಉದ್ದೇಶವನ್ನು ಅವರಿಗೆ ತಿಳಿಸಿ ತಾವು ಹಿಂದಿರುಗುವಾಗ ತಮ್ಮೊಡನೆ ಅವರೂ ಬರಬಹುದೆಂದು ಹೇಳಿದರು. ಫ್ರಿಕ್ಸಸಿನ ಮಕ್ಕಳೂ ಕಾಲ್ಚಿಸ್ಸಿಗೆ ದಾರಿಯನ್ನು ತೋರಿಸುತ್ತಾ ನಾವಿಕರೊಡನೆಯೇ ಹೊರಟರು.

೮೦ ಮೂರನೆಯದಿನ ಮಧ್ಯಾಹ್ನಸಮಯದಲ್ಲಿ ಎತ್ತರವಾದ ಕೆಲವು ಪರ್ವತಶಿಖರಗಳು ಗೋಚರವಾದುವು ಅವುಗಳಲ್ಲಿ ಎರಡು ಬಹಳ ಎತ್ತರವಾಗಿದ್ದುವು. ಇವುಗಳ ನಡುವೆ ಕಪ್ಪನೆಯ ಮೇಘದಂತಿದ್ದ ಒಂದು ವಸ್ತುವು ದೊಪ್ಪನೆ ಕೆಳಕ್ಕೆ ಹಾರಿಬಂದಿತು. ವತ್ತೆ ಒಂದೆರಡು ಕ್ಷಣಗಳಾದಮೇಲೆ ಭಯಂಕರವಾದ ವೇದನಾಧ್ವನಿಯು ಕೇಳಿಸಿತು. ಅದನ್ನು ಕೇಳಿದ ಕೂಡಲೆ ನಾವಿಕರಲ್ಲಿ ಅನೇಕರಿಗೆ ಹೆದರಿಕೆಯೂ, ಎಲ್ಲರಿಗೂ ಕುತೂಹಲವೂ ಉಂಟಾದುವು ಅವರು ಫ್ರಿಕ್ಸಸ್ಸಿನ ಮಕ್ಕಳನ್ನು ಕುರಿತು—" ಈ ಧ್ವನಿಯ ವಿಚಾರವಾಗಿ ನಿಮಗೇನಾದರೂ ತಿಳಿದಿರುವುದೇ ? " ಎಂದು ಪ್ರಶ್ನಿಸಿದರು. ಅವರು ಹೀಗೆ ಉತ್ತರ ಹೇಳಿದರು :—" ಈ ಧ್ವನಿಯು ಲೋಕೋಪಕಾರಿಯಾದ ಪ್ರೊಮೀಥಿಯುಸ್ಸಿನದು. ದೇವತೆಗಳಿಗೆ ಮಾತ್ರ ತಿಳಿದಿದ್ದ ಬೆಂಕಿಯ ಉಪಯೋಗವನ್ನು ಮನುಷ್ಯರಲ್ಲಿಯೂ ಅವನು ಪ್ರಚಾರಕ್ಕೆ ತಂದುದರಿಂದ, ದೇವತೆಗಳಿಗೆ ರೋಷವುಂಟಾಗಿ ಅವನನ್ನು ಆ ಪರ್ವತಗಳ ನಡುವೆ ಇರುವ ಒಂದು ಗಂಡಶಿಲೆಗೆ ಸರಪಣಿಯಿಂದ ಬಿಗಿದುಕಟ್ಟಿ, ಪ್ರತಿದಿನವೂ ಅದ್ಭುತಾಕಾರಿಯಾದ ಒಂದು ಹದ್ದು ಅವನ ಯಕೃತ್ತನ್ನು ಒಂದುಸಾರಿ ಕಿತ್ತುತಿನ್ನುವಂತೆ ಶಿಕ್ಷೆಯನ್ನು ವಿಧಿಸಿರುವರು. ಆ ಹದ್ದು ಕಿತ್ತುತಿನ್ನುವಾಗ ಪ್ರತಿದಿನವೂ ಒಂದುಸಾರಿ ಹೀಗೆ ಪ್ರೊಮೀಥಿಯುಸ್ಸನು ನರಳುತ್ತಾ ಅರಚುವನು. ಈ ಧ್ವನಿಯು ಸುತ್ತಲೂ ಅನೇಕ ಗಾವುದಗಳ ವರೆಗೂ ಕೇಳಿಸುವುದು " ಈ ವೃತ್ತಾಂತವನ್ನು ಕೇಳಿ ಅನೇಕ ನಾವಿಕರು ಬಹಳ ವ್ಯಸನಪಟ್ಟರು.

ಅವರಿಗೆ—"ಇವನ ಕಷ್ಟವು ಹೆರ್ಕ್ಯುಲಿಸ್ಸನಿಂದ ಕೊನೆಗಾಣುವುದು" ಎಂದು ತಾನು ಕೇಳಿದ್ದ ವಿಷಯವನ್ನು ಜೇಸನ್ನನು ಹೇಳಿದನು.

೮೧ ಹೀಗೆ ಸಂಭಾಷಿಸುತ್ತಾ ಮುಂದುಮುಂದಕ್ಕೆ ಅವರು ಪಯಣ ಮಾಡಿಕೊಂಡು ಬರುತ್ತಿದ್ದಾಗ ಸಾಯಂಕಾಲದ ಹೊತ್ತಿನಲ್ಲಿ ಕೆಲವು ಸೌಧಗಳು ಪೂರ್ವದಿಕ್ಕಿನಲ್ಲಿ ಕಂಡುಬಂದುವು ಇನ್ನು ಸ್ವಲ್ಪದೂರ ಬರಲು, ಆ ಸೌಧಗಳಲ್ಲಿ ಬೆಳಗುತ್ತಿದ್ದ ದೀಪಗಳು ಕಾಣಿಸಿದುವು. ಆ ಸೌಧಗಳು ಎಲ್ಲಿಯವೆಂದು ಕೇಳಿದ ಪ್ರಶ್ನೆಗೆ—ಅವೇ ಕಾಲ್ಚಿಸ್ಸಿನ ರಾಜಧಾನಿಯಾದ ಎಯೀದ್ವೀಪದುವೆಂದು ಉತ್ತರಬಂದಿತು. ಸಮುದ್ರತೀರದಲ್ಲಿ ಒಂದುಕಡೆ ಆ ಹಡಗನ್ನು ನಿಲ್ಲಿಸಿದ ಬಳಿಕ ಜೇಸನ್ನನೂ ಅವನ ಸಂಗಡಿಗರಲ್ಲಿ ಒಬ್ಬರಿಬ್ಬರೂ ಎಯೀಟೀಸನ ಅರಮನೆಯನ್ನು ಕುರಿತು ಹೊರಟರು. ಅವರು ಅರಮನೆಗೆ ಸೇರುವಷ್ಟರಲ್ಲಿ—ಗ್ರೀಸಿನಿಂದ ಸುಮಾರು ನಲವತ್ತು ಐವತ್ತುಮಂದಿ ತರುಣಯೋಧರನ್ನು ಕುಳ್ಳಿರಿಸಿಕೊಂಡು ಒಂದು ದೊಡ್ಡದೋಣಿಯು ಬಂದಿರುವುದೆಂದು ರಾಜಭೃತ್ಯರು ವೃತ್ತಾಂತವನ್ನು ಎಯೀಟೀಸಿಗೆ ತಿಳಿಸಿದ್ದರು. ಆದುದರಿಂದ ಆ ರಾಜನು ಜೇಸನ್ ಮೊದಲಾದವರನ್ನು ಇದಿರುಗೊಂಡು ಉಪಚರಿಸಿ ಭೋಜನಕ್ಕೆ ಎಬ್ಬಿಸಿದನು. ಊಟದ ಸಮಯದಲ್ಲಿ ರಾಜನು ಜೇಸನ್ನನ್ನು ಕುರಿತು—"ಗ್ರೀಕ್ ತರುಣರು ನಮ್ಮ ರಾಜ್ಯಕ್ಕೆ ಬಂದು ಅನೇಕ ವರುಷಗಳಾದುವು. ನೀವು ಮುಂದೆ ಎಲ್ಲಿಗೆ ಹೋಗಬೇಕಾಗಿರುವುದು ?" ಎಂದು ಕೇಳಿದನು. ಅಷ್ಟೊಂದು ಮಂದಿ ಗ್ರೀಕ್ ತರುಣರು ತನ್ನ ರಾಜ್ಯಕ್ಕೆ ಬಂದಿದ್ದುದು ಅವನ ಮನಸ್ಸಿನಲ್ಲಿ ಬಹಳ ಕಳವಳವನ್ನುಂಟುಮಾಡುತ್ತಿದ್ದಿತು ; ಅದಕ್ಕೆ ಸರಿಯಾಗಿ ಎಯೀಟೀಸಿಗೆ ಹಿಂದಿನ ರಾತ್ರಿಯಲ್ಲಿ ಒಂದು ದುಸ್ವಪ್ನವಾಗಿದ್ದಿತು ಆದುದರಿಂದಲೇ "ನೀವು ಮುಂದೆ ಎಲ್ಲಿಗೆ ಹೋಗಬೇಕಾಗಿರುವುದು ?" ಎಂದು ಅವನು ಕೇಳಿದ್ದುದು. ಜೇಸನ್ನನು ವಿನಯದಿಂದ—"ಮಹಾಸ್ವಾಮಿ ! ನಾವು ಐಯಾಲ್ಕಾಸ್ ರಾಜ್ಯದಿಂದ ಇಲ್ಲಿಗೇ ಬಂದಿರುವೆವು. ಈಗ ಅಲ್ಲಿ ರಾಜನಾಗಿರುವ ಪೀಲಿಯಾಸನು ಕನಕೋರ್ಣವನ್ನು ತಂದು ತನಗೆ ಒಪ್ಪಿಸಿದರೆ, ಆ ರಾಜ್ಯಕ್ಕೆ ನ್ಯಾಯವಾದ ಬಾಧ್ಯಸ್ಥನಾದ ನನಗೆ ಅದನ್ನು ಒಪ್ಪಿಸುವುದಾಗಿ ವಾಗ್ದಾನಮಾಡಿರುವನು. ತಮ್ಮ ಅನುಗ್ರಹದಿಂದ ಕನಕೋರ್ಣವನ್ನು ಸಂಪಾದಿಸಿಕೊಂಡು ಐಯಾಲ್ಕಾಸಿಗೇ ಹಿಂದಿರು

ಗುವೆವು'' ಎಂದು ಉತ್ತರಕೊಟ್ಟನು.

೮೦. ಇದನ್ನು ಕೇಳಿ ಎಯೀಟೇಸಿಗೆ ಬಹಳ ಕೋಪವುಂಟಾಯಿತು. ಆದರೆ ಅವನೂ ಪೀಲಿಯಾಸಿನಂತೆ ಕುತಂತ್ರಿಯಾಗಿದ್ದುದರಿಂದ ತನ್ನ ಕೋಪವನ್ನು ಮರೆಸಿಕೊಂಡು "ಓಹೋ! ಕನಕರೋಮವನ್ನು ತೆಗೆದುಕೊಂಡು ಹೋಗಲು ಬಂದಿರುವಿರೇನು? ಆದರೆ ನಿಮಗೆ ತಕ್ಕ ಶಕ್ತಿಸಾಹಸಗಳಿರುವಂತೆ ಕಾಣುವುದಿಲ್ಲವಲ್ಲಾ! ನಿಮ್ಮ ಆಕಾರಲಕ್ಷಣಗಳನ್ನು ನೋಡಿದರೆ, ಇಂತಹ ಅಪಾಯಕರವಾದ ಕಾರ್ಯದಲ್ಲಿ ನೀವು ಪ್ರವರ್ತಿಸಬೇಕೆಂದಿರುವಿರಲ್ಲಾ! ಎಂದು ನನಗೆ ಬಹಳ ದುಃಖವಾಗುತ್ತಿರುವುದು. ಕನಕರೋಮವನ್ನು ತೆಗೆದುಕೊಂಡು ಹೋಗಬೇಕೆಂದು ಯತ್ನಿಸಿ, ಅದ್ಭುತವಾದ ಶಕ್ತಿಯುಕ್ತಿಪರಾಕ್ರಮಗಳನ್ನು ಹೊಂದಿದ್ದ ನೂರಾರುಮಂದಿ ರಾಜಪುತ್ರರು ನನ್ನ ಎತ್ತುಗಳ ಉಸಿರಿನಿಂದ ಕರಿಕಾಗಿ ಹೋದರು. ಕನಕರೋಮವನ್ನು ಸಂಪಾದಿಸಬೇಕಾದರೆ, ದುಸ್ಸಾಧ್ಯವಾದ ಮೂರು ಕೆಲಸಗಳನ್ನು ಮಾಡಬೇಕಾಗಿರುವುದು ನನ್ನಲ್ಲಿರುವ ಅದ್ಭುತವಾದ ಆಯೆರಡು ಎತ್ತುಗಳನ್ನೂ ವಶಪಡಿಸಿಕೊಂಡು ಅವುಗಳಿಗೆ ನೊಗವನ್ನು ಕಟ್ಟಿ, ಬಹಳ ವಿಸ್ತಾರವಾಗಿರುವ ಅರೆಯುನೆಲವನ್ನು ಒಂದೇ ಸಲಕ್ಕೆ ಚೆನ್ನಾಗಿ ಉತ್ತು, ನಾನು ಕೊಡುವ ಅದ್ಭುತವಾದ ಬಿತ್ತಗಳನ್ನು ಬಿತ್ತಿ ಅವುಗಳಿಂದ ಹುಟ್ಟುವ ಫಲವನ್ನು ನೀನೊಬ್ಬನೇ ಅನುಭವಿಸಬೇಕು. ಈ ವರೆಗೂ ನೂರಾರುಮಂದಿ ಶೂರರು ಬಂದು ವ್ಯರ್ಥವಾಗಿ ಯತ್ನಿಸಿ ನನ್ನ ಆ ಗೂಳಿಗಳ ಉಸಿರಿಗೆ ಗುರಿಯಾಗಿ ಕರಿಕಾಗಿ ಹೋಗಿರುವರು ಅಥವಾ ಸುಟ್ಟು ಭಸ್ಮವಾಗಿ ಹೋಗಿರುವರು. ಎಲ್ಲೋ ಕೆಲವರು ಅವನ್ನು ವಶಪಡಿಸಿಕೊಂಡು ಬೀಜಗಳನ್ನು ಬಿತ್ತಿ, ನೆಲದಿಂದ ಹುಟ್ಟಿದ ಯೋಧರ ಆಯುಧಗಳಿಗೆ ಬಲಿಯಾಗಿ ಹೋಗಿರುವರು. ಚಿನ್ನದ ತುಪಟವನ್ನು ಕಾಯುತ್ತಿರುವ ಒಂದು ಅದ್ಭುತಪ್ರಾಣಿಯು ಬಳಿಗೆ ಈವರೆಗೂ ಒಬ್ಬರಾದರೂ ಹೋಗಲಿಲ್ಲ. ಆದುದರಿಂದ ಆ ಬಡಪ್ರಾಣಿಗೆ ಆಹಾರವು ದೊರೆಯದೆ ಹಸಿದಿರುವುದು. ಕರಿಕಾಗುವ ಪುಣ್ಯವೂ, ಛಿದ್ರವಾಗುವ ಭಾಗ್ಯವೂ ನಿನಗೆ ಇಲ್ಲದಿದ್ದರೆ, ನೀನೂ ನಿನ್ನ ಜೊತೆಗಾರರೂ ಅದಕ್ಕೆ ಸವಿಯಾದ ಒಂದೆರಡು ಗುಟುಕಾಗುವಿರಿ. ಪುಷ್ಟಿಯಾಗಿ ಬಳೆದಿರುವ ನೀವುಗಳು ಆ ಬಡಪ್ರಾಣಿಯುಮೇಲೆ ಇಷ್ಟು ಕರುಣವಿಟ್ಟು ಬಂದಿರುವಾಗ, ನಾನು ಸಂತೋಷಪಡದಿರುವುದು ಹೇಗೆ

ಸಾಧ್ಯ !..............." ಹೀಗೆ ರಾಜನು ಜೇಸನ್ನಿನೊಡನೆ ಮಾರ್ಮಿಕ ರೀತಿಯಿಂದ ಮಾತನಾಡುತ್ತಿದ್ದನು.

೧೩. ಈ ಸಮಯದಲ್ಲಿ ಅವನಬಳಿ ಇಬ್ಬರು ರಾಜಪುತ್ರಿಯರು ನಿಂತಿದ್ದರು. ಅವರಲ್ಲಿ ಒಬ್ಬಳು ಎಯೀಟೀಸಿನ ಹಿರಿಯಮಗಳೂ, ಫ್ರಿಕ್ಸಸ್ಸಿನ ಪತ್ನಿಯೂ ಆದ ಚಾಲ್ಸಿಯೋಪಿ. ಅವಳ ಮುಖದಮೇಲೆ ಶೋಕದ ಚಿಹ್ನೆಗಳೂ, ಅನುತಾಪದ ಲಕ್ಷಣಗಳೂ ಕಂಡುಬರುತ್ತಿದ್ದುವು; ಮತ್ತೊಬ್ಬಳು ಚಾಲ್ಸಿಯೋಪಿಗಿಂತಲೂ ಕಪ್ಪನೆಯವಳು; ವಯಸ್ಸು ಅಷ್ಟಾಗಿರಲಿಲ್ಲ. ಅವಳ ಮುಖದಮೇಲೆ ಒಂದುಬಗೆಯ ಅಪೂರ್ವತೇಜಸ್ಸು ಕಂಡುಬರುತ್ತಿದ್ದಿತು; ಅವಳ ಕಣ್ಣುಗಳಿಂದ ಅದ್ಭುತವಾದ ಕಾಂತಿಯು ಹೊರಡುತ್ತಿದ್ದಿತು. ಅವಳ ಮುಖಲಕ್ಷಣಗಳಿಂದ ಅವಳಿಗೆ ಅಪಾರವಾದ ತಿಳಿವಳಿಕೆಯಿದ್ದಿತೆಂದು ಕಾಣುತ್ತಿದ್ದಿತು. ಆಕೆಯ ಹೆಸರು ಮೀಡಿಯಾ. ಜೇಸನ್ನನು ರಾಜನೊಡನೆ ಮಾತನಾಡುತ್ತಿದ್ದಾಗ ಮೀಡಿಯಾ ಅವನ ಮುಖವನ್ನೇ ನೋಡುತ್ತ ನಿಂತಿದ್ದಳು. ರಾಜನ ಅಪ್ಪಣೆಯನ್ನು ಪಡೆದು ಅವನು ತನ್ನ ಸ್ನೇಹಿತರ ಬಳಿಗೆ ಹೋಗುತ್ತಿದ್ದಾಗ, ನಡುದಾರಿಯಲ್ಲಿ "ಜೇಸನ್! ಜೇಸನ್!" ಎಂದು ಕೂಗಿದ ಶಬ್ದವು ಕೇಳಬಂದು ಜೇಸನ್ನನು ತಿರುಗಿ ನೋಡಲು, ಮೀಡಿಯಾ ಹಿಂದೆ ಬರುತ್ತಿದ್ದಳು. ಅದನ್ನು ಕಂಡು ಜೇಸನ್ನನು ನಿಂತುಕೊಂಡನು. ಅವಳು ಅವನಿಗೆ ಸನ್ನೆಮಾಡಿ ಸ್ವಲ್ಪದೂರ ಕರೆದುಕೊಂಡು ಹೋಗಿ ಮುಂದೆ ಹೇಳುವ ರೀತಿಯಲ್ಲಿ ಸಂಭಾಷಿಸಿದಳು.

೧೪. "ಜೇಸನ್! ಈವರೆಗೂ ನೂರಾರುಮಂದಿ ತರುಣರು, ಕನಕೋರ್ಣಾರ್ಜನದ ಕಾರ್ಯದಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಂಡಿರುವರು. ಅವರಲ್ಲಿ ಒಬ್ಬರಿಬ್ಬರು ವಿನಾ ಉಳಿದವರೆಲ್ಲರೂ ಎತ್ತುಗಳ ಜ್ವಾಲಾಮಯವಾದ ಉಸಿರಿನಿಂದ ಸುಟ್ಟು ಕರಿಕಾಗಿ ಹೋದರು. ಕನಕೋರ್ಣದ ರಕ್ಷಣೆಗಾಗಿ ನಮ್ಮ ತಂದೆಯು, ತನ್ನ ತಂಗಿಯೂ ಪ್ರಸಿದ್ಧಮಾಟಗಾತಿಯೂ ಆದ ಸರ್ಸಿಯಿಂದ ಈ ಅದ್ಭುತವಾದ ಎತ್ತುಗಳನ್ನೂ, ರೆಕ್ಕೆಯಸರ್ಪದ ಹಲ್ಲುಗಳನ್ನೂ ಬಹುಕ್ರೂರವಾದ ಒಂದು ರೆಕ್ಕೆಯಸರ್ಪವನ್ನೂ ಸಂಪಾದಿಸಿರುವನು. ಕನಕೋರ್ಣವು ಅನ್ಯರ ಕೈಸೇರಿದ ಕೆಲವು ದಿನಗಳಲ್ಲೇ ರಾಜ್ಯನಾಶವೂ ಮರಣವೂ ಉಂಟಾಗುವುದೆಂದು ದೇವತೆಗಳ ಶಾಪವಿರುವುದರಿಂದ

ನಮ್ಮ ತಂದೆಯು ಇಷ್ಟೊಂದು ಪ್ರಬಲವಾದ ಸಾಧನಗಳನ್ನು ಸಂಪಾದಿಸಿ ಕೊಂಡಿರುವನು. ರೆಕ್ಕೆಯುಸರ್ಪದ ಹಲ್ಲುಗಳನ್ನು ಬಿತ್ತಿದಕೂಡಲೆ ಪ್ರತಿಯೊಂದು ಹಲ್ಲಿಗೂ ಒಬ್ಬೊಬ್ಬನಂತೆ ಕವಚಶೀರ್ಷಕಶಸ್ತ್ರಧಾರಿಯಾದ ಒಬ್ಬೊಬ್ಬ ಯೋಧನು ಹುಟ್ಟುವನು. ಬಿತ್ತಿದವನಮೇಲೆ ಅವರೆಲ್ಲರೂ ನುಗ್ಗಿಬಂದು ಅವನನ್ನು ಛಿದ್ರಛಿದ್ರವಾಗಿ ಕತ್ತರಿಸಿಹಾಕಿ ಬಿಡುವರು. ಇದುವರೆಗೂ ಒಬ್ಬರಿಬ್ಬರು ಮಾತ್ರ ಹಲ್ಲುಗಳನ್ನು ಬಿತ್ತುವವರೆಗೂ ಜಯಶಾಲಿಗಳಾಗಿ ಅದ್ಭುತವಾದ ಆ ಯೋಧರಶಕ್ತಿಗಳಿಗೆ ಬಲಿಯಾಗಿ ಹೋಗಿರುವರು. ನಿನ್ನನ್ನು ನೋಡಿದರೆ ಬಹಳ ಶೂರನಂತೆ ಕಾಣುವೆ. ಒಂದುವೇಳೆ ನೀನು ಆ ಯೋಧರುಗಳೆಲ್ಲರನ್ನೂ ಜಯಿಸಿದರೂ, ನೀನು ರೆಕ್ಕೆಯುಸರ್ಪದ ಬಾಯಿಗೆ ತುತ್ತಾಗುವುದರಲ್ಲಿ ನನಗೆ ಏನೇನೂ ಸಂಶಯವಿಲ್ಲ. ಆದುದರಿಂದ ನೀನು ದುಡುಕದೆ, ನಿನ್ನ ಸಂಗಡಿಗರೆಲ್ಲರೊಡನೆಯೂ ಚೆನ್ನಾಗಿ ಆಲೋಚಿಸಿ ನನಗೆ ಮಧ್ಯರಾತ್ರಿಯಲ್ಲಿ ನಿಮ್ಮ ನಿರ್ಣಯವನ್ನು ತಿಳಿಸು. ನಾನು ನಿಮ್ಮ ಹಡಗಿನ ಬಳಯಿರುವ ತೋಪಿಗೆ ಮಧ್ಯರಾತ್ರಿಯಲ್ಲಿ ಬರುವೆನು '' ಎಂದು ಹೇಳಿ ಮೀಡಿಯಾ ಹಿಂದಿರುಗಿದಳು.

೭೫. ಜೇಸನ್ನನೂ ಹಡಗಿನ ಬಳಿಗೆ ಹಿಂದಿರುಗಿ ತಾನು ಕಂಡು ಕೇಳಿದ್ದ ವೃತ್ತಾಂತವನ್ನೆಲ್ಲಾ ಆಮೂಲಾಗ್ರವಾಗಿ ತನ್ನ ಸಂಗಡಿಗರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಕೇಳಿದನು. ಅವರಲ್ಲಿ ಅನೇಕರಿಗೆ ಆ ವೃತ್ತಾಂತವನ್ನು ಕೇಳಿ ಜಯದ ವಿಷಯದಲ್ಲಿ ಸಂಶಯವುಂಟಾಯಿತು. ಆದರೂ ತಮ್ಮ ಸಂಶಯವನ್ನು ಬಹಿರಂಗಪಡಿಸಿದರೆ ಅವಮಾನವಾದೀತೆಂದು ಅವರಲ್ಲನೇಕರು ಮೌನವಾಗಿದ್ದರು. ಒಬ್ಬರಿಬ್ಬರು ಮಾತ್ರ ಕನಕೋರ್ಣವನ್ನು ಸಾಧಿಸುವುದೇ ಸರಿಯೆಂದು ಅಭಿಪ್ರಾಯಪಟ್ಟರು. ಜೇಸನ್ನಿಗಂತೂ ಏಯೀಟೀಸನೂ ಮೀಡಿಯಳೂ ಹೇಳಿದ್ದ ವರ್ಣನೆಗಳಿಂದ ಸ್ವಲ್ಪವಾದರೂ ಭಯವಾಗಿರಲಿಲ್ಲ. ಆದರೂ "ಮಾಯಾಬಲದ ಮುಂದೆ ಕಾಯಕಶಕ್ತಿಯು ಕೆಂದುವುದೆ?'' ಎಂದು ಸಂಶಯವು ಅವನ ಮನಸ್ಸಿನಲ್ಲಿಯೂ ಅನೇಕವೇಳೆ ಹೊಳೆದಿದ್ದಿತು. ಇಂತಹ ಸಮಯದಲ್ಲಿ ಅವನ ಸಂಗಡಿಗರನೇಕರು ತಮ್ಮ ಅಂತರ್ಯಾಭಿಪ್ರಾಯವನ್ನು ಸ್ವಲ್ಪಮಟ್ಟಿಗೆ ವ್ಯಕ್ತಪಡಿಸಿದ್ದರೂ ದಾಕ್ಷಿಣ್ಯಪರನಾದ ಜೇಸನ್ನಿನ ಮನಸ್ಸೂ ಸಹ ಹೇಗೆ ಮಾರ್ಪಡುತ್ತಿದ್ದಿತೋ ಹೇಳುವುದು ಪ್ರಯಾಸ

ವೆಂದು ತೋರುವುದು. ಏಕೆಂದರೆ ಸಂಶಯಗ್ರಸ್ತರಾದ ಹಲವರ ನಡುವೆ ದೃಢಜ್ಞಾನಿಗಳಾದ ಕೆಲವರೂ ಸಹ ಸಂಶಯಕ್ಕೊಳಗಾಗುವುದು ಸ್ವಾಭಾವಿಕವೇ.

ಹದಿನಾಲ್ಕನೆಯ ಪ್ರಕರಣ.

ಅದ್ಭುತವಾದ ಆರಂಭ.

ಕಡೆಗೆ ಜೇಸನ್ನನು ತನ್ನ ಸಂಗಡಿಗರಿಗೆ ಕನಕೋರ್ಣವನ್ನು ಸಾಧಿಸಿಕೊಂಡೇ ಬರುವುದು ಸರಿಯೆಂದು ಉತ್ಸಾಹಪೂರ್ವಕವಾಗಿ ತಿಳಿಸಿ ಮಧ್ಯರಾತ್ರಿಯಾಗುವುದನ್ನೇ ನಿರೀಕ್ಷಿಸುತ್ತಿದ್ದನು. ತಕ್ಕ ಸಮಯದಲ್ಲಿ ಅವನು ಹಿಂದೆಯೇ ನಿಯಾಮಕವಾಗಿದ್ದ ತೋಪಿನ ಬಳಿಗೆ ಒಂಟಿಯಾಗಿ ಹೋದನು. ಅದೇ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಮೀಡಿಯಳೂ ಬಂದು "ಜೇಸನ್! ಹೇಗೆ ನಿರ್ಧರಮಾಡಿರುವಿರಿ!" ಎಂದು ಕೇಳಿದಳು. ಅದಕ್ಕೆ ಜೇಸನ್ನನು "ರಾಜಪುತ್ರಿ! ನಾನು ಈ ಕಾರ್ಯವನ್ನು ಸಾಧಿಸಿಕೊಂಡು ಬರುವೆನೆಂದು ಗ್ರೀಸಿನಲ್ಲೆಲ್ಲಾ ಪ್ರಕಟಪಡಿಸಿ ಅನೇಕ ಶೂರರುಗಳನ್ನು ಕರೆದುಕೊಂಡು ಬಂದು ಹಾಗೆಯೇ ಹಿಂದಿರುಗುವುದಕ್ಕಿಂತ, ಹಿಂದೆ ಇಂತಹ ಪ್ರಯತ್ನದಲ್ಲಿ ನಾಶವಾದ ಅನೇಕರಂತೆ ನಾವೂ ನಾಶವಾಗುವುದೇ ಸರಿ. ಮಾನಕ್ಕಿಂತಲೂ ಪ್ರಾಣವೆಂದಿಗೂ ಹೆಚ್ಚಲ್ಲ. ಸಾಹಸವನ್ನು ಕೈಕೊಳ್ಳದಿದ್ದರೆ ಮಂಗಳಗಳುಂಟಾಗಲಾರವಲ್ಲವೆ? ಆದುದರಿಂದ ಯಾರೇ ಎಷ್ಟೇ ಹೇಳಿದರೂ ನಾವು ಈ ಕಾರ್ಯದಲ್ಲಿ ಹಿಂದೆಗೆಯಲಾರೆವು" ಎಂದು ನಿರ್ಧರದ್ಯೋತಕವಾದ ಧ್ವನಿಯಿಂದ ತಿಳಿಸಿದನು.

೮೩. ಈ ಮಾತುಗಳನ್ನು ಕೇಳಿ ಮೀಡಿಯಳು ಬಹಳ ಸಂತೋಷಪಟ್ಟಳು. ಜೇಸನ್ನನ್ನು ಪರೀಕ್ಷಿಸಬೇಕೆಂದೇ ಅವಳು ಅವನಿಗೆ ಹಿಂದೆ ತಿಳಿಸಿದ ರೀತಿಯಲ್ಲಿ ಹೇಳಿದ್ದಳು. ಈಗ ಆಕೆಯು ಜೇಸನ್ನನ್ನು ಕುರಿತು ಪುನಃ ಹೀಗೆ ಹೇಳಿದಳು :—"ಜೇಸನ್! ಮಾಯಾಬಲದ ಮೇಲೆ ಮಾನುಷಕವಾದ

ಕಾಯುಕಶಕ್ತಿಯು ಕುಂದುವುದೇ? ಎಂಬ ನಿನ್ನ ಸಂಶಯವು ಸಾಧುವಾದುದು. ಮಾಯಾಶಕ್ತಿಗೆ ಮಾಯಾಶಕ್ತಿಯಿಂದಲೇ ಪ್ರತೀಕಾರವಾಗಬೇಕು. ಸುಮ್ಮನೆ ದುಡುಕಿ ಪ್ರಾಣವನ್ನು ಕಳೆದುಕೊಳ್ಳಬೇಡ. ನನ್ನಮಾತನ್ನು ಕೇಳಿದರೆ ನಿನಗೆ ಕನಕಲೋಮವು ಸ್ವಾಧೀನವಾಗುವುದು. ನನ್ನ ಅದ್ಭುತಶಕ್ತಿಯ ವಿಷಯವಾಗಿ, ಹಡಗಿನಲ್ಲಿರುವ ನಮ್ಮ ಅಕ್ಕನಮಕ್ಕಳನ್ನು ವಿಚಾರಿಸಿದರೆ ನಿನಗೆ ನನ್ನ ವಿಷಯದಲ್ಲಿ ನಂಬಿಕೆಯುಂಟಾಗುವುದು. ನಿನಗೆ ನಂಬಿಕೆಯನ್ನುಂಟು ಮಾಡಲು ಮತ್ತೊಂದು ನಿದರ್ಶನವನ್ನೂ ಕೊಡುವೆನು; ತೆಗೆದುಕೊ. ಈ ಭರಣಿಯಲ್ಲಿರುವ ತೈಲವನ್ನು ಮೈಗೆಲ್ಲಾ ಲೇಪಿಸಿಕೊಂಡರೆ, ನಿನ್ನನ್ನು ಬೆಂಕಿಯಾಗಲಿ, ಯಾವ ಆಯುಧವೇ ಆಗಲಿ ಒಂದುದಿನದ ಮಟ್ಟಿಗೆ ಬಾಧಿಸಲಾರದು. ನನ್ನ ಸಹಾಯವು ನಿನಗೆ ಬೇಕಾಗಿದ್ದಲ್ಲಿ ನೀನು ಒಬ್ಬನೇ ಬೆಳಕು ಹರಿವುದಕ್ಕೆ ಮುಂಚೆ ಪುರದ ಹೊರಗಿರುವ ಹುಲ್ಲುಗಾವಲಿನ ಬಳಿಯಿರುವ ಬ್ರೈಮೋ ದೇವಸ್ಥಾನಕ್ಕೆ ಬಾ. ಹೊತ್ತು ಮೀರಿಬಂದರೆ, ಜನರು ಹುಲ್ಲುಗಾವಲಿನ ಬಳಿ ನಾಳೆಯ ವಿನೋದವನ್ನು ನೋಡಲು ಎಂದಿನಂತೆ ಕಿಕ್ಕಿರಿದು ತುಂಬಿಕೊಂಡುಬಿಟ್ಟಿರುವರು; ನೀನು ಏನು ಮಾಡಬೇಕಾಗಿರುವುದೋ ಅದನ್ನುತಿಳಿಸಲು ನನಗೆ ಅವಕಾಶವು ದೊರೆಯದೆ ಹೋದೀತು! ಎಚ್ಚರಿಕೆ!" ಎಂದು ಹೇಳಿ ಹೊರಟುಹೋದಳು.

೮೮. ಜೇಸನ್ನನು ಹಡಗಿಗೆ ಹಿಂದಿರುಗಿ ಮೀಡಿಯಳು ಹೇಳಿದ್ದ ಮಾತುಗಳೆಲ್ಲವನ್ನೂ ತನ್ನ ಸಂಗಡಿಗರೊಡನೆ ಹೇಳಿದನು. ಆದರೆ ಅವರಲ್ಲಿ ಕೆಲವರು ಮೀಡಿಯಳನ್ನು ನಂಬಕೂಡದೆಂದು ವಾದಿಸಿದರು. ಆಕೆಯ ನಂಬಿಕೆಗೆ ನಿದರ್ಶನವಾದ ತೈಲವು ಕೈಯಲ್ಲೇ ಇರುವಾಗ ವಾದದಿಂದ ಏನು ಪ್ರಯೋಜನವೆಂದು ಹೇಳಿ, ಜೇಸನ್ನನು ಆ ತೈಲವನ್ನು ಮೈಗೆ ಸವರಿಕೊಂಡನು. ಕೂಡಲೆ ಜೇಸನ್ನಿಗೆ ನೂರುಮಂದಿಯ ಶಕ್ತಿಯುಂಟಾದಂತೆ ತೋರಿತು. ಆಗ ಅವನು ತನ್ನಸಂಗಡಿಗರನ್ನು ಕುರಿತು ತಮ್ಮ ಬಲವನ್ನೆಲ್ಲಾ ಪ್ರಯೋಗಿಸಿ ತಮ್ಮತಮ್ಮ ಆಯುಧಗಳಿಂದ ತನ್ನನ್ನು ಹೊಡೆಯಬೇಕೆಂದು ಕೋರಿದನು. ಅವರು ಅದೇಮೇರೆಗೆ ಮಾಡಿದರೂ, ಜೇಸನ್ನಿಗೆ ಸ್ವಲ್ಪವಾದರೂ ಬಾಧೆಯಾಗಲಿಲ್ಲ; ಒಂದುಕಡೆಯಾದರೂ ಗಾಯವಾಗಲಿಲ್ಲ; ಅವನ ಸಂಗಡಿಗರಿಗೆಲ್ಲರಿಗೂ ದಣಿವು ಉಂಟಾದರೂ, ಜೇಸನ್ನಿಗೆ ಸ್ವಲ್ಪವೂ ಆಯಾ

ಸವಾಗಲಿಲ್ಲ. ಈ ಆಶ್ಚರ್ಯವನ್ನು ಕಂಡು, ಆಗೋರ್ ನಾವಿಕರೆಲ್ಲರಿಗೂ ಮೀಡಿಯಳ ಮಾತಿನಲ್ಲಿ ನಂಬಿಕೆಯುಂಟಾಯಿತು. ಅವರು "ನಿನಗೆ ವಿಜಯವಾಗಲಿ" ಎಂದು ಹರಸಿ ಜೇಸನ್ನನ್ನು ಕಳುಹಿಸಿಕೊಟ್ಟರು. ಜೇಸನ್ನನು, ಅವರೆಲ್ಲರೂ ಕ್ಷಣಮಾತ್ರದಲ್ಲಿ ಯುದ್ಧಮಾಡುವುದಕ್ಕೂ, ಪ್ರಯಾಣ ಹೊರಡುವುದಕ್ಕೂ ಸನ್ನದ್ಧರಾಗಿರಬೇಕೆಂದು ನಿಯಮಿಸಿ, ಬ್ರೈಮೋ ಎಂಬ ದೇವತೆಯ ಗುಡಿಯ ಬಳಿಗೆ ಹೊರಟನು.

೪೯. ಆಗ ಆಕಾಶದಲ್ಲಿ ಇನ್ನೂ ನಕ್ಷತ್ರಗಳು ಚೆನ್ನಾಗಿ ಬೆಳಗುತ್ತಲಿದ್ದುವು; ಗಾಳಿಯು ತಣ್ಣಗೆ ಬೀಸುತ್ತಿದ್ದಿತು; ಕೋಳಿಗಳು ಆಗತಾನೆ ಕೂಗಲು ಮೊದಲುಮಾಡಿದ್ದುವು; ಮರಗಳಮೇಲೆ ಅಲ್ಲೊಂದು ಇಲ್ಲೊಂದರಂತೆ ಕಾಗೆಗಳು ಕಣ್ಣುಬಿಟ್ಟು "ಕಾ" "ಕಾ" ಎಂದು ಅರಚುತ್ತಿದ್ದುವು; ಆದರೂ ಒಂದು ದಿಕ್ಕಿನಲ್ಲಿ ಮಾತ್ರ ಅನೇಕ ಜನರು ಮಾತನಾಡುತ್ತಿದ್ದ ಕೋಲಾಹಲವು ಕೇಳಬರುತ್ತಿದ್ದಿತು. ದೇವಸ್ಥಾನವಿದ್ದುದೂ ಅದೇ ದಿಕ್ಕಿನಲ್ಲೇ. ಜೇಸನ್ನನು ದೇವಸ್ಥಾನದ ಬಳಿಗೆ ಬಂದಾಗ ಅದರೊಳಗೆ ಭಯಂಕರವಾದ ಮೂರುತಲೆಯ ಒಂದು ವಿಗ್ರಹದ ಸನ್ನಿಧಿಯಲ್ಲಿದ್ದ ಒಂದು ವ್ಯಕ್ತಿಯನ್ನು ಕಂಡನು. ಆ ವ್ಯಕ್ತಿಯನ್ನು ಸ್ವಲ್ಪ ಹೊತ್ತು ನಿಂತುನೋಡಲು ಅದು ಮೀಡಿಯಳೇ ಎಂದು ತಿಳಿಯಿತು ಅವಳು ಜೇಸನ್ನನ್ನು ಸನ್ನೆಯಿಂದ ತನ್ನ ಬಳಿಗೆ ಕರೆದು "ಜೇಸನ್! ನಾನು ತೋರಿಸುತ್ತಿರುವ ಕಡೆ ನೋಡು. ನಾಲ್ಕುಜ್ವಾಲೆಗಳು ಸ್ವಲ್ಪಹೊತ್ತು ಕಾಣುತ್ತಿದ್ದು ಮಾಯವಾಗಿ ಪುನಃ ಕಾಣಿಸಿಕೊಳ್ಳುತ್ತಿರುವುವಲ್ಲಾ! ಅವು ಏನೆಂದು ತಿಳಿದಿರುವೆ? ಅವೇ, ನಮ್ಮ ಸೋದರತ್ತೆಯು ಹೆಫೆಸ್ಟಸ್ಸಿನ ವರದಿಂದ ಪಡೆದುಕೊಂಡು ನಮ್ಮ ತಂದೆಗೆ ಕೊಟ್ಟಿರುವ ಗೂಳಿಗಳು. ಅವುಗಳ ಗೊರಸುಗಳೂ ಕೊಂಬುಗಳೂ ಕಬ್ಬಿಣದುವು; ಶ್ವಾಸಕೋಶಗಳು ಕಂಚಿನವು; ಅವು ಉಸಿರುಬಿಡುವಾಗ ಜ್ವಾಲೆಗಳು ಕಾಣಿಸಿಕೊಳ್ಳುವುವು; ಉಸಿರುತೆಗೆದುಕೊಳ್ಳುವಾಗ ಜ್ವಾಲೆಗಳು ಅದೃಶ್ಯವಾಗುವುವು. ನೀನು ಹುಲ್ಲುಗಾವಲನ್ನು ಪ್ರವೇಶಿಸಿದ ಕೂಡಲೆ ಅವು ನಿನ್ನನ್ನು ತಿವಿಯುವುದಕ್ಕೆ ರಭಸದಿಂದ ಓಡುವುವು ಆಗ ನೀನು ಬೆದರದೆ ಅವುಗಳ ಕೊಂಬುಗಳನ್ನು ಹಿಡಿದುಕೊಂಡುಬಿಟ್ಟರೆ ಅವುಗಳ ಕ್ರೌರ್ಯವೆಲ್ಲಾ ಹೊರಟುಹೋಗುವುದು. ಈ ಗುಟ್ಟನ್ನು ತಿಳಿಯದೆ ಅನೇ

ತಮ್ಮ ತಮ್ಮ ಸ್ಥಾನಗಳಲ್ಲಿ ನಿಂತರು. ಮೀಡಿಯಾಳೂ ಅಲ್ಲಿಗೆ ಬಂದು ತನ್ನ ಸೋದರಿಯ ಪಕ್ಕದಲ್ಲಿ ನಿಂತುಕೊಂಡಳು. ಜೇಸನ್ನನು ದೊರೆಗೆ ವಂದಿಸಿ ಹೊಲವನ್ನು ಉಳಲು ರಾಜನ ಅನುಜ್ಞೆಯನ್ನು ಪಡೆದು ಆವರಣದೊಳಗೆ ಕಾಲಿಟ್ಟನು. ಇದನ್ನು ಕಂಡು ಆ ಗೂಳಿಗಳು ರಭಸದಿಂದ ಉಸಿರುಬಿಡುತ್ತಾ ಜೇಸನ್ನಿನ ಕಡೆಗೆ ನುಗ್ಗಿದುವು. ಹಿಂದೆ ಎಷ್ಟೋ ಬಾರಿ ಆಗಿದ್ದಂತೆಯೇ ಈಗಲೂ ಆ ನಿರ್ಭಾಗ್ಯಸಾಹಸಿಯು ಕ್ಷಣಮಾತ್ರದಲ್ಲಿ ಒಂದುಹಿಡಿ ಬೂದಿಯಾಗಿಯೋ, ಇದ್ದಿಲ ತುಂಡಾಗಿಯೋ ಆಗಿಹೋಗುವನೆಂದು ಜನರೆಲ್ಲರೂ ಭಾವಿಸಿಕೊಂಡು ಅತ್ಯಂತಕುತೂಹಲದಿಂದ ಅವನನ್ನೇ ನಿರೀಕ್ಷಿಸುತ್ತಿದ್ದರು. ಎತ್ತುಗಳು ಸಮೀಪಕ್ಕೆ ಬಂದಕೂಡಲೆ ಜೇಸನ್ನನು ಅವುಗಳ ಒಂದೊಂದು ಕೊಂಬನ್ನು ಗಟ್ಟಿಯಾಗಿ ಹಿಡಿದುಕೊಂಡುಬಿಟ್ಟನು. ಆ ಎತ್ತುಗಳ ಹಾರಾಟವೂ, ಗುಟ್ಟರೆಗಳೂ, ಜ್ವಾಲೆಗಳೂ ಸ್ವಲ್ಪಹೊತ್ತಿನಲ್ಲೇ ನಿಂತುಹೋಗಿ, ಅವು ಬಡಕಲು ಎತ್ತುಗಳಂತೆ ಜೇಸನ್ನಿನ ಆಜ್ಞೆಗೆ ಒಳಪಟ್ಟುವು. ಕೂಡಲೆ ಜೇಸನ್ನನು ಸಮೀಪದಲ್ಲಿದ್ದ ನೇಗಿಲನ್ನು ತೆಗೆದುಕೊಂಡು ಆ ದೊಡ್ಡ ಹೊಲವನ್ನು ಎರಡು ಮೂರು ಗಂಟೆಗಳೊಳಗಾಗಿ ಹಸನಾಗಿ ಉತ್ತು, ಬಿತ್ತಲು ಸಿದ್ಧಪಡಿಸಿದನು. ಇದನ್ನು ಕಂಡು ಎಯೀಟೀಸಿಗೆ ಆಶ್ಚರ್ಯಕೋಪಗಳುಂಟಾಗುತ್ತಿದ್ದುವು. ಜೇಸನ್ನನು ಬಿತ್ತನೆಯ ಕಾಳುಗಳನ್ನು ಕೇಳಿ ತೆಗೆದುಕೊಳ್ಳಲು ಬಂದಾಗ ರಾಜನ ಮನಸ್ಸಿನಲ್ಲಿ ಎಂತೆಂತಹ ಕೆಟ್ಟಯೋಚನೆಗಳುಂಟಾಗುತ್ತಿದ್ದುವೆಂಬುದನ್ನು ವಿವರಿಸಿತಿಳಿಸಲು ಆಗಲಾರದು. ಎಯೀಟೀಸನು ಒಂದು ಕುಕ್ಕೆಯಲ್ಲಿದ್ದ ಹಲ್ಲುಗಳನ್ನು ಜೇಸನ್ನಿನ ಕೈಗಳಲ್ಲಿ ರಭಸದಿಂದ ಕುಕ್ಕಿ—"ಇದರ ಬೆಳೆಯನ್ನೆಲ್ಲಾ ನೀನೇ ಚೆನ್ನಾಗಿ ಅನುಭವಿಸು" ಎಂದು ಒಂದು ಬಗೆಯ ವಿಕಾರಧ್ವನಿಯಿಂದ ಹೇಳಿದನು. ಅದರ ಅರ್ಥವನ್ನು ಹೊಸಬನಾದ ಜೇಸನ್ನನು ಅರಿಯನೆಂದು ರಾಜನು ಭಾವಿಸಿದ್ದನು.

೯೧. ಸ್ವಲ್ಪ ಹೊತ್ತಿನಲ್ಲಿಯೇ ಜೇಸನ್ನನು ಆ ಹಲ್ಲುಗಳನ್ನೆಲ್ಲಾ ಓರಣದಿಂದ ಬಿತ್ತಿಬಿಟ್ಟು ತನ್ನ ಆಯುಧಗಳನ್ನು ಸರಿಪಡಿಸಿಕೊಳ್ಳುತ್ತಾ ಮುಂದೆ ಏನಾಗುವುದೋ ಎಂದು ನಿರೀಕ್ಷಿಸುತ್ತಾ ಒಂದು ಅಂಚಿನಲ್ಲಿದ್ದ ಒಂದು ಕಲ್ಲಿನ ಹತ್ತಿರ ನಿಂತಿದ್ದನು. ಪ್ರತಿಯೊಂದು ಹಲ್ಲು ಬಿತ್ತಿದ್ದ ಸ್ಥಳದಿಂದಲೂ ಸ್ವಲ್ಪಹೊತ್ತಿನಲ್ಲೇ ಎರಡೆರಡು, ಮೂರುಮೂರು ಮೊನೆ

ಗಳು ಕಾಣಿಸಿಕೊಂಡುವು. ಅವುಗಳಲ್ಲಿ ಕೆಲವು ಕತ್ತಿಯ ಮೊನೆಗಳಂತೆ ಯೂ ಮತ್ತೆ ಕೆಲವು ಉಕ್ಕಿನ ಟೋಪಿಯ ಮೊನೆಗಳಂತೆಯೂ, ಮಿಕ್ಕವು ಈಟಿಯ ಅಲಗುಗಳಂತೆಯೂ ತೋರುತ್ತಿದ್ದುವು. ಇನ್ನು ಸ್ವಲ್ಪಹೊತ್ತಿ ನಲ್ಲಿ ತಲೆಗಳೂ, ಭುಜಗಳೂ, ಎದೆಗಳೂ, ತೊಡೆಗಳೂ, ಪಾದಗಳೂ ಕಾ ಣಿಸಿಕೊಂಡು ಪ್ರತಿಯೊಂದು ಹಲ್ಲೂ ಬಿದ್ದಿದ್ದ ಸ್ಥಳದಿಂದ ಒಬ್ಬೊಬ್ಬ ಯೋಧನು ಕಾಣಿಸಿಕೊಂಡು ಗಟ್ಟಿಯಾಗಿ ಆರ್ಭಟಿಸುತ್ತಾ ಜೇಸನ್ನಿನ ಮೇಲೆ ಅವರೆಲ್ಲರೂ ಏಕಕಾಲದಲ್ಲಿ ನುಗ್ಗಿದರು. ಅವರು ಇನ್ನೂ ಕೆಲವು ಮಾರುಗಳ ದೂರದಲ್ಲಿದ್ದಾಗಲೇ ಜೇಸನ್ನನು ತನ್ನ ಬಳಿ ಬಿದ್ದಿದ್ದ ದೊಡ್ಡ ಕಲ್ಲನ್ನು ಎತ್ತಿ ಆ ದುರಾತ್ಮರ ನಡುವೆ ಬೀಳುವಂತೆ ಗುರಿಕಟ್ಟಿ ಎಸೆ ದುಬಿಟ್ಟನು. ಆ ಕಲ್ಲು ಒಬ್ಬ ಯೋಧನಿಗೆ ತಗುಲಿತು. "ನನ್ನನ್ನು ಏಕೆ ಹೊಡೆದೆ ?" ಎನ್ನುತ್ತಾ ಆಯೋಧನು ತನ್ನ ಬಳಿಯಿದ್ದವನನ್ನು ತನ್ನ ಈಟಿಯಿಂದ ತಿವಿದನು. "ಅವನನ್ನೇಕೆ ತಿವಿಯುತ್ತೀಯೆ?" ಎಂದು ಮತ್ತೊ ಬ್ಬನು ಮೊದಲನೆಯವನನ್ನು ತನ್ನ ಕತ್ತಿಯಿಂದ ಕತ್ತರಿಸಿ ಕೆಡವಿದನು. ಅವ ನನ್ನು ಮಗುದೊಬ್ಬನು ಹೊಡೆದುಮಲಗಿಸಿದನು. ಕ್ಷಣಮಾತ್ರದಲ್ಲಿ ಆ ಹೊಲದಲ್ಲೆಲ್ಲಾ ಹೊಯ್ಲೋ ಹೊಯ್ಲು ಆಗಿ ಆ ಯೋಧರುಗಳಲ್ಲಿ ಒಬ್ಬನು ಹೊರತಾಗಿ ಎಲ್ಲರೂ ಸತ್ತುಬಿದ್ದರು. ಉಳಿದಿದ್ದ ಆ ಯೋ ಧನು ಹೊಲದ ಅಂಚಿನಲ್ಲಿದ್ದ ಜೇಸನ್ನನ್ನು ನೋಡಿ ಅವನ ಮೇಲೆ ರಭಸ ದಿಂದ ನುಗ್ಗಿಬಂದನು. ಅವನನ್ನು ಜೇಸನ್ನನು ಒಂದೇ ಏಟಿಗೆ ಹೊಡೆದು ಮಲಗಿಸಿಬಿಟ್ಟನು ಬಿರುಗಾಳಿಯಲ್ಲಿ ಚಟಪಟನೆ ಆಲಿಕಲ್ಲುಗಳ ಮಳೆ ಸುರಿದು ತಟ್ಟನೆ ನಿಂತುಹೋಗುವಂತೆ ಆ ಯೋಧರ ಕಡಿದಾಟವೂ ತೋರು ತ್ತಿದ್ದಿತು. ಹೊಲದಲ್ಲೆಲ್ಲಾ ರಕ್ತದ ಕೋಡಿಯು ಹರಿಯುತ್ತಿದ್ದಿತು. ಆಗ ಜೇಸನ್ನಿನ ಮನಸ್ಸಿಗೆ, ಅಲ್ಪಕಾರಣಗಳಿಗಾಗಿ ಯುದ್ಧಮಾಡಿ ಪ್ರಾಣ ಗಳನ್ನು ಕಳೆದುಕೊಳ್ಳುವ ಮೂರ್ಖರ ಜ್ಞಾಪಕವು ಬಂದಿತು. ಅವನು ರಾಜನಬಳಿಗೆ ಬಂದು ನಮಸ್ಕರಿಸಿ ಮುಂದಿನ ಕೆಲಸವನ್ನು ಅಪ್ಪಣೆಮಾಡ ಬೇಕೆಂದು ಪ್ರಾರ್ಥಿಸಿದನು. ಎಯೀಟೀಸಿನ ಮನಸ್ಸಿನಲ್ಲಿ ಅಗ್ನಿಪರ್ವತ ಗಳಿಂದ ಹೊರಡುವ ಶಿಲಾರಸವಾಹಿನಿಯಂತೆ ಭಯಂಕರವಾಗಿದ್ದ ಆಲೋಚ ನಾಪ್ರವಾಹವು ಹರಿಯುತ್ತಿದ್ದಿತು. ಆದರೂ ಅವನು ತನ್ನ ಮನೋವ್ಯ

ಕಾರವನ್ನು ಮರೆಸಿಕೊಂಡು ಮೀಡಿಯಾಳ ಕಡೆಗೆ ವಿಕೃತದೃಷ್ಟಿಯಿಂದ ಒಂದುಸಾರಿ ನೋಡಿ—"ಜೇಸನ್! ನೀನು ಈ ದಿನ ಬಹಳ ಸಾಹಸಮಾಡಿ ದಣಿದುಹೋಗಿರುವೆ. ನಿನ್ನನ್ನು ಮತ್ತೂ ದಣಿಸಲು ನನಗೆ ಇಷ್ಟವಿಲ್ಲ. ಮಿಕ್ಕ ಕೆಲಸವನ್ನು ನಾಳೆ ಮಾಡಬಹುದು. ಈದಿನ ನೀನೂ ನಿನ್ನ ಸಂಗಡಿಗರೂ ಅರಮನೆಗೆ ಬಂದು ನಮ್ಮ ಅತಿಥಿಗಳಾಗಿರಬೇಕು" ಎಂದು ಕಪಟ ವಿನಯದಿಂದ ಹೇಳಿ, ಅರಮನೆಯ ಕಡೆಗೆ ತನ್ನ ಪರಿವಾರಸಹಿತವಾಗಿ ಹೊರಟನು.

ಹದಿನೈದನೆಯ ಪ್ರಕರಣ.

ಕನಕೋತ್ಸರ್ಜನವೂ ಪಲಾಯನವೂ.

ಅಂದಿನ ಔತಣವು ಬಹು ವಿಜೃಂಭಣೆಯಿಂದ ನಡೆಯಿತು. ಆರ್ಗೋ ನಾವಿಕರೆಲ್ಲರೂ ಅದಕ್ಕೆ ಬಂದಿದ್ದರು. ಎಯೀಟೀಸನು ಅವರೆಲ್ಲರನ್ನೂ ಬಹಳ ಚೆನ್ನಾಗಿ ಆದರಿಸಿದನು. ಆದರೆ ಅವನ ಆಂತರ್ಯವು ಮೀಡಿಯಳಿಗೆ ಚೆನ್ನಾಗಿ ತಿಳಿದಿದ್ದಿತು. ನಾವಿಕರನ್ನು ನಂಬಿಸಿ ಅವರೆಲ್ಲರನ್ನೂ ಮಾರನೆಯದಿನ ಕೊಂದುಬಿಡಬೇಕೆಂದು ದುರಾತ್ಮನಾದ ಆ ರಾಜನು ನಿರ್ಧರಿಸಿಕೊಂಡಿದ್ದನು! ಮೀಡಿಯಳಿಗೂ ಘೋರವಾದ ಮರಣಶಿಕ್ಷೆಯನ್ನು ವಿಧಿಸಬೇಕೆಂದು ಅವನು ಮನಸ್ಸುಮಾಡಿದ್ದನು! ಈ ಆಲೋಚನೆಗಳೆಲ್ಲವೂ ಗೋಪ್ಯವಾಗಿ ನಡೆದಿದ್ದರೂ, ಮಾಟಗಾತಿಯಾದ ಮೀಡಿಯಳಿಗೆ ಅವನ್ನು ತಿಳಿದುಕೊಳ್ಳಲು ಅಸಾಧ್ಯವಾಗಲಿಲ್ಲ. ಆದರೂ ಅವಳು ಏನೂ ತಿಳಿಯದವಳಂತೆ ಇದ್ದುಕೊಂಡಿದ್ದಳು. ಔತಣವು ಮುಗಿದ ಬಳಿಕ ಜೇಸನ್ ಮೊದಲಾದವರನ್ನು ಕುರಿತು—"ಮಿತ್ರರುಗಳಿರಾ! ನೀವುಗಳು ನನ್ನ ಅಳಿಯನಾದ ಫ್ರಿಕ್ಸಸ್ಸನ ರಾಜ್ಯದಿಂದಲೇ ಬಂದಿರುವಿರಾದಕಾರಣ, ಕನಕೋರ್ಣವು ನಿಮ್ಮ ವಶವೇ ಆಗುವುದರಿಂದ ನನಗೆ ಪರಮಾನಂದವಾಗಿರುವುದು. ಅದನ್ನು ಇತರ ದೇಶದವರು ಸ್ವಾಧೀನಪಡಿಸಿಕೊಂಡಿದ್ದರೆ, ನಮ್ಮೆಲ್ಲರಿಗೂ ಬಹಳ ವ್ಯಸನ

ವಾಗುತ್ತಿದ್ದಿತು. ಕನಕಕೋಣವನ್ನು ಕಾದುಕೊಂಡಿರುವ ರೆಕ್ಕೆಯುಸರ್ಪ
ವೊಂದನ್ನು ಜಯಿಸಿಬಿಟ್ಟರೆ ನಿಮ್ಮ ಉದ್ದೇಶವು ಸಾರ್ಥಕವಾದಂತೆಯೇ.
ಆದರೆ ಅದಕ್ಕೆ ಬಹುಕಾಲದಿಂದಲೂ ಆಹಾರವಿಲ್ಲದಿರುವುದರಿಂದ, ಈಗ
ಅದಕ್ಕೆ ಆಹಾರೇಚ್ಛೆಯು ಪ್ರಬಲವಾಗಿರುವುದು. ಅದು ಹಿಂದೆ ಒಬ್ಬೊಬ್ಬ
ಆಳನ್ನು ಒಂದೊಂದು ಗುಟುಕಿಗೆ ನುಂಗುತ್ತಿದ್ದಿತು. ಈಗ ಅದು ಮೂವರು
ನಾಲ್ವರನ್ನಾದರೂ ಒಂದೇಸಲಕ್ಕೆ ನುಂಗಿಬಿಡುವುದು ನಿಜ. ನೀವುಗಳು
ಕನಕಕೋಣವನ್ನು ಸಂಪಾದಿಸಬೇಕೆಂದೇ ಎಷ್ಟೋ ಅಪಾಯಗಳನ್ನು ಲಕ್ಷಿ
ಸದೆ ಇಷ್ಟುದೂರ ಬಂದಿರುವುದರಿಂದ, ನಿಮಗೆ ಉತ್ಸಾಹಭಂಗವನ್ನುಂಟು
ಮಾಡಬೇಕೆಂದು ನನಗೆ ಮನಸ್ಸಿಲ್ಲ. ನಾಳೆಯದಿನ ಪ್ರಾತಃಕಾಲ ಕನಕಕೋ
ಣವಿರುವ ವನದಬಳಿಗೆ ನೀವುಗಳು ಬಂದು ಸಿದ್ಧವಾಗಿರಿ. ನಿಮ್ಮಲ್ಲಿ ಆಯು
ಸ್ಸುಗಟ್ಟಿಯಾಗಿರುವವನು ಯಾರಾದರೂ ಆ ಸರ್ಪವನ್ನು ಜಯಿಸಿದ ಪಕ್ಷ
ದಲ್ಲಿ ಕನಕಕೋಣವನ್ನು ಸಂತೋಷದಿಂದ ಅವನ ವಶಪಡಿಸುವೆನು"
ಎಂದು ಹೇಳಿ ಅತಿವಿನಯದಿಂದ ಅವರನ್ನು ದೊರೆಯು ಕಳುಹಿಸಿಕೊಟ್ಟನು.

ಗ್ರೀಕ್ ನಾವಿಕರು ಮಾರನೆಯದಿನ ಕನಕಕೋಣವು ತಮ್ಮ ವಶವಾಗಿ
ಹೋಗುವುದೆಂದು ವಿನೋದವಾಗಿ ಮಾತನಾಡಿಕೊಳ್ಳುತ್ತಾ ಆದಿನ ರಾತ್ರಿ
ಬಹಳ ಕಾಲದವರೆಗೂ ಎಚ್ಚರವಾಗಿಯೇ ಇದ್ದರು. ಸುಮಾರು ನಡುರಾತ್ರಿ
ಯಲ್ಲಿ ಮೀಡಿಯಳು ಹಡಗಿನಬಳಿಗೆ ಬಂದು "ಜೇಸನ್! ಜೇಸನ್!" ಎಂದು
ಎರಡುಸಾರಿ ಕೂಗಿದಳು. ಈ ಧ್ವನಿಯನ್ನು ಜೇಸನ್ನನು ಕೇಳಿ ಹಡಗಿನಿಂದ
ಹೊರಕ್ಕೆ ಬಂದನು ಅವನನ್ನು ಕರೆದು—"ನೀವುಗಳು ಪ್ರಯಾಣಕ್ಕೆ
ಕೂಡಲೆ ಸಿದ್ಧವಾಗಬೇಕು; ತಡಮಾಡಿದರೆ ಘೋರವಾದ ಅಪಾಯವು
ಸಂಭವಿಸೀತು!" ಎಂದು ಹೇಳಿದಳು. ಈ ಮಾತುಗಳನ್ನು ಕೇಳಿ ಜೇಸನ್ನಿ
ಗೆ ದಿಗ್ಭ್ರಮೆಯಾಯಿತು. ಆದುದರಿಂದ "ರಾಜಪುತ್ರಿ! ಇದೇನು ಹೀಗೆ
ಹೇಳುವೆ! ಎಣ್ಣೆ ಬರುವಹೊತ್ತಿಗೆ ಕಣ್ಣುಮುಚ್ಚಿಕೊಳ್ಳುವ ದಡ್ಡಗಾಣಿಗ
ನಂತೆ ನಾವೂ ಆಚರಿಸುವೆವೆಂದು ತಿಳಿದಿರುವೆಯಾ? ಎರಡು ಪ್ರಬಲವಾದ
ಗಂಡಗಳನ್ನು ಜಯಿಸಲು ಸಹಾಯಮಾಡಿ, ಕಡೆಗೆ ನಮ್ಮ ಮನೋರಥಕ್ಕೆ
ಭಂಗತರುವಂತೆ ಮಾತನಾಡುವೆಯಲ್ಲಾ!" ಎಂದು ಹೇಳಿದನು. ಆಗ ಆಕೆ
ಯು "ನನ್ನ ಗತಿಯು ಏನಾದರೂ ಆಗಲಿ. ನಿಮ್ಮ ಕಾರ್ಯವನ್ನೇನೋ

ಸಾಧಿಸಲು ಯತ್ನಿಸುವೆನು. ಹಡಗಿನಲ್ಲಿರುವ ಆರ್ಫಿಯಸ್ಸನು ತನ್ನ ವೀಣೆಯನ್ನು ತೆಗೆದುಕೊಂಡು ಕೂಡಲೆ ನಮ್ಮೊಡನೆ ಬರುವಂತೆ ತಿಳಿಸು. ನೀನೂ ಕೂಡಲೆ ಹೊರಡು" ಎಂದು ತ್ವರೆಪಡಿಸಿದಳು. ಮೀಡಿಯುಳ ದುಃಖಸೂಚಕವಾದ ಈ ಮಾತುಗಳನ್ನು ಕೇಳಿ "ಇದೇಕೆ ಹೀಗೆ ಹೇಳುವೆ? ನಿನಗೆ ಒದಗಬಹುದಾದ ಕಷ್ಟವು ಯಾವುದಾದರೂ ಇರುವುದೆ?" ಎಂದು ಜೇಸನ್ನನು ಕೇಳಿದನು ಅದಕ್ಕೆ ಆಕೆಯು "ನಮ್ಮ ತಂದೆಯು ಬಹಳ ಕ್ರೂರಿ; ಅವನು ನಿಮ್ಮನ್ನೆಲ್ಲಾ ನಾಳೆ ಕೊಲ್ಲಿಸಿ, ನನಗೂ ಕ್ರೂರವಾದ ಮರಣದಂಡನೆಯನ್ನು ವಿಧಿಸಬೇಕೆಂದಿರುವನು. ಆದುದರಿಂದ ನೀವು ಈ ರಾಜ್ಯದಿಂದ ಹೊರಟು ಹೋದ ಬಳಿಕ ನಾನು ಈ ಘೋರವಾದ ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ವಿಷವನ್ನು ಕುಡಿಯಬೇಕಾಗುವುದು; ಇಲ್ಲವೇ ದೇಶಾಂತರಕ್ಕಾದರೂ ಹೋಗಬೇಕಾಗುವುದು. ಹೇಗೇ ಆದರೂ ನನ್ನನ್ನು ನೀನು ಮರೆಯುವುದಿಲ್ಲವಷ್ಟೆ?" ಎಂದು ಹೇಳಿದಳು. "ಪರದೇಶಕ್ಕೆ ಹೋಗುವುದಕ್ಕಿಂತ ನೀನೂ ನಮ್ಮೊಡನೆಯೇ ನಮ್ಮ ದೇಶಕ್ಕೆ ಬಂದುಬಿಡಬಹುದಲ್ಲಾ!" ಎಂದು ಜೇಸನ್ನನು ಹೇಳಲು, ಅದಕ್ಕೆ ಮೀಡಿಯುಳೂ ಸಮ್ಮತಿಸಿದಳು.

೯೪ ಬಳಿಕ ಮೀಡಿಯುಳು ಒಂದು ಭರಣಿಯನ್ನು ತನ್ನ ಮಡಿಲಿನಿಂದ ತೆಗೆದು ಜೇಸನ್ನಿಗೆ ಕೊಟ್ಟು "ಇದರಲ್ಲಿರುವ ಭಸ್ಮವನ್ನು ರೆಕ್ಕೆಯುಸರ್ಪದ ಮೇಲೆ ಹಾಕಿದರೆ ಅದಕ್ಕೆ ನಿದ್ದೆ ಬಂದುಬಿಡುವುದು. ಆರ್ಫಿಯುಸ್ಸನು ವೀಣೆಯನ್ನು ನುಡಿಸುವುದರಿಂದ ಅದಕ್ಕೆ ನಿದ್ದೆಯು ಮತ್ತಷ್ಟು ಚೆನ್ನಾಗಿ ಹಿಡಿಯುವುದು. ರೆಕ್ಕೆಯುಸರ್ಪವು ಕ್ರೂರವಾದುದಾದರೂ, ಅದನ್ನು ಕೊಲ್ಲುವ ಶಕ್ತಿಯು ನನಗೆ ಇದ್ದರೂ, ಅಂತಹ ಘೋರಪ್ರಾಣಿಗಳಿಂದಲೂ ಅನೇಕ ಕೆಲಸಗಳನ್ನು ನಮ್ಮಂತಹವರು ಸಾಧಿಸಲಾಗುವುದರಿಂದ ಅದನ್ನು ಉಳಿಸುವೆನು. ನಾನೂ ನಿನ್ನೊಡನೆಯೇ ಉದ್ಯಾನಕ್ಕೆ ಬರುವೆನು. ಆರ್ಫಿಯುಸ್ಸನು ಮಾತ್ರ ಬಾಗಿಲಲ್ಲೇ ವೀಣೆಯನ್ನು ನುಡಿಸುತ್ತಿರಲಿ. ನೀನು ನಿನ್ನ ಸಂಗಡಿಗರೆಲ್ಲರನ್ನೂ ಪ್ರಯಾಣಕ್ಕೆ ಸಿದ್ಧರಾಗಿರುವಂತೆ ಎಚ್ಚರಿಸಿ, ಆರ್ಫಿಯುಸ್ಸನ್ನು ಕರೆದುಕೊಂಡು ಬಂದುಬಿಡು" ಎಂದು ತಿಳಿಸಿದಳು. ಸ್ವಲ್ಪಹೊತ್ತಿನಲ್ಲೇ ಜೇಸನ್ನನು ಆರ್ಫಿಯುಸ್ಸಿನೊಡನೆ ಹಿಂದಿರುಗಿದನು; ಅವರು ಮೂವರೂ ತತ್‌ಕ್ಷಣವೇ ಕನಕೋರ್ಣವಿದ್ದ ಉದ್ಯಾನಕ್ಕೆ ಹೊರಟರು.

೯೪. ಉದ್ಯಾನವು ಸಮೀಪಿಸುತ್ತಲೇ ಮೀಡಿಯಳು ಮೇಣೆಯನ್ನು ನುಡಿಸುವಂತೆ ಆರ್ಫಿಯಸ್ಸಿಗೆ ಹೇಳಿ ಅವನನ್ನು ಉದ್ಯಾನದ ಬಾಗಿಲಲ್ಲಿ ನಿಲ್ಲಿಸಿದಳು. ಬಳಿಕ ಅವಳು ಏನೋ ಮಂತ್ರಗಳನ್ನು ಪಿಸುಗುಟ್ಟಿಕೊಳ್ಳುತ್ತಾ ಜೇಸನ್ನನ್ನೂ ಕರೆದುಕೊಂಡು ಉದ್ಯಾನವನ್ನು ಪ್ರವೇಶಿಸಿದಳು. ದೂರದಲ್ಲಿ ಒಂದು ಮರದಮೇಲೆ ಕನಕೋರ್ಣದ ಹೊಂಬಣ್ಣವು ಥಳಥಳಿಸುತ್ತಿದ್ದಿತು; ಆ ಮರದ ಬುಡದಲ್ಲಿ ಒಂದು ವಿಜಾತೀಯವಾದ ಸರ್ಪವು ತನ್ನ ಮೈಯ ಸುರಳಿಗಳನ್ನು ಬಗೆಬಗೆಯಾಗಿ ಅಲ್ಲಾಡಿಸುತ್ತಾ ಗಟ್ಟಿಯಾಗಿ ಉಸಿರು ಬಿಡುತ್ತಾ ಇದ್ದಿತು. ಅದಕ್ಕೆ ರೆಕ್ಕೆಗಳೂ, ಬಲವಾದ ಉಗುರುಗಳಿದ್ದ ಕಾಲುಗಳೂ ಇದ್ದುವು. ಮೈಮೇಲೆಲ್ಲಾ ತಳುವಾದ ಮೂಳೆಯಚಕ್ಕೆಗಳಿದ್ದುವು. ಅದರ ಕವಲುನಾಲಗೆಯು ಕ್ಷಣಕ್ಷಣಕ್ಕೂ ಹಿಂದಕ್ಕೂ ಮುಂದಕ್ಕೂ ಅತ್ತಕಡೆಗೂ ಇತ್ತಕಡೆಗೂ ಚಲಿಸುತ್ತಿದ್ದಿತು; ಅದರ ಕಣ್ಣುಗಳು ದೊಡ್ಡ ಮಾಣಿಕ್ಯಗಳಂತೆ ಕೆಂಪಗೆ ಬೆಳಗುತ್ತಿದ್ದುವು. ಆ ಸರ್ಪವನ್ನು ನೋಡಿದ್ದರೆ ಸಾಮಾನ್ಯರು ಅಲ್ಲಿಂದಲೇ ಹಿಂದಕ್ಕೆ ಓಡಿಹೋಗುತ್ತಿದ್ದರೆಂದು ನಿಸ್ಸಂಶಯವಾಗಿ ಹೇಳಬಹುದು. ಅದು ತನ್ನ ಅವಲಕ್ಷಣವಾದ ಮೋರೆಯನ್ನು ದಿಕ್ಕುದಿಕ್ಕಿಗೂ ಚಾಚುತ್ತಾ ತನ್ನಬಳಿಗೆ ಯಾರು ಬರುತ್ತಿರುವರೋ ನೋಡಬೇಕೆಂದು ಪ್ರಯತ್ನಿಸುತ್ತಿದ್ದಿತು. ಒಂದುಸಲ ಅದು ಜೇಸನ್ನಿನ ಕಡೆಗೂ ಮೂತಿಯನ್ನು ಚಾಚಿ ತಟ್ಟನೆ ಹಿಂದಕ್ಕೆ ಎಳೆದುಕೊಂಡು, ಹೊಸಬನಾದ ಅವನನ್ನು ನುಂಗಿಬಿಡಬೇಕೆಂದು ತನ್ನ ಬಾಯನ್ನು ಅಗಲವಾಗಿ ತೆರೆದುಕೊಂಡು ಅವನ ಬಳಿಗೆ ಮತ್ತೊಮ್ಮೆ ರಭಸದಿಂದ ಚಾಚಿತು. ಇದಕ್ಕೆ ಜೇಸನ್ನನು ಸಿದ್ಧವಾಗಿಯೇ ಇದ್ದನು. ತನ್ನ ಬಳಿಗೆ ಮೂತಿಯು ಬಂದ ಸಮಯವನ್ನು ನೋಡಿಕೊಂಡಿದ್ದು, ಮೀಡಿಯಳು ತನಗೆ ಕೊಟ್ಟಿದ್ದ ಭಸ್ಮವನ್ನು ಅದರ ಬಾಯಿಗೆ ಹಾಕಿಬಿಟ್ಟನು. ಆ ಭಸ್ಮವು ಪ್ರೊಮೀಥಿಯಸ್ಸಿನ ಯಕೃತ್ತಿನ ಮೊತ್ತಮೊದಲನೆಯ ರಕ್ತಬಿಂದುವು ಯಾವಸ್ಥಳದಲ್ಲಿ ಬಿದ್ದಿದ್ದಿತೋ ಅದೇ ಸ್ಥಳದಲ್ಲಿ ಬೆಳೆದ ಒಂದು ಮೂಲಿಕೆಯದು. ಮೀಡಿಯಳು ಆ ಮೂಲಿಕೆಯನ್ನು ಉಚಿತ ಸಮಯದಲ್ಲಿ ಮಂತ್ರಪೂರ್ವಕವಾಗಿ ಕಿತ್ತುತಂದು ಅದಕ್ಕೆ ಅಸಹ್ಯಕರವಾದ ಕೆಲವು ಪದಾರ್ಥಗಳನ್ನು ಸೇರಿಸಿ ಆ ಭಸ್ಮವನ್ನು ಸಿದ್ಧಪಡಿಸಿದ್ದಳು. ಭಸ್ಮವು ಬಾಯಿಗೆ ಬಿದ್ದಕೂಡಲೆ ಸರ್ಪವು ತನ್ನ ತಲೆಯನ್ನು ತಟ್ಟನೆ ಹಿಂದಕ್ಕೆ

ಎಳೆದುಕೊಂಡುಬಿಟ್ಟಿತು ; ಅದರ ನಾಲಗೆಯು ಚಲನವು ನಿಂತಿತು ; ಅದರ ಕಣ್ಣುಗಳ ಕಾಂತಿಯು ಮಂದವಾಗುತ್ತ ಬಂದು, ಸ್ವಲ್ಪ ಹೊತ್ತಿನಲ್ಲೇ ಅದೃಶ್ಯವಾಯಿತು ; ಅದರ ಸುರುಳಿಗಳ ಚಲನೆಯೆಲ್ಲವೂ ನಿಂತುಹೋಯಿತು. ಈ ಸಮಯದಲ್ಲಿ ಮೀಡಿಯಳು ಜೇಸನ್ನನ್ನು ಕುರಿತು—“ಜೇಸನ್ ! ಅಗೋ ! ಅಲ್ಲಿರುವ ಕನಕೋರ್ಣವನ್ನು ತೆಗೆದುಕೋ ; ಈಗಲೇ ಹೊರಡೋಣ. ತಡಮಾಡಿದರೆ ಇನ್ನು ಸ್ವಲ್ಪಹೊತ್ತಿನೊಳಗಾಗಿ ಸರ್ಪಕ್ಕೆ ಎಚ್ಚರವಾಗುವುದು. ಬಳಿಕ ನಮ್ಮ ಸಾಹಸದಿಂದ ಪ್ರಯೋಜನವಾಗದು” ಎಂದು ಹೇಳಿದಳು. ಜೇಸನ್ನನು ಅದೇಮೇರೆಗೆ ಮುಂದೆ ನುಗ್ಗಿ ಕ್ಷಣಮಾತ್ರದಲ್ಲಿ ಕನಕೋರ್ಣವನ್ನು ತೆಗೆದುಕೊಂಡು ಅದನ್ನು ತನ್ನ ಹೆಗಲಮೇಲೆ ಹಾಕಿಕೊಂಡನು. ಆಗ ಅವನ ಮನಸ್ಸಿನಲ್ಲಿ ಉಂಟಾದ ಸಂತೋಷರಸವು ಹೊರಕ್ಕೆ ಏನಾದರೂ ಹರಿದು ಬರುತ್ತಿದ್ದಿತೋ ಎಂಬಂತೆ ಅವನ ಸುತ್ತಲೂ ಹೊಂಬಣ್ಣದ ಕಾಂತಿಯು ಪ್ರಸರಿಸುತ್ತಿದ್ದಿತು.

೯೬. ಜೇಸನ್ನನೂ ಮೀಡಿಯಳೂ ಹಿಂದಿರುಗುವುದನ್ನೇ ಆರ್ಗಯಸ್ಸನು ನಿರೀಕ್ಷಿಸುತ್ತಿದ್ದನು. ಅವರು ಸಮೀಪಿಸುತ್ತಲೇ ಮೂವರೂ ಬೇಗಬೇಗನೆ ಹಡಗಿನ ಬಳಿಗೆ ಬಂದರು. ನಾವಿಕರೆಲ್ಲರೂ ಪ್ರಯಾಣಕ್ಕೆ ಸನ್ನದ್ಧರಾಗಿ ತಮ್ಮತಮ್ಮ ಸ್ಥಾನದಲ್ಲಿ ಕುಳಿತು ಹುಟ್ಟುಗಳನ್ನು ಆಡಿಸುವುದಕ್ಕೆ ಸಿದ್ಧರಾಗಿದ್ದರು. ಜೇಸನ್ ಮುಂತಾದವರು ದೋಣಿಯಲ್ಲಿ ಕಾಲಿಟ್ಟಕೂಡಲೆ ಹುಟ್ಟುಗಳು ಏಕಕಾಲದಲ್ಲಿ ನೀರಿನಲ್ಲಿ ಚಲಿಸಲಾರಂಭಿಸಿದುವು ; ಅನುಕೂಲ ಮಾರುತವು ಬೀಸುತ್ತಿದ್ದುದರಿಂದ ದೋಣಿಯು ಬೇಗಬೇಗನೆ ಪಶ್ಚಿಮಾಭಿಮುಖವಾಗಿ ಚಲಿಸಿತು ; ತೀರಗಳಲ್ಲಿದ್ದ ಗಿಡಮರಗಳು ಬೇಗಬೇಗನೆ ಪೂರ್ವದಿಕ್ಕಿಗೆ ಓಡುತ್ತಿದ್ದಂತೆ ನಕ್ಷತ್ರಗಳ ಬೆಳಕಿನಲ್ಲಿ ತೋರುತ್ತಿದ್ದುವು. ನಾವಿಕರು ಕನಕೋರ್ಣದ ಖ್ಯಾತಿಯನ್ನು ವರ್ಣಿಸುವ ಗಾನಗಳನ್ನು ಹಾಡಿಕೊಳ್ಳುತ್ತಾ ಮುಂದುಮುಂದಕ್ಕೆ ಹೊರಟರು.

ಹದಿನಾರನೆಯ ಪ್ರಕರಣ.

ಆರ್ಗೋನಾವಿಕರು ಗ್ರೀಸಿಗೆ ಹಿಂದಿರುಗಿದುದು.

ಆರ್ಗೋ ನಾವಿಕರು ಕೆಲವು ನಿಮಿಷಗಳು ಪ್ರಯಾಣಮಾಡು ವುದರೊಳಗಾಗಿ ಅವರಿಗೆ ಘೋರವಾದ ಮೊರೆತವೊಂದು ಕೇಳಿಸಿತು. ಕೂಡಲೆ ಸಮುದ್ರತೀರದಲ್ಲಿ ದೀಪದ ಪಂಜುಗಳು ಅತ್ತಿತ್ತ ವೇಗವಾಗಿ ಚಲಿಸಲಾರಂಭವಾದುವು; ಮನುಷ್ಯರ ಕೂಗಿನ ಗದ್ದಲವೂ ಅಸ್ಪಷ್ಟವಾಗಿ ಕೇಳಬರುತ್ತಿದ್ದಿತು. ಮೇಲೆಹೇಳಿದ ಮೊರೆತವು ರೆಕ್ಕೆಯ ಸರ್ಪದಿಂದ ಆದುದು. ಜೇಸನ್ ಮೊದಲಾದವರು ಉದ್ಯಾನವನ್ನು ಬಿಟ್ಟ ಕೆಲವು ನಿಮಿಷಗಳೊಳಗಾಗಿ ಸರ್ಪಕ್ಕೆ ಎಚ್ಚರವಾಯಿತು. ಕನಕೋರ್ಣ ವಿದ್ದ ಕಡೆಗೆ ತಿರುಗಿನೋಡಿದಾಗ ಅದು ಕಾಣಬಾರದಿರಲು, ಸರ್ಪವು ರಭಸ ದಿಂದ ತನ್ನಬಾಲವನ್ನೂ ತಲೆಯನ್ನೂ ನೆಲಕ್ಕೆ ಅಪ್ಪಳಿಸುತ್ತಾ, ಗಟ್ಟಿಯಾಗಿ ಉಸಿರುಬಿಡುತ್ತಿದ್ದಿತು. ಈ ಗದ್ದಲದಿಂದ ಎಮೀದ್ವೀಪದ ನಿವಾಸಿಗಳೆಲ್ಲ ರಿಗೂ ಎಚ್ಚರವಾಯಿತು; ಹೆಂಗಸರುಮಕ್ಕಳು ಭಯದಿಂದ ಕಿರಚಿ ಕೊಂಡರು. ಕೂಡಲೆ ಆರ್ಗೋನಾವಿಕರನ್ನು ಬೆನ್ನಟ್ಟುವ ಪ್ರಯತ್ನಗಳು ನಡೆದುವು. ಅನೇಕ ದೋಣಿಗಳು ಆರ್ಗೋನಾವೆಯನ್ನು ಹಿಂಬಾಲಿಸಿದುವು.

೯೮. ಇದನ್ನು ಮೀಡಿಯಳು ಕಂಡು ಜೇಸನ್ನನ್ನು ಕುರಿತು ಈ ಮೇರೆಗೆ ಸಂಭಾಷಿಸಿದಳು:—"ಜೇಸನ್! ಈಗ ಒದಗಿರುವ ಗಂಡವು ಅತ್ಯಂತ ಕಠಿನವಾದುದು. ನಮ್ಮಲ್ಲಿ ಯಾರೇ ಆಗಲಿ ನಮ್ಮ ತಂದೆಯಕೈಗೆ ಸಿಕ್ಕಿಬಿದ್ದರೆ ನರಕದ ಯಾತನೆಗಳೆಲ್ಲವನ್ನೂ ಈ ಲೋಕದಲ್ಲೇ ನಮಗೆ ಉಂಟುಮಾಡಿ ಅತ್ಯಂತ ಕ್ರೂರವಾದ ಶಿಕ್ಷೆಯನ್ನು ವಿಧಿಸುವನು. ಮಗಳ ವೈಧವ್ಯಕ್ಕೂ ಲಕ್ಷಿಸದೆ ಫ್ರಿಕ್ಸಸ್ಸನ್ನು ವಧಿಸಿ, ನಿರಪರಾಧಿಗಳಾದ ಅವನ ಮಕ್ಕಳುಗಳನ್ನೂ ಕೊಲ್ಲಿಸಲು ಯತ್ನಿಸಿದ್ದುದು ನಿನಗೆ ತಿಳಿದೇ ಇರುವುದು. ಅವನ ಬಳಿಯಲ್ಲಿ ಸಾಹಸಿಗಳಾದ ಅನೇಕರು ಯೋಧರು ಇರುವುದರಿಂದ ನೀವು ನಲವತ್ತೊಂಬತ್ತು ಮಂದಿಗಳೂ ಶೌರ್ಯದಿಂದಲೇ ನಮ್ಮತಂದೆಯನ್ನು

ಗೆದ್ದುಬಿಡುವೆವೆಂಬ ಭ್ರಮೆಯನ್ನು ಇಟ್ಟುಕೊಳ್ಳಬೇಡಿ. ಅಗೋ ಮುಂದೆ ಬರುತ್ತಿರುವವನೇ ನನ್ನ ತಮ್ಮನಾದ ಅಬ್ಸಿರ್ಟಸ್ಸನು. ನಮ್ಮ ಈ ವಿಪತ್ತಿನಲ್ಲಿ ದೇವತೆಗಳಿಗೆ ಸಮ್ಮತವಲ್ಲದ ಕ್ರೂರಕೃತ್ಯವೊಂದನ್ನು ಮಾಡಿಬಿಡುವೆನು......'' ಎಂದು ಹೇಳುವಷ್ಟರಲ್ಲಿ ಜೇಸನ್ನನು ಅವಳನ್ನು ತಡೆಯಬೇಕೆಂದು ಯತ್ನಿಸುತ್ತಿದ್ದನು. ಆದರೆ ಶತ್ರುಗಳು ಬಹಳ ಸಮೀಪಕ್ಕೆ ಬಂದಿದ್ದರು. ಅವರನ್ನು ನಿಗ್ರಹಿಸಲು ಏರ್ಪಾಡುಮಾಡುವುದರೊಳಗಾಗಿ ಆರ್ಗೋದೋಣಿಗೆ ಬಹಳ ಸಮೀಪಕ್ಕೆ ಬಂದಿದ್ದ ಅಬ್ಸಿರ್ಟಸ್ಸನ್ನು ಅವನ ಸಹೋದರಿಯು ರೌದ್ರಾವೇಶದಿಂದ ಛಿದ್ರಛಿದ್ರವಾಗಿ ಕತ್ತರಿಸಿ ಬಿಟ್ಟಿದ್ದಳಲ್ಲದೆ ಅವನ ಮೈಯ ತುಂಡುಗಳನ್ನು ಸಮುದ್ರದ ಮೇಲೆ ದಿಕ್ಕುದಿಕ್ಕಿಗೆ ಎಸೆದು ಬಿಟ್ಟಳು. ಮತ್ತೆ ಕೆಲವು ಕ್ಷಣಗಳಲ್ಲೇ ಅಲ್ಲಿಗೆ ಬಂದ ಏಯೀಟೀಸನು ಆ ಕಾಲದ ಪದ್ಧತಿಯಂತೆ ಮೃತನ ಅಂತ್ಯಸಂಸ್ಕಾರವಾಗುವ ವರೆಗೂ ಪ್ರತೀಕಾರ ಕಾರ್ಯವನ್ನು ತಡೆಯಬೇಕೆಂದು ತನ್ನ ಕಡೆಯವರಿಗೆ ಆಜ್ಞಾಪಿಸಿದನು. ಬಳಿಕ ಅವರು ಮೃತನ ದೇಹಭಾಗಗಳನ್ನು ಒಟ್ಟುಗೂಡಿಸುವ ಪ್ರಯಾಸಕಾರ್ಯದಲ್ಲಿ ಪ್ರವೃತ್ತರಾದರು. ಉತ್ತರಕ್ರಿಯೆಗಳು ಮುಗಿಯುವಷ್ಟರಲ್ಲಿ ಏಯೀಟೀಸಿನ ರಾಜ್ಯವನ್ನು ಶತ್ರುಗಳು ಆಕ್ರಮಿಸಿಕೊಂಡು ಅವನನ್ನು ಕೊಂದು ಬಿಟ್ಟರು.

೯೯. ಇತ್ತ ಜೇಸನ್ನನು ಮೀಡಿಯಳ ಕ್ರೌರ್ಯವನ್ನು ಕಂಡು ಅಸಹ್ಯಪಟ್ಟುಕೊಂಡಿದ್ದನು. ಆದರೆ ಅವಳು ಕನಕಲೋಮಾರ್ಜನಕಾರ್ಯದಲ್ಲಿ ತನಗೆ ಸಹಾಯಮಾಡಿದ್ದುದನ್ನೂ, ಅವಳನ್ನು ಗ್ರೀಸಿಗೆ ಕರೆದುಕೊಂಡುಹೋಗುವುದಾಗಿ ವಾಗ್ದಾನಮಾಡಿದ್ದುದನ್ನೂ ಜ್ಞಾಪಿಸಿಕೊಂಡು ಅವಳನ್ನು ನಿಷ್ಠುರವಾಗಿ ದಂಡಿಸದೆ ಸುಮ್ಮನಿದ್ದನು. ಮಾಯಗಾತಿಯಾದ ಆ ಸ್ತ್ರೀಯು ಆರ್ಗೋನಾವಿಕರಿಗೆ ವಿನೋದಕರವಾದ ಅನೇಕ ಕಥೆಗಳನ್ನು ಹೇಳುತ್ತಾ ಅಲ್ಲಲ್ಲಿ ಕಂಡುಬಂದ ದೃಶ್ಯಗಳನ್ನು ಸರಸವಾಗಿ ವರ್ಣಿಸಿ ತಿಳಿಸುತ್ತಾ ಆಗಾಗ ಸಂಭವಿಸಿದ ವಿಪತ್ತುಗಳಲ್ಲಿ ಅವಕ್ಕೆ ಪರಿಹಾರವನ್ನು ಸೂಚಿಸುತ್ತಾ ಆರ್ಗೋನಾವಿಕರೆಲ್ಲರನ್ನೂ ಮೆಚ್ಚಿಸಿಬಿಟ್ಟಳು. ಆದರೆ ಧರ್ಮಪರರಾದ ದೇವತೆಗಳನ್ನು ಮಾತ್ರ ಅವಳು ಮೆಚ್ಚಿಸಲಾರದೆ ಹೋದಳು. ಅವಳ ಪಾಪದ ಫಲವನ್ನು ಅವಳ ಜೊತೆಯಲ್ಲಿದ್ದ ಆರ್ಗೋನಾವಿಕರೂ ಸ್ವಲ್ಪ ಕಾಲದವರೆಗೆ ಅನುಭವಿಸಬೇಕಾಯಿತು.

೧೦೦. ಆರ್ಗೋನಾವೆಯು ಸ್ವಲ್ಪದೂರ ಹೋಗುವುದರೊಳಗಾಗಿ ಪ್ರತಿಕೂಲಮಾರುತಗಳು ಬೀಸಲಾರಂಭಿಸಿದುವು. ನಾವಿಕರು ಎಷ್ಟೆಷ್ಟೋ ಪ್ರಯತ್ನಿಸಿದರೂ ಆರ್ಗೋನಾವೆಯು ಮುಂದಕ್ಕೆ ಹೋಗದೆ ಯಾವುದೋ ಒಂದು ನದೀಮುಖಕ್ಕೆ ಬಂದುಸೇರಿತು. ಆ ನದಿಯ ಮೇಲ್ಗಡೆಗೆ ಸ್ವಲ್ಪ ಕಾಲ ಪ್ರಯಾಣಮಾಡಿದ ಬಳಿಕ ದೋಣಿಯು ಮುಂದಕ್ಕೆ ಹೋಗಲಾರ ದಷ್ಟು ಮಟ್ಟಿಗೆ ಪ್ರವಾಹವು ಕಿರಿದಾದುದರಿಂದ, ದೋಣಿಯನ್ನು ಹೊತ್ತುಕೊಂಡೇ ಕೆಲವು ದಿನಗಳ ವರೆಗೂ ನಾವಿಕರು ಪ್ರಯಾಣಮಾಡಿಕೊಂಡು ಹೋದರು. ಇಷ್ಟರಲ್ಲಿ ಹೆರ್‍ಕ್ಯುಲಿಸನೂ ಬಂದು ನಾವಿಕರನ್ನು ಸೇರಿಕೊಂಡನು. ಅವರು ಬಳಿಕ ಇನ್ನೊಂದು ನದಿಯಮೇಲೆ ಪ್ರಯಾಣಮಾಡಿ ಬಂದು ಸಮುದ್ರಕ್ಕೆ ಹೋಗಿ ಯಾವಾಗಲೂ ಕಾಣದಿದ್ದ ಆ ಸಮುದ್ರದ ಅಂಚಿನಲ್ಲಿಯೇ ಅನೇಕ ತಿಂಗಳುಗಳ ವರೆಗೆ ಪ್ರಯಾಣಮಾಡಿ ಕಡೆಗೆ ಬಂದಾನೊಂದು ದ್ವೀಪಕ್ಕೆ ಬಂದರು. ಆ ದ್ವೀಪವು ಸಾಗರಮೋಹಿನಿಯರಿಗೆ ವಾಸಸ್ಥಾನವಾಗಿದ್ದಿತು. ಅವರು ಮುಖದ ವಿಷಯದಲ್ಲಿ ಮಾತ್ರ ಮನುಷ್ಯಾಕೃತಿಯಾಗಿದ್ದರೇ ಹೊರತು, ಅವರ ಮಿಕ್ಕ ದೇಹವೆಲ್ಲಾ ಪಕ್ಷಿಗಳ ಆಕಾರವಾಗಿದ್ದುವು. ಅವರು ಆ ದ್ವೀಪದ ಬಳಿಗೆ ಬಂದ ನಾವಿಕರಿಗೆ ತಮ್ಮ ಅಲೌಕಿಕವಾದ ಗಾನದಿಂದ ಮೋಹವನ್ನುಂಟುಮಾಡಿ ಅವರ ಹಸಿವು ಬಾಯಾರಿಕೆಗಳನ್ನು ಹೋಗಲಾಡಿಸಿ ಸ್ತಂಭೀಭೂತರನ್ನಾಗಿ ಮಾಡಿಸಿ ಅವರನ್ನು ಕೊಂದುಬಿಡುತ್ತಿದ್ದರು. ಹೀಗೆ ಸತ್ತುಹೋದವರ ಅಸ್ಥಿಪಂಜರಗಳು ಬಿಳಚಿಕೊಂಡು ಸಮುದ್ರತೀರದಲ್ಲೆಲ್ಲಾ ಬಿದ್ದಿದ್ದುವು. ಆರ್ಫಿಯಸ್ಸನು ಆ ಸಮಯದಲ್ಲಿ ಆ ದೋಣಿಯಲ್ಲಿರದಿದ್ದರೆ ಆರ್ಗೋನಾವಿಕರ ಗತಿಯೂ ಹಾಗೆಯೇ ಆಗಿಹೋಗುತ್ತಿದ್ದಿತು. ಆದರೆ ಆರ್ಫಿಯಸ್ಸನು ತನ್ನ ಕೌಶಲ್ಯವನ್ನೆಲ್ಲಾ ವೆಚ್ಚಮಾಡಿ ಸಾಗರಮೋಹಿನಿಗಳ ಗಾನಕ್ಕಿಂತ ಮನೋಹರವಾದ ಗಾನಗಳನ್ನು ಹಾಡುತ್ತಾ ನುಡಿಸುತ್ತಾ ನಾವಿಕರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸಿ ಅವರ ವಿಪತ್ತನ್ನು ಹೋಗಲಾಡಿಸಿದನು. ಅಲ್ಲಿಂದ ಎಷ್ಟೋ ಸುತ್ತಿಕೊಂಡು ಸಿಸಿಲಿ ಎಂಬ ದ್ವೀಪದ ಬಳಿಗೆ ಬಂದರು. ಅದರ ಪೂರ್ವತೀರದ ಸಮೀಪದಲ್ಲಿದ್ದ ಎತ್ತರವಾದ ಒಂದು ಪರ್ವತಶಿಖರದಿಂದ ದಟ್ಟವಾದ ಕಪ್ಪನೆಯ ಹೊಗೆಯು ಎದ್ದು ಆ ಶಿಖರದ ಸುತ್ತಮುತ್ತಲೂ ಕತ್ತಲೆಯನ್ನುಂಟುಮಾಡು

ತ್ತಿದ್ದಿತು ; ಭೂಮಿಯೊಳಗೆ "ಗುಡು, ಗುಡು" ಎಂಬ ಶಬ್ದವು ಕೇಳಿಸು ತ್ತಿದ್ದಿತು. ಆಗ ನಾವಿಕರಲ್ಲಿ ಅನೇಕರು ತಮ್ಮ ಗುರುವಾದ ಷೈರನ್ನಿನ ಬೋಧನೆಯನ್ನು ನೆನೆದುಕೊಂಡು ಅದೇ ಪುರಾಣಪ್ರಸಿದ್ಧವಾದ "ಎಟ್ನಾ" ಎಂಬ ಜ್ವಾಲಾಮುಖಿಯೆಂದು ನಿರ್ಧರಿಸಿಕೊಂಡರು. ಗ್ರೀಕರ ಪುರಾಣದ ಒಂದು ಕಥೆಯ ಮೇರೆಗೆ ಆ ಜ್ವಾಲಾಮುಖಿಯ ಒಳಭಾಗದಲ್ಲೇ ಹೆಫೆಸ್ಟ ಸ್ಸಿನ ಕುಲುಮೆಗಳಲ್ಲಿ ಯಾವಾಗಲೂ ಕೆಲಸ ನಡೆಯುತ್ತಿದ್ದಿತಂತೆ! ಮತ್ತೊಂದು ಕಥೆಯ ಮೇರೆಗೆ ಆ ಜ್ವಾಲಾಮುಖಿಯೊಳಗಡೆಯಲ್ಲಿ ದೇವ ದೇವನು ಒಬ್ಬಾನೊಬ್ಬ ರಾಕ್ಷಸನನ್ನು ಬಂಧಿಸಿಬಿಟ್ಟಿದ್ದನಂತೆ! ಇಲ್ಲಿಂದ ಸ್ವಲ್ಪದೂರ ಪ್ರಯಾಣಮಾಡಿದ ಬಳಿಕ ಒಂದು ಜಲಸಂಧಿಯ ಬಳಿಗೆ ಬಂದರು. ಅದರ ಒಂದು ಪಾರ್ಶ್ವದಲ್ಲಿ ವಿಕಾರರೂಪವಾಗಿ ಹರಡಿಕೊಂಡಿದ್ದ ಒಂದು ಬಂಡೆಯೂ, ಮತ್ತೊಂದು ಪಾರ್ಶ್ವದಲ್ಲಿ ದಿನಕ್ಕೆ ಮೂರಾವೃತ್ತಿ ಭಯಂಕರ ವಾದ ರಭಸವನ್ನು ಪ್ರದರ್ಶಿಸುತ್ತಿದ್ದ ಒಂದುಸುಳಿಯೂ ಇದ್ದುವು. ಬಂಡೆಗೆ ಸಿಲ್ಲಾ ಎಂದೂ, ಸುಳಿಗೆ ಚಾರಿಬ್ಡಿಸ್ ಎಂದೂ ಹೆಸರುಗಳಿದ್ದುವು. ಅವುಗಳಿಗೆ ಸಿಕ್ಕದೆ ಸುರಕ್ಷಿತವಾಗಿ ತಪ್ಪಿಸಿಕೊಂಡು ಬಂದ ಹಡಗುಗಳೇ ಆ ಕಾಲದಲ್ಲಿ ಅಪೂರ್ವವಾಗಿದ್ದುವು. ಆದುದರಿಂದ ನಾವಿಕರೆಲ್ಲರೂ ಅವಕ್ಕೆ ಬಹಳ ಹೆದರು ತ್ತಿದ್ದರು. ಈ ಬಂಡೆಯು ಪೂರ್ವದಲ್ಲಿ ಒಬ್ಬ ಸುಂದರಿಯಾಗಿದ್ದಳಂತೆ. ಅವಳು ಸರ್ಸಿಯ ಅಸೂಯೆಗೆ ಗುರಿಯಾಗಿ ಬಂಡೆಯಾಗಿ ಮಾರ್ಪಟ್ಟಳೆಂದು ಆ ಕಾಲದಲ್ಲಿ ಕಥೆಯನ್ನು ಹೇಳಿಕೊಳ್ಳುತ್ತಿದ್ದರು.

೧೧೧. ಸುಳಿಬಂಡೆಗಳ ಗಂಡವನ್ನೂ ತಪ್ಪಿಸಿಕೊಂಡು ಆರ್ಗೋನಾವೆ ಯು, ಸರ್ಸಿಯು ವಾಸವಾಗಿದ್ದ ದ್ವೀಪಕ್ಕೆಬಂದಿತು. ಸಮುದ್ರತೀರದಲ್ಲೆಲ್ಲಾ ಹುಲಿ ಸಿಂಹ ಕರಡಿಗಳೂ ತೋಳಸಿವಂಗಿಗಳೂ ಇನ್ನೂ ಬಗೆಬಗೆಯ ಮೃಗ ಗಳೂ ವಿಕಾರವಾಗಿ ಅರಚುತ್ತಾ ಓಡಾಡುತ್ತಿದ್ದುವು. ಆದರೆ ಅವು ಮೀಡಿ ಯಳನ್ನು ಕಂಡಕೂಡಲೆ ತಮ್ಮ ಕೂಗುಗಳನ್ನು ನಿಲ್ಲಿಸಿ ಆ ನಾವಿಕರೊಡನೆ ಸರ್ಸಿಯ ಅರಮನೆಯ ಬಳಿಗೆ ಬಂದುವು. ಆ ಮೃಗಗಳೆಲ್ಲವೂ ಅಲ್ಲಿಗೆ ಬರುವುದಕ್ಕೆ ಮುಂಚೆ, ಮನುಷ್ಯರೇ ಆಗಿದ್ದುವೆಂದು ಮೀಡಿಯಳು ಜೇಸ ನ್ನಿಗೆ ತಿಳಿಸಿದಳು. ಸರ್ಸಿಯು ಒಳಗಿನಿಂದ ಬಂದು ಮೀಡಿಯಳನ್ನೂ ಅವಳ ಸಂಗಡಿಗರನ್ನೂ ಆದರದಿಂದ ಬರಮಾಡಿಕೊಂಡಳು ಅಭ್ಯರ್ಥಸ್ಸನ್ನು ಮೀಡಿ

ಯುಳು ಕೊಂದುಹಾಕಿದ್ದ ವೃತ್ತಾಂತವನ್ನು ಸರ್ಸಿಯು ತತ್ಕ್ಷಣವೇ ತಿಳಿದುಕೊಂಡಿದ್ದರೂ, ಅತಿಥಿಸತ್ಕಾರಗಳನ್ನು ಮಾಡುವುದಕ್ಕೂ ಮೊದಲೇ ಆ ಸುದ್ದಿಯನ್ನೆತ್ತಲು ಇಚ್ಛೆಸದೆ ಸತ್ಕಾರಕಾರ್ಯಗಳಲ್ಲಿ ಆಕೆಯು ನಿರತಳಾಗಿದ್ದಳು. ಆದರೆ ಆಕೆಯ ಮನೋಭಿಪ್ರಾಯವು ಮೀಡಿಯುಳಿಗೆ ತಿಳಿಯದಿರಲಿಲ್ಲ. ಆದುದರಿಂದ ಅವಳು ಜೇಸನ್ನಿಗೆ ಸನ್ನೆಮಾಡಿ ಅಗ್ನಿಸ್ಥಾನದ ಬಳಿಗೆ ಅವನನ್ನೂ ತಟ್ಟನೆ ಕರೆದುಕೊಂಡು ಹೋಗಿ ಅಲ್ಲಿದ್ದ ಬೂದಿಯನ್ನು ಬಳಿದುಕೊಳ್ಳುವಂತೆ ಹೇಳಿ ತಾನೂ ಹಾಗೆಯೇ ಮಾಡಿದಳು. ಪ್ರತೀಕಾರೇಚ್ಛೆಗಳಿಂದ ತಪ್ಪಿಸಿ ರಕ್ಷಿಸಬೇಕೆಂದು ಪ್ರಾರ್ಥಿಸಿಕೊಳ್ಳಬೇಕೆಂದಿದ್ದವರು ಹೀಗೆ ಮಾಡುತ್ತಿದ್ದುದು ಗ್ರೀಕರಲ್ಲಿ ಪದ್ಧತಿಯಾಗಿದ್ದಿತು. ಸರ್ಸಿಯು ಅವರ ಆ ಕಾರ್ಯವನ್ನು ಕಂಡು ಕನಿಕರದಿಂದ ಅವರ ಕೈಯಲ್ಲಿ ಕೆಲವು ಪ್ರಾಯಶ್ಚಿತ್ತಕರ್ಮಗಳನ್ನು ಮಾಡಿಸಿದಳು. ಅವುಗಳಿಂದ ದೇವತೆಗಳ ಕೋಪವು ಸ್ವಲ್ಪ ಶಾಂತವಾದರೂ, ಜೇಸನ್ನನೂ ಮೀಡಿಯುಳೂ ದಂಪತಿಗಳಾದಾಗ, ಅವರ ದಾಂಪತ್ಯವು ಚಿರಕಾಲ ನಡೆಯಲಿಲ್ಲ. ಸರ್ಸಿಯು ನಾವಿಕರನ್ನು ಕುರಿತು "ನಿಮ್ಮ ಪ್ರಯಾಣವು ಇನ್ನು ಕೆಲವು ದಿನಗಳಲ್ಲೇ ಮುಗಿಯುವುದು; ಪೀಲಿಯಾಸನು ಈಗ ಅತ್ಯಂತ ಕ್ರೂರಿಯಾಗಿರುವನು: ಅವನು ಈಚೆಗೆ ಏಸನ್ನಿನ ಕಣ್ಣುಗಳನ್ನು ಕೀಳಿಸಿಬಿಟ್ಟಿರುವನು. ಆದರೆ ನನ್ನಿಂದ ಅನೇಕ ಮಣಿಮಂತ್ರೌಷಧಗಳನ್ನು ತಿಳಿದುಕೊಂಡಿರುವ ಈ ಮೀಡಿಯುಳು ಏಸನ್ನಿನ ಅಂಧತ್ವವನ್ನೂ ವಾರ್ಧಕ್ಯವನ್ನೂ ಹೋಗಲಾಡಿಸುವಳು" ಎಂದು ತಿಳಿಸಿ ಅವರನ್ನು ಕಳುಹಿಸಿಕೊಟ್ಟಳು.

೧೦೨. ಆರ್ಗೋನಾವಿಕರು ಬೇಗಬೇಗನೆ ಪಯಣಮಾಡಿಕೊಂಡು ಬಂದು ಕೆಲವು ದಿನಗಳೊಳಗಾಗಿ ಐಯೊಲ್ಕಸಿನ ಬಳಿಯ ಸಮುದ್ರತೀರಕ್ಕೆ ಬಂದರು. ಅವರನ್ನು ಇದಿರುಗೊಳ್ಳುವುದಕ್ಕೆ ಅಲ್ಲಿಯ ಜನರು ತಂಡತಂಡವಾಗಿ ಬಂದು ಕುತೂಹಲದಿಂದ ನೋಡುತ್ತಿದ್ದರು. ಪೀಲಿಯಾಸನಿಗೆ ಮನಸ್ಸಿಲ್ಲದಿದ್ದರೂ, ಅಪವಾದ ಬಂದೀತೆಂದು ಹೆದರಿ ಬಹಳ ಬೂಟಾಟಿಕೆಯಿಂದ ಜೇಸನ್ ಮೊದಲಾದವರನ್ನು ಆದರಿಸಿದನು. ಆದರೆ ಮೀಡಿಯುಳಿಗೆ ಅವನ ಮನಸ್ಸಿನಲ್ಲಿದ್ದ ಘೋರವಾದ ಆಲೋಚನೆಗಳೆಲ್ಲವೂ ಚೆನ್ನಾಗಿ ಗೊತ್ತಿದ್ದುವು. ಅವಳು ಅವುಗಳನ್ನು ಕುರಿತು ಜೇಸನ್ನಿಗೆ ರಹಸ್ಯವಾಗಿ ತಿಳಿಸಿದುದಲ್ಲದೆ ಪೀಲಿಯಾಸಿಗೆ ತಕ್ಕ ಶಿಕ್ಷೆಯನ್ನು ಶೀಘ್ರವಾಗಿಯೇ ಮಾಡುವುದಾ

ಗಿಯೂ ಹೇಳಿದಳು. ಏಸನ್, ಜೇಸನ್—ಇವರಿಬ್ಬರೂ ಹೆರ್ಯಾಕ್ಲಿಸ್ ಆರ್ಫಿಯುಸ್ ಮುಂತಾದ ಆರ್ಗೋ ನಾವಿಕರ ಉಪಕಾರವನ್ನು ಶ್ಲಾಘಿಸಿ ಅವರನ್ನು ಬಹಳ ಕೃತಜ್ಞತೆಯಿಂದ ವಂದಿಸಿ, ವಸ್ತ್ರಭೂಷಣಾದಿಗಳನ್ನು ಕೊಟ್ಟು ಅವರವರ ಊರುಗಳಿಗೆ ಕಳುಹಿಸಿಕೊಟ್ಟರು. ಮೀಡಿಯಳು ಉಪಾಯದಿಂದ ಪೀಲಿಯಾಸಿನ ಹೆಣ್ಣುಮಕ್ಕಳ ಸಹಾಯವನ್ನು ಪಡೆದು ಅವರ ಸಮಕ್ಷದಲ್ಲಿ ಏಸನ್ನನ್ನು ಮೂಲಿಕೆಗಳದ್ದ ಒಂದು ಕಡಾಯಿನಲ್ಲಿ ಬೇಯಿಸಿ ಅವನ ಅಂಧತೆಯನ್ನೂ ವಾರ್ಧಕ್ಯವನ್ನೂ ಹೋಗಲಾಡಿಸಿದಳು. ಪೀಲಿಯಾಸಿನ ಹೆಣ್ಣುಮಕ್ಕಳೂ ತಮ್ಮ ತಂದೆಯ ವಾರ್ಧಕ್ಯವನ್ನೂ ಹೋಗಲಾಡಿಸಬೇಕೆಂದು ಬೇಡಿಕೊಳ್ಳಲು, ಮೀಡಿಯಳು ಅವರಿಗೆ ಪೀಲಿಯಾಸನ್ನು ಕೊಂದು ಅವನ ದೇಹವನ್ನು ಕತ್ತರಿಸುವಂತೆ ಬೋಧಿಸಿದಳು. ಅವರು ಅದೇ ಪ್ರಕಾರ ಮಾಡಿದ ಬಳಿಕ ಅವಳು ಪೀಲಿಯಾಸಿಗೆ ಪ್ರಾಣಬರುವಂತೆ ಮಾಡದೆ ಹೋದುದರಿಂದ ಏಸನ್ನನೇ ಐಯಾಲ್ಕಾಸ್ ರಾಜ್ಯಕ್ಕೆ ಪುನಃ ದೊರೆಯಾದನು. ಜೇಸನ್ನನು ಬಹುಕಾಲದವರೆಗೆ ಭಕ್ತಿಯಿಂದ ಪಿತೃಶುಶ್ರೂಷೆಯನ್ನು ಮಾಡುತ್ತಾ ಅನೇಕ ಸಾಹಸಕಾರ್ಯಗಳನ್ನು ನೆರವೇರಿಸುತ್ತಾ ಎಲ್ಲರ ಗೌರವಕ್ಕೂ ಪಾತ್ರನಾಗಿದ್ದನು. ಅವನಿಗೂ ಕ್ರೂರಳಾದ ಮೀಡಿಯಳಿಗೂ ಸರಿಬಾರದೆ, ಮೀಡಿಯಳು ಐಯಾಲ್ಕಾಸನ್ನು ಬಿಟ್ಟು ಅಥೇನ್ಸ್ ಎಂಬ ಪ್ರಸಿದ್ಧವಾದ ಪಟ್ಟಣಕ್ಕೆ ಮಧ್ಯರಾತ್ರಿಯಲ್ಲಿ ಹೊರಟುಹೋದಳು. ಕೆಲವು ದಿನಗಳವರೆಗೂ ಅವಳ ಸಮಾಚಾರವೇ ಯಾರಿಗೂ ತಿಳಿಯದು. ಅವಳನ್ನು ಕುಳ್ಳಿರಿಸಿಕೊಂಡು ರೆಕ್ಕೆಯುಸರ್ಪಗಳು ಆಕಾಶದಲ್ಲಿ ಒಂದು ರಥವನ್ನು ಎಳೆದುಕೊಂಡು ಹೋಗುತ್ತಿದ್ದುದನ್ನು “ನಾನು ಕಂಡೆನು! ಅವನೂ ಕಂಡನು!” ಎಂದು ಐಯಾಲ್ಕಾಸಿನ ಕೆಲವರು ಮುದುಕರು ಮಾತನಾಡಿಕೊಳ್ಳುತ್ತಿದ್ದುದರಿಂದ ಮೀಡಿಯಳು ಎಲ್ಲಿಗೆ ಹೊರಟು ಹೋದಳೆಂಬುದು ಜನರೆಲ್ಲರಿಗೂ ತಿಳಿಯಿತು. ಆ ಕ್ರೂರಿಯಾದ ಮಾಯಗಾತಿಯು ತಮ್ಮ ರಾಜ್ಯದಿಂದ ಹೊರಟುಹೋದುದಕ್ಕಾಗಿ ಐಯಾಲ್ಕಾಸಿನ ಜನರೆಲ್ಲರೂ ಸಂತೋಷಿಸಿದರೇ ವಿನಾ ಯಾರೂ ವ್ಯಸನಪಡಲಿಲ್ಲ.

ಯವನಪುರಾಣ ಗ್ರಂಥಾವಳಿಯಲ್ಲಿ ಮೊದಲನೆಯ ಕಥೆಯು

ಸಂಪೂರ್ಣವು.

ಶುದ್ಧಿಪತ್ರಿಕೆ.

ಪುಟ.	ಪಙ್ಕ್ತಿ.	ಅಶುದ್ಧ	ಶುದ್ಧ.
೨	೧೭	ವಿಷಹು	ವಿಷಯು
೬	೧೨	ಸಂತೊಷೀ	ಸಂತೋಷ
೨೪	೨೦-೨೧	ಜೇಸನ್ನನ್ನು	ಜೇಸನ್ನನು
೨೭	೫	ಅನೇಕ	ಅನೇಕ
೩೮	೭-೧೧	ಪಾಲಕ್ಸಸನು	ಪಾಲಕ್ಸನು
೪೧	೧೧	ಒರ	ಬರ
೪೪	೧೨	ತುಂಬಿಕೊಂಡ	ತುಂಬಿಕೊಂಡು
೫೨	೧೮	ರೀರ	ರೀತಿ
೫೬	೨೭	ಅನೇ	(see below)

ಅನೇಕರು ಅಪಾಯಕ್ಕೆ ಸಿಕ್ಕಿ ಪ್ರಾಣವನ್ನು ಕಳೆದುಕೊಂಡಿರುವರು. ಒಂದುವೇಳೆ ಗೂಳಿಗಳು ತಿವಿದರೂ ನನ್ನ ತೈಲದ ಮಾಹಾತ್ಮ್ಯೆಯಿಂದ ನಿನಗೆ ಬಾಧೆಯೇನೂ ಆಗಲಾರದು. ಬಿತ್ತಿದ ಸ್ವಲ್ಪ ಹೊತ್ತಿನಲ್ಲೇ ಉದ್ಭವಿಸುವ ಯೋಧರ ನಡುವೆ ಒಂದು ದೊಡ್ಡಕಲ್ಲನ್ನು ಎಸೆದುಬಿಟ್ಟು ವಿನೋದವನ್ನು ನೋಡುತ್ತಿರು. ಈ ದೇವತೆಗೆ ನಮಸ್ಕರಿಸು ಕಾರ್ಯಕ್ಕೆ ಪ್ರವರ್ತಿಸು. ನಾನು ಹೇಳಿ[illegible]ಲ್ಲಿ ಯಾವುದನ್ನೂ ಮರೆಯಬೇಡ" ಎಂದು ಬೇಗಬೇಗನೆ ಪಿಸುಮಾತಿನಲ್ಲಿ ತಿಳಿಸಿದಳು. ಜೇಸನ್ನನು ಹಾಗೆಯೇ ಆ ದೇವತೆಗೆ ವಂದಿಸಿ ಹುಲ್ಲುಗಾವಲಿನ ಒಂದುಕಡೆ ಇದ್ದ ಹೆಬ್ಬಾಗಿಲಿನ ಬಳಿಗೆ ಬಂದನು.

೯೦. ಅಷ್ಟುಹೊತ್ತಿಗೆ ಹುಲ್ಲುಗಾವಲ ಸುತ್ತಲೂ ವಿನೋದವನ್ನು ನೋಡಲು ಜನರು ಕಿಕ್ಕಿರಿದು ತುಂಬಿಕೊಂಡಿದ್ದರು. ಜೇಸನ್ನನು ಹೆಬ್ಬಾಗಿಲ ಬಳಿಗೆ ಬರುವಹೊತ್ತಿಗೆ ಸರಿಯಾಗಿ ಎಯೀಟೀಸನೂ ತನ್ನಪರಿವಾರದೊಡನೆ ಬಂದು ಅಲ್ಲಿ ತನಗಾಗಿ ಏರ್ಪಡಿಸಿದ್ದ ಪೀಠದಲ್ಲಿ ಕುಳಿತನು. ಆಸ್ಥಾನಿಕರೂ

[ಈ ವಾಕ್ಯಗಳನ್ನು ಸೇರಿಸಿಕೊಳ್ಳ ಬೇ[illegible]]